ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 5 ಸಂಚಿಕೆ 11

ಮಾರ್ಚ್ 13, 2011

ಕನ್ನಡ ವಾರಪತ್ರಿಕೆ

ರೂ. 5/-

ಪುಟ 16

Blog :janashakthi.wordpress.com
e-mail : js_weekly@yahoo.com

ಬಾಬಾಬುಡನ್ ಗಿರಿ ಉರುಸ್ : ಸರ್ಕಾರಕ್ಕೆ ಕಪಾಳ ಮೋಕ್ಷ



ಜನ ಸಮುದಾಯದ ಸಂಪತ್ತಿನ ಲೂಟಿ ಹೊಡೆಯುವ ಸಾಧನವಾದ ಬಜೆಟ್‌ಗಳು




ಲಿಬಿಯಾ : ಮೂಗು ತೂರಿಸುತ್ತಿರುವ ತೈಲ ರಾಜಕೀಯ



ಚುನಾವಣೆಗಳು

ಉತ್ತಮ ಭಾರತದ ನಿರ್ಮಾಣಕ್ಕಾಗಿ ಎಡಪಕ್ಷಗಳ ಯಶಸ್ಸು ಅಗತ್ಯ



ಪಾವಗಡ : 'ಇನ್ಯಾರಿಗೆ ದೂರುವೆನಯ್ಯಾ?'

ಕೃಷಿ ಬಜೆಟ್ : ಚಿಂತನ - ಮಂಥನ

ಬಿಜಾಪೂರ : ಮಾಲಿಕರ ವಿರುದ್ಧ ಲಾರಿ ಹಮಾಲರ ದಿಟ್ಟ ಹೋರಾಟ

- ತೀವ್ರ ಬೆಲೆ ಏರಿಕೆ ಹಿನ್ನಲೆ ಪ್ರತಿ 2 ವರ್ಷಕ್ಕೊಮ್ಮೆ ಹಮಾಲಿ ದರ ಪರಿಷ್ಕರಣೆ ಬೇಡಿಕೆಗೆ ತಲೆ ಬಾಗಿದ ವ್ಯಾಪಾರಸ್ಥರು
- ಹಮಾಲಿ ದರಗಳ ನಿಗದಿ ಮಾಡಲು ಕಾರ್ಮಿಕ ಅಧಿಕಾರಿಗಳ, ಜಿಲ್ಲಾಧಿಕಾರಿಗಳ ಮಧ್ಯಸ್ಥಿಕೆ ಒಪ್ಪಿಗೆ

ಬೆಲೆಗಳು ಗಗನಕ್ಕೇರುತ್ತಿವೆ, ಬೆವರು ಸುರಿಸಿ ದುಡಿಯುವವರ ಕೂಲಿಗಳು ಮಾತ್ರ ಭೂಮಿಯಲ್ಲಿಯೇ ಬಂಧಿಯಾಗಿವೆ. ಮಣಭಾರದ ಮಾಲುಗಳನ್ನು ಮೈಮೇಲೆ ಹೊತ್ತು, ಎತ್ತಿಹಾಕಿ ಲಾರಿಯಲ್ಲಿ ನಿಟ್ಟುಮಾಡಿ ನಿಟ್ಟುಸಿರು ಬಿಡುತ್ತ ನಿತ್ಯ ರಟ್ಟೆಯ ಶಕ್ತಿಯನ್ನೇ ಬಂಡವಾಳವಾಗಿಸಿ ಬದುಕಲು ಹರಸಾಹಸ ಪಡುವ 'ಮಹಾಮಾಲಿ' ಹಮಾಲಿಗಳು ಮಾಲಿಕರ ಕುತಂತ್ರಗಳನ್ನು ಮೆಟ್ಟಿನಿಂತು ದಿಟ್ಟ ಹೋರಾಟ ನಡೆಸಿ ಯಶಸ್ವಿಯಾಗಿದ್ದಾರೆ ಐತಿಹಾಸಿಕ ನಗರಿ ವಿಜಾಪೂರದ ಲಾರಿ ಹಮಾಲರು.



ಕೆಲಸ ನಿರಾಕರಣೆ, ದಬ್ಬಾಳಿಕೆ:

ಫೆಬ್ರುವರಿ-21 ರಂದು ಮೇ॥ ಪೋರವಾಲ ಅಂಗಡಿಯಲ್ಲಿ ಲೋಡ್‌ಮಾಡಲು ಹೋದ ಹಮಾಲರನ್ನು ಹೆಚ್ಚಿಗೆ ಕೂಲಿ ಕೇಳಿದ್ದಕ್ಕಾಗಿ ಕೆಲಸ ನಿರಾಕರಿಸಿ ದಬ್ಬಾಳಿಕೆಯಿಂದ ಹೊರದಬ್ಬಲಾಯಿತು. ಸಿಟ್ಟಿಗೆದ್ದ ಲಾರಿ ಹಮಾಲರು ಈ ಘಟನೆ ವಿರೋಧಿಸಿ ನಗರದಾದ್ಯಂತ ಕೆಲಸ ಸ್ಥಗಿತಗೊಳಿಸಿ ಹೋರಾಟಕ್ಕೆ ಇಳಿದೇಬಿಟ್ಟರು. ಕೆಂಪು



ಸಮವಸ್ತ್ರ ಧರಿಸಿ ಸಾಮೂಹಿಕ ಅಡಿಗೆಮಾಡಿಕೊಂಡು ಹಗಲು ರಾತ್ರಿ ಕೋರಿ ಚೌಕನಲ್ಲಿ ಬೀಡುಬಿಟ್ಟರು.

ಧಿಡೀರ್ ಮುಷ್ಕರಕ್ಕೆ ಇನ್ನೊಂದು ಕಾರಣವಿತ್ತು: ಬೆಲೆ ಏರಿಕೆಯ ಈ ದಿನಗಳಲ್ಲಿ ಹಳೇ ಒಪ್ಪಂದದ ಕೂಲಿ ದರಗಳಲ್ಲಿ ಬದುಕಲು ಸಾಧ್ಯವಿಲ್ಲ, ಪ್ರತಿ 2 ವರ್ಷಕ್ಕೊಮ್ಮೆಯಾದರೂ ಕೂಲಿ ಪರಿಷ್ಕರಣೆ ವೈಜ್ಞಾನಿಕವಾಗಿ ಆಗಬೇಕೆಂದು ಹಮಾಲಿ ದರಗಳ ಬೇಡಿಕಾ ಪಟ್ಟಿಯನ್ನು ವ್ಯಾಪಾರಸ್ಥರ, ಟ್ರಾನ್ಸ್‌ಪೋರ್ಟ್ ಮಾಲಿಕರ ಸಂಘಗಳಿಗೆ, ಕಾರ್ಮಿಕ ಅಧಿಕಾರಿಗಳಿಗೆ ಫೆಬ್ರುವರಿ-2 ರಂದೇ ನೀಡಲಾಗಿತ್ತು. ಈ ಬೇಡಿಕೆಗೆ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ.

ಕಾರ್ಮಿಕ ಅಧಿಕಾರಿಗಳ ಸಭೆ ವಿಫಲ:

ಫೆಬ್ರುವರಿ-22 ರಂದು ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಜಿಲ್ಲಾಧಿಕಾರಿಗಳು, ಕಾರ್ಮಿಕ ಅಧಿಕಾರಿಗಳು ಮಧ್ಯಸ್ಥಿಕೆವಹಿಸಬೇಕೆಂದು ಸಂಬಂಧಿಸಿದವರಿಗೆ ಮನವಿ ನೀಡಲಾದ ಹಿನ್ನಲೆಯಲ್ಲಿ ಹಾಗೂ ಉಪವಿಭಾಗಾಧಿಕಾರಿಗಳ ಆದೇಶದಂತೆ ಫೆಬ್ರುವರಿ-23 ರಂದು ಜಂಟಿ ಸಭೆ ಕರೆಯಲಾಗಿತ್ತು. ವ್ಯಾಪಾರಸ್ಥರ ಪ್ರತಿನಿಧಿಗಳು ಹಮಾಲರ ಬೇಡಿಕೆಗಳನ್ನು ತಿರಸ್ಕರಿಸಿದ್ದರಿಂದಾಗಿ ಸಭೆ ವಿಫಲವಾಯಿತು.

ಮುಷ್ಕರ ಮುರಿಯಲು ಕುತಂತ್ರ :

ಅರ್ಧಕ್ಕೆ ನಿಂತ ಲೋಡಿಂಗ್-ಅನಲೋಡಿಂಗ್‌ನ್ನು ರಾತ್ರರಾತ್ರಿನೇ ಬೇರೆ ಜನರಿಂದ ಕೆಲಸ ಮಾಡಿಸಲು ವ್ಯಾಪಾರಸ್ಥರು ಮುಂದಾದಾಗ ಪೋಲಿಸರ ನೆರವಿನೊಂದಿಗೆ ವಿಫಲಗೊಳಿಸಲಾಯಿತು. ಎಂದೂ ಇಲ್ಲದೇ ಇಂದು ಕೆಂಬಾವುಟದವರ ಮಾತು ಕೇಳಿ ಹಮಾಲರು ಅಡ್ಡದಾರಿ ಹಿಡಿದಿದ್ದಾರೆ, ಕಾನೂನು ಬಾಹಿರ ಮುಷ್ಕರ ನಡೆಸಲಾಗುತ್ತಿದೆ, ರೈತರಿಗೆ, ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ, ನಮ್ಮ ಕೂಲಿ ಒಪ್ಪಂದ ಇನ್ನೂ 15 ತಿಂಗಳು ಇದೆ ಎಂದು ಅಪಪ್ರಚಾರ ನಡೆಸಿದ್ದಲ್ಲದೇ ಕಾನೂನು ರಕ್ಷಣೆ ನೀಡಬೇಕೆಂದು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡು ಪತ್ರಿಕಾ ಹೇಳಿಕೆಯನ್ನು ನೀಡಿದರು. ಅಲ್ಲದೇ ಸಂಘದ ಸದಸ್ಯರ ಒಗ್ಗಟ್ಟನ್ನು ಮುರಿಯಲು ಹಲವಾರು ಪ್ರಯತ್ನಗಳನ್ನು ನಡೆಸಿದರು. ಇದಾವುದಕ್ಕೂ ಅಂಜದೇ ಒಗ್ಗಟ್ಟಿನಿಂದ ಮುಷ್ಕರವನ್ನು ಮುಂದುವರೆಸಿದರು.

ಸಫಲಗೊಂಡ ಜಿಲ್ಲಾಧಿಕಾರಿಗಳ ಸಭೆ:

ಜಟಿಲಗೊಂಡು ಗಂಭೀರ ಸ್ವರೂಪ ಪಡೆದ ಸಮಸ್ಯೆಯ ಇತ್ಯರ್ಥಕ್ಕಾಗಿ ಹೆಚ್ಚುವರಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಎಪಿಎಂಸಿ ಕಾರ್ಯದರ್ಶಿ, ಕಾರ್ಮಿಕ ಅಧಿಕಾರಿಗಳ, ವ್ಯಾಪಾರಸ್ಥರ, ಟ್ರ್ಯಾನ್ಸ್‌ಪೋರ್ಟ್ ಮಾಲೀಕರ ಹಾಗೂ ಹಮಾಲರ ಪ್ರತಿನಿಧಿಗಳ ಜಂಟಿ ಸಭೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಫೆಬ್ರವರಿ-25ರಂದು ಕರೆಯಲಾಯಿತು.

ಹಮಾಲಿ ಕಾರ್ಮಿಕರು ಹೆಗಲು ಕೊಟ್ಟರೇ ಮಾತ್ರ ಮಾರ್ಕೇಟ್ ಚಕ್ರ ತಿರುಗಲು ಸಾಧ್ಯ. ಯಾವುದೇ ಕಾರ್ಮಿಕ ಕಾನೂನಿನ ರಕ್ಷಣೆಯಿಲ್ಲದೇ, ಸಾಮಾಜಿಕ ಭದ್ರತೆಯಿಲ್ಲದೇ ಅಸಂಘಟಿತ ಕಾರ್ಮಿಕರಲ್ಲಿಯೇ ಅತ್ಯಂತ ಶೋಷಣೆಗೊಳಗಾದ ವಿಭಾಗ ಹಮಾಲರು. ಬೆಲೆ ಏರಿಕೆಗೆ ತಕ್ಕಂತೆ ಕಾಲಕಾಲಕ್ಕೆ ಕೂಲಿ ದರಗಳ ಪರಿಷ್ಕರಣೆ ಅಗತ್ಯವಾಗಿದೆ. ಹಮಾಲಿಗಳ ಅಜ್ಞಾನದ ಲಾಭ ಪಡೆದು ಪೈಸೆ ಲೆಕ್ಕದಲ್ಲಿ ಕಾಟಾಚಾರಕ್ಕೆ ದೀರ್ಘಕಾಲಕ್ಕೆ ಕೂಲಿ ದರಗಳ ಒಪ್ಪಂದ ಮಾಡಲಾಗುತ್ತಿದೆ. ಹೀಗಾಗಿ ಕಾರ್ಮಿಕ ಅಧಿಕಾರಿಗಳ ಮಧ್ಯಸ್ಥಿಕೆಯಲ್ಲಿಯೇ ಕೂಲಿ ದರಗಳ ಚೌಕಾಸಿ ನಡೆಯಬೇಕು, ಮಾಲಿಕರ ದಬ್ಬಾಳಿಕೆಗಳು, ಶೋಷಣೆಗಳು ನಿಲ್ಲಬೇಕು ಎಂದು ಹೋರಾಟಕ್ಕೆ ನೇತೃತ್ವ ನೀಡಿದ ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಶನ್ ರಾಜ್ಯಾಧ್ಯಕ್ಷ ಮಹೇಶ ಪತ್ತಾರ ಸಭೆಯಲ್ಲಿ ಹಮಾಲರ ಪರವಾಗಿ ವಾದ ಮಂಡಿಸಿದರು.

'ಸಂಪ್ರದಾಯ'

ಹಲವಾರು ವರ್ಷಗಳಿಂದ ಬಂದ ಸಾಂಪ್ರದಾಯಗಳನ್ನು ಮುರಿಯಲಾಗುವದಿಲ್ಲ, ಹಮಾಲರ ಬೇಡಿಕೆಗಳು ಸರಿಯಿಲ್ಲ ಎಂದು ಮಾಲೀಕರ ಪ್ರತಿನಿಧಿಗಳು ವಾಗ್ವದಕ್ಕಿಳಿದರು. ಆಶ್ಚರ್ಯವೆಂದರೆ ಕಾರ್ಮಿಕ ಅಧಿಕಾರಿಗಳು ಮಾಲಿಕರ ಪರವಾಗಿ ಮಾತನಾಡಿದ್ದು. ಸಭೆಯಲ್ಲಿ ವಾಗ್ವಾದ ನಡೆಯಿತು. ಜಿಲ್ಲಾಧಿಕಾರಿಗಳು, ಪೋಲಿಸ್ ವರಿಷ್ಠಾಧಿಕಾರಿಗಳು ಹಮಾಲರ ಬೇಡಿಕೆ ಒಪ್ಪಿಕೊಳ್ಳಬೇಕೆಂದು ವ್ಯಾಪಾರಸ್ಥ ಮೇಲೆ ಒತ್ತಡ ಹೇರಿದ್ದರಿಂದ ಕೊನೆಗೂ ಮಾಲಿಕರು, ಟ್ರಾನ್ಸ್‌ಪೋರ್ಟ್ ಮಾಲಿಕರು ಹಮಾಲರ ಬೇಡಿಕೆಗಳನ್ನು ಒಪ್ಪಿಕೊಳ್ಳಲೇಬೇಕಾಯಿತು. ಸಭೆಯಲ್ಲಿ ಹಿರಿಯ ರೈತ ಮುಖಂಡ ಭೀಮಸಿ ಕಲಾದಗಿ, ಮಲ್ಲುಸಾಬ ಕಲಾದಗಿ, ಸಿಐಟಿಯು ಮುಖಂಡ ಎ.ಎಂ.ಸೊನ್ನದ, ಲಾರಿ ಹಮಾಲರ ಸಂಘದ ಅಧ್ಯಕ್ಷ ಲಕ್ಷ್ಮಣ ದೊಡ್ಡಮನಿ, ಕಾರ್ಯದರ್ಶಿ ಸಾಬು ಗೂಗದಡ್ಡಿ, ಮುಖಂಡರಾದ ಬಂದಗಿಸಾಬ ಮಳಕೇಡ, ಹುಸೇನಸಾಬ ಕೊಲ್ಹಾರ, ಅಪ್ಪಾಸಾಬ ನ್ಯಾಮಗೊಂಡ, ಅಬ್ದುಲಸಾಬ ಮುಲ್ಲಾ ಪಲ್ಗೊಂಡಿದ್ದರು. ವೇರ್‌ಹೌಸ ಹಮಾಲರ ಸಂಘದ ಮುಖಂಡ ಲಾಲಸಾಬ ಹಾಗೂ ಕಿರಾಣಿ ಬಜಾರ ಹಮಾಲರ ಸಂಘಗಳು ಹೋರಾಟವನ್ನು ಬೆಂಬಲಿಸಿದ್ದವು.

ನಂತರ ಮುಷ್ಕರ ಹಿಂಪಡೆಯಲಾಯಿತು. ಸಿಐಟಿಯು ಸಂಯೋಜಿತ ವಿಜಾಪೂರ ಜಿಲ್ಲಾ ಲಾರಿ ಹಮಾಲರ ಯೂನಿಯನ್ ಸದಸ್ಯರ ಒಗ್ಗಟ್ಟು; ಹೊಂದಾಣಿಕೆಯಿಂದ ನಡೆಸಿದ ದಿಟ್ಟ ಹೋರಾಟ ಪ್ರಸಂಶನೀಯವಾಗಿತ್ತು.

ಮೂಡಿದ ಜಾಗೃತಿ

"ಈ ಹೋರಾಟದಿಂದ ಜಿಲ್ಲಾಡಳಿತದ ಎದುರು ಹಮಾಲರ ಸಮಸ್ಯೆಗಳ ಚರ್ಚೆಯಾಗುವಂತಾಗಿದೆ. ಎಂದೂ ಮಾತನಾಡದ ಹಮಾಲಿ ಸಂಘದ ಅಧ್ಯಕ್ಷ ಲಕ್ಷ್ಮಣನಂತವರು ಅಧಿಕಾರಿಗಳ ಹಾಗೂ ಮಾಲಿಕರ ಮುಂದೆ ಮಾತನಾಡಿದ್ದು ನೋಡಿದರೆ ಅವರಲ್ಲಿ ಜಾಗೃತಿ ಮೂಡುತ್ತಿದೆ'

- ಭೀಮಶಿ ಕಲಾದಗಿ
ಕರ್ನಾಟಕ ಪ್ರಾಂತ ರೈತಸಂಘದ ಮುಖಂಡರು

ವರದಿ: **ಮಹೇಶ ಪತ್ತಾರ**



ಜನಶಕ್ತಿ ನೂತನ ಕಾರ್ಯಾಲಯ ನಿಧಿ
ಸ್ಪಂದನೆಗೆ ವಂದನೆ

'ಜನಶಕ್ತಿ ಕನ್ನಡ ವಾರಪತ್ರಿಕೆ'ಯ ನೂತನ ಕಾರ್ಯಾಲಯವನ್ನು ಸರ್ವ ಸಜ್ಜುಗೊಳಿಸುವ ಸಂದರ್ಭದಲ್ಲಿ ಉದಾರ ಕೊಡುಗೆಗೆ ಈ ಮೂಲಕ ಮಾಡಲಾದ ಮನವಿಗೆ 'ಜನಶಕ್ತಿ'ಯ ಓದುಗ ಬಳಗದಿಂದ ಸ್ಪಂದನೆ ಆರಂಭವಾಗಿದೆ. ನಿಧಿಗೆ ಕಾಣಿಕೆ ನೀಡಿರುವ ಸಂಗಾತಿಗಳ ಹೆಸರು ಮತ್ತು ವಿವರವನ್ನು ಕೃತಜ್ಞತೆಗಳೊಂದಿಗೆ ಇಲ್ಲಿ ಪ್ರಕಟಿಸಲಾಗಿದೆ. ದುಡಿಯುವ ಜನರ ಪ್ರಾಣಮಿತ್ರ 'ಜನಶಕ್ತಿ' ಕಾರ್ಯಾಲಯವನ್ನು ವ್ಯವಸ್ಥಿತವಾಗಿ ಏರ್ಪಡಿಸಿಕೊಳ್ಳುವ ನಿಟ್ಟಿನಲ್ಲಿ ಇನ್ನಷ್ಟು ಸ್ಪಂದನೆ ದೊರೆಯುತ್ತದೆಂದು ನಿರೀಕ್ಷಿಸುತ್ತೇವೆ.

ಜನಶಕ್ತಿ ನೂತನ ಕಾರ್ಯಾಲಯ ನಿಧಿ

1. ಕಾಂ. ವೇದರಾಜ್. ಎನ್.ಕೆ, ಬೆಂಗಳೂರು	ರೂ.	10,000.00
2. ಕಾಂ. ಆರ್.ಹೆಚ್. ಆಯಿ, ಧಾರವಾಡ	ರೂ.	500.00
3. ಕಾಂ. ಐ.ಆರ್. ಪ್ರಮೋದ್, ವಿರಾಜಪೇಟೆ	ರೂ.	2,000.00
ಒಟ್ಟು	ರೂ.	12,500.00

ಇತಿ ತಮ್ಮ ವಿಶ್ವಾಸಿ
ಎಸ್.ವೈ.ಗುರುಶಾಂತ್
ಸಂಪಾದಕರು

ಸಂಪಾದಕೀಯ

ಹೈದ್ರಾಬಾದ್ ಕರ್ನಾಟಕ ಸ್ಥಾನಮಾನ ಆಕ್ಷೇಪಾರ್ಹ ಕೇಂದ್ರದ ನಿಲುವು

ಹೈದ್ರಾಬಾದ್, ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಒದಗಿಸುವ ಸಂವಿಧಾನದ 371ನೇ ಕಲಮಿಗೆ ಸೇರ್ಪಡೆ ಮಾಡಬೇಕೆಂಬ ಬೇಡಿಕೆಯನ್ನು ಸಾರಾಸಗಟು ತಿರಸ್ಕರಿಸಿರುವ ಕೇಂದ್ರ ಸರ್ಕಾರದ ನಿಲುವು ಆಕ್ಷೇಪಾರ್ಹವಾಗಿದೆ. ಆರ್ಥಿಕ, ಸಾಮಾಜಿಕ ಮತ್ತು ಮಾನವ ಅಭಿವೃದ್ಧಿ ಸೂಚ್ಯಾಂಕದಲ್ಲಿಯೂ ರಾಜ್ಯದ ಇತರೆ ಕೆಲವು ಭಾಗಗಳಿಗಿಂತ ಹಿಂದುಳಿದಿರುವುದು ಹಲವಾರು ಸಮೀಕ್ಷೆ, ಅಧ್ಯಯನಗಳ ವರದಿಗಳಿಂದಲೂ, ಬದುಕಿನ ವಾಸ್ತವಗಳಿಂದಲೂ ಶತಸಿದ್ಧವಾಗಿದೆ. ಮತ್ತು ಇಂತಹ ಹಿಂದುಳಿದಿರುವಿಕೆಗೆ ಐತಿಹಾಸಿಕ ಕಾರಣಗಳೂ, ಸ್ವಾತಂತ್ರ್ಯ ನಂತರದಲ್ಲಿ ಆಳುವವರು ಅನಸರಿಸಿಕೊಂಡು ಬಂದ ಬಂಡವಾಳಶಾಹಿ ಭೂಮಾಲಿಕ ಮಾರ್ಗಗಳ ನೀತಿಗಳೂ ಕಾರಣವಾಗಿವೆ. ಹೀಗಾಗಿಯೇ ಈ ಪ್ರದೇಶ ಅಭಿವೃದ್ಧಿಯಾಗಬೇಕು. ಪ್ರಾದೇಶಿಕ ಅಸಮಾನತೆಯು ತೊಲಗಬೇಕು ಎಂಬ ಜನತೆಯ ಕೂಗು ಸಹಜ, ನ್ಯಾಯಸಮ್ಮತವಾದುದು.

ಆದರೆ ಇಂತಹ ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸಿ ಅಭಿವೃದ್ಧಿ ಸಾಧಿಸುವುದಾಗಿ ಮಾತನಾಡುವ ಆಳುವವರಿಗೆ ನಿಜಕ್ಕೂ ಈ ಪ್ರದೇಶದ ಅಭಿವೃದ್ಧಿ ಸಾಧಿತವಾಗುವುದು ಬೇಕಿಲ್ಲವೆಂಬುದೇ ಕೃತಿಗಳ ಮೂಲಕ ಸ್ಪಷ್ಟವಾಗುವುದು. ಅಭಿವೃದ್ಧಿಗಾಗಿ ವಿಶೇಷ ನಿಧಿ, ಮಂಡಳಿಗಳ ರಚನೆಯೂ ಅಲ್ಲಿನ ಕೃಷಿ, ಕೈಗಾರಿಕೆ, ಶಿಕ್ಷಣ, ಸಾಮಾಜಿಕ ವಲಯಗಳಲ್ಲಿ ಮೂಲಭೂತ ಬದಲಾವಣೆ ತರುವಂತಹ ನಿಖರ ಮಾರ್ಗಗಳು ಯಾವುದೇ ಯೋಜನೆಗಳು ಇಲ್ಲದಿರುವುದೇ ಆಳುವವರ ನಿಜವಾದ ಹಿತಾಸಕ್ತಿ ಮತ್ತು ವಂಚನೆಯ ರಾಜಕಾರಣವನ್ನೇ ತೋರಿಸುತ್ತದೆ. ಬಹುತೇಕ ಶಾಸಕರು, ಸಂಸದರು, ಭೂಮಾಲಕ, ಮೇಲು ವರ್ಗಗಳ ಹಿತಗಳನ್ನೇ ಪ್ರತಿನಿಧಿಸುವವರಾಗಿರುವುದೂ ಕೂಡ ಈ ಭಾಗದ ಜನತೆಯ ಪ್ರಶ್ನೆಗಳ ಇತ್ಯರ್ಥಕ್ಕೆ ರಾಜಕೀಯ ಇಚ್ಛಾ ಶಕ್ತಿಯೇ ಇಲ್ಲದಿರುವುದನ್ನು ತೋರಿಸುತ್ತದೆ. ಆದ್ದರಿಂದಲೇ ಅಭಿವೃದ್ಧಿ ಎಂಬುದು, ನಿಧಿ ಬಳಕೆಯೂ ಹಂಚಿಕೊಳ್ಳುವ ದಂಧೆಯಾಗಿ ಮಾರ್ಪಟ್ಟಿದೆ. ಇದು ಕಾಂಗ್ರೆಸ್, ಬಿಜೆಪಿ ಪಕ್ಷಗಳು ಅಧಿಕಾರದಲ್ಲಿರುವಾಗ ಅವರೆಲ್ಲರಿಗೂ ಅನ್ವಯಿಸುವ ಸತ್ಯ.

ಕೇಂದ್ರ ಗೃಹ ಸಚಿವ ಚಿದಂಬರಂರವರು ವಿಶೇಷ ಸ್ಥಾನಮಾನದ ಪ್ರಸ್ತಾಪವನ್ನು ತಿರಸ್ಕರಿಸುವಲ್ಲಿ ಅತ್ಯಂತ ಪ್ರಮುಖವಾದ ಅಂಶಗಳಿರುವುದನ್ನು ಗಮನಿಸಬೇಕು. ನವ ಉದಾರೀಕರಣದ ಆರ್ಥಿಕ ನೀತಿಗಳನ್ನು ಅನುಸರಿಸುತ್ತಿರುವ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಅಥವಾ ಆರ್ಥಿಕ ನಿರ್ವಹಣೆಯಲ್ಲಿ ಯೋಜನೆಯ ಪಾತ್ರವೇ ಗೌಣವಾಗುತ್ತಿದೆ. ಪ್ರತಿಯೊಂದನ್ನು ಖಾಸಗೀಕರಿಸುವ, ಖಾಸಗೀಕರಣದ ಮೇಲೆಯೇ ಹೆಚ್ಚು ಒತ್ತು ನೀಡುತ್ತಿರುವ ನೀತಿಗಳು ಈಗಿರುವ ಪ್ರಾದೇಶಿಕ ಅಸಮಾನತೆಯನ್ನು ಇನ್ನಷ್ಟು ಹೆಚ್ಚಿಸುತ್ತಿವೆ. ಸರ್ಕಾರಗಳ ಬಜೆಟ್‌ನ ಹಣದ ಹಂಚಿಕೆಯಲ್ಲಿಯೂ ಮೂಲಭೂತ ಕ್ಷೇತ್ರಗಳನ್ನು ನಿರ್ಲಕ್ಷಿಸಿ, ಕೇವಲ ಮೂಗಿಗೆ ತುಪ್ಪ ಸವರುವಂತಹ ಸ್ಕೀಮುಗಳೇ ಪ್ರಕಟವಾಗುತ್ತಿರುವುದು ಅದನ್ನೇ ತೋರಿಸುತ್ತದೆ. ಅಸಹನೀಯ ಬದುಕು, ಹಿಂದುಳಿದಿರುವಿಕೆಯ ದುಷ್ಪರಿಣಾಮ, ನರಳುವಿಕೆ ಬೆಳೆಯುತ್ತಿರುವ ಜನತೆಯ ನಿರೀಕ್ಷೆಗಳು ನಿರ್ದಿಷ್ಟ ಹಾಗೂ ಆಘಾತಕಾರಿ ಧಾಳಿಗೆ ಈಡಾಗುವುದರಿಂದ ಪ್ರತಿಭಟನೆಯ ಕೂಗು ಹಲವು ಸ್ವರೂಪ, ಸ್ತರಗಳಲ್ಲಿ ಎದ್ದುಬರುತ್ತಿದೆ. ಇದು ಪ್ರಜಾಸತ್ತಾತ್ಮಕ ಚಳುವಳಿಯಾಗದಿದ್ದಲ್ಲಿ ಕೆಲವೊಮ್ಮೆ ಪ್ರತ್ಯೇಕತಾವಾದಿ, ಪ್ರಾದೇಶಿಕ ಸಂಕುಚಿತವಾದ, ಛಿದ್ರಕಾರಿ ಸ್ವರೂಪಕ್ಕೆ ತಿರುಗುವಂತಹ, ಅಂತಹ ಶಕ್ತಿಗಳು ಮೇಲುಗೈ ಸಾಧಿಸುವಂತಾಗುತ್ತಿದೆ. ದೇಶದ ಹಲವೆಡೆ ಸಹ ಕಾಣಬಹುದು. ಇದರ ಹೊಣೆಯನ್ನು ಕೇಂದ್ರ ಸರ್ಕಾರವೇ ಹೊರಬೇಕು.

ಹೈದ್ರಾಬಾದ್, ಕರ್ನಾಟಕ ಪ್ರದೇಶದಲ್ಲಿ ಎತ್ತಲಾಗಿರುವ 371ನೇ ಕಲಮಿಗೆ ಸೇರ್ಪಡೆಯ ಪ್ರಶ್ನೆ ಪ್ರಜಾಸತ್ತಾತ್ಮಕವಾದ ಬೇಡಿಕೆ. ಇದು

ಪುಟ 4 ಕ್ಕೆ


ಇನ್ನೆಷ್ಟು ಕಪಾಳ ಮೋಕ್ಷ ?

ಈ ಸರ್ಕಾರಕ್ಕೆ ಎಷ್ಟೊಂದು ಸಲ ಕಪಾಳ ಮೋಕ್ಷ ಆಗಬೇಕು?. ಒಂದೇ, ಎರಡೇ, ಹನ್ನೆರಡೇ....

ಈಗಲೂ ಬಾಬಾ ಬುಡನ್‌ಗಿರಿಯಲ್ಲಿನ ಸಂದಿಲ್ ಉರುಸ್ ಆಚರಣೆಗೆ ಸಂಬಂಧಿಸಿದಂತೆ ಸುಪ್ರಿಂ ಕೋರ್ಟ್ ನೀಡಿರುವ ತೀರ್ಪು ಒಟ್ಟರ್ಥದಲ್ಲಿ ಬಿ.ಜೆ.ಪಿ ಹಾಗೂ ಸಂಘಪರಿವಾರಗಳ ಹುನ್ನಾರಗಳಿಗೆ ಹಾಕಿದ ಛೀಮಾರಿಯೇ ಆಗಿದೆ.


ಪ್ರತಿರೋಧದ ನಡುವೆಯೂ

ಕೋಮು ಸೌಹಾರ್ದತೆಯ , ವೈವಿಧ್ಯತೆಯ ಆಚರಣೆಗಳ ಸೂಫಿ ಪರಂಪರೆಯ ದರ್ಗಾ-ಪೀಠವುಳ್ಳ ಕೇಂದ್ರವನ್ನು ಮತೀಯವಾದದ, ವೈದಿಕಶಾಹಿ ಕೇಂದ್ರವನ್ನಾಗಿಸಲು ಸತತವಾಗಿ ಪ್ರಯತ್ನಿಸುತ್ತಲೇ ಬಂದಿವೆ. ಕಾಂಗ್ರೆಸ್ ಒಳಗೊಂಡು ನಂತರದ ಬಹುತೇಕ ಸರ್ಕಾರಗಳ ಮತನಿರಪೇಕ್ಷಿತತೆಯ ಬದ್ಧತೆಗಿನ ಚಂಚಲತೆ ಹಾಗೂ ಮೃದು ಕೋಮುವಾದದ ಸಂದರ್ಭ ಸಾಧಕ ನಿಲುವುಗಳನ್ನು ಬಳಸಿಕೊಂಡ ಸಂಘ ಪರಿವಾರ ಹಂತ ಹಂತವಾಗಿ 'ಗಿರಿ'ಯನ್ನು ತಾನು ಘೋಷಿಸಿದಂತೆ ದಕ್ಷಿಣ ಭಾರತದ ಅಯೋಧ್ಯೆಯನ್ನಾಗಿಸಲು ತೊಡಗಿದೆ. ಅಧಿಕಾರದಲ್ಲಿ ಬಿಜೆಪಿ ಪಾಲುದಾರನಾದಾಗ, ಸ್ವತಃ ಸರ್ಕಾರದಲ್ಲಿ ಹಿಡಿತ ಪಡೆದ ಮೇಲೂ ತನ್ನ ಯೋಜಿತ ಧಾಳಿಯನ್ನು ತೀವ್ರಗೊಳಿಸಿದೆ. ಅಲ್ಲಿದ್ದ ಪರಂಪರಾನುಗತವಾಗಿ ಅನುಸರಿಸುತ್ತಾ ಬಂದಿರುವ ಆಚರಣೆಗಳನ್ನು ವಿಕೃತಗೊಳಿಸಲು ತೊಡಗಿದೆ. ಇದರ ಭಾಗವಾಗಿಯೇ ಸಂದಿಲ್ ಉರುಸಿನ ಆಚರಣೆಗಳಲ್ಲಿ ಅತ್ಯಂತ ಪ್ರಮುಖ ಪಾತ್ರ ಹಾಗೂ ಉಸ್ತುವಾರಿ ವಹಿಸುತ್ತಿದ್ದ ಶಾಖಾದ್ರಿಯವರನ್ನು ಸಂಪೂರ್ಣ ಕಡೆಗಣಿಸುತ್ತಾ ಮೂಲೆ ಗುಂಪು ಮಾಡಿದೆ. ಸಂಘಪರಿವಾರದ ಈ ಹುನ್ನಾರಗಳ ವಿರುದ್ಧ ನಾಡಿನ ಮತನಿರಪೇಕ್ಷಿತ, ಪ್ರಗತಿ ಪರ ಶಕ್ತಿಗಳು ನಿರಂತರ ಪ್ರತಿರೋಧ ಒಡ್ಡುತ್ತಾ ಬಂದಿರುವುದು ಅದರ ನಿರಾತಂಕ ಮುನ್ನಡೆಗೆ ತಡೆಯೂ ಆಗಿದೆ.



ಶಾಖಾದ್ರಿ ಹಕ್ಕು

ಬಾಬಾಬುಡನ್ ಗಿರಿಯ ದರ್ಗಾ- ಪೀಠಕ್ಕೆ ಸಂಬಧಿಸಿದಂತೆ ವಿವಾದ ಹುಟ್ಟು ಹಾಕಿದ ನಂತರ ಅದು ನ್ಯಾಯಲಯದ ಮೆಟ್ಟಿಲೇರಿದ ಬಳಿಕ 1975 ರ ಆಚರಣೆಗಳೇನೆಂದು ಧಾರ್ಮಿಕ ದತ್ತಿ ಆಯುಕ್ತರು ಪಟ್ಟಿ ಮಾಡಿ 1989 ರ ಫೆಬ್ರವರಿ 25 ರಂದು ಆದೇಶ ಹೊರಡಿಸಿದ್ದರು. ಇದರಲ್ಲಿ ಉರುಸ್ ಆಚರಣೆಯೂ ಸೇರಿದೆ ಮತ್ತು ಇಂತಹ ಉರುಸ್ ಆಚರಣೆಯನ್ನು ಪೂರ್ಣವಾಗಿ ಅಲ್ಲಿನ ಮುಖ್ಯಸ್ಥರಾದ



'ಶಾಖಾದ್ರಿ'ಯವರೇ ಉಸ್ತುವಾರಿ ವಹಿಸಿಕೊಂಡು ಅವರ ನೇತೃತ್ವದಲ್ಲಿ ನಡೆಸಲಾಗುತ್ತಿತ್ತು. ಆದರೆ ಸಂಘ ಪರಿವಾರ ಮತ್ತು ಅದೇ ವಾದಗಳನ್ನು ಒಪ್ಪಿದ ಕರ್ನಾಟಕ ಸರ್ಕಾರ ದರ್ಗಾದ ಮೇಲೆ ಹಸಿರು ಶಾಲು ಹೊದಿಸುವುದನ್ನು ಹಾಗೂ ಶಾಖಾದ್ರಿ ನೇತೃತ್ವ ವಹಿಸುವುದನ್ನು ವಿರೋಧಿಸಿ, 'ಉರುಸ್'ನ ಪರಂಪರಾಗತ ಆಚರಣೆಗಳನ್ನೇ ನಿರ್ಭಂಧಿಸಿತ್ತು. ಸ್ವಾತಂತ್ರ್ಯ ಪೂರ್ವದಲ್ಲಿನ ಗೆಜೆಟಿಯರ್ ಹಾಗೂ ದಸ್ತಾವೇಜ್‌ಗಳಲ್ಲಿ 'ಉರುಸ್' ಎಂದಿದೆ ಮಾತ್ರವಲ್ಲದೆ ಹೇಗೆ ಆಚರಿಸಬೇಕೆಂದೇನೂ ಇಲ್ಲ' ಎಂಬ ವಿತಂಡವಾದವನ್ನು ಸರ್ಕಾರದ ಧಾರ್ಮಿಕ ಆಯುಕ್ತರು ಇತ್ತೀಚಿಗೆ ತಮ್ಮ ಕ್ರಮ ಸಮರ್ಥಿಸಿಕೊಂಡಿದ್ದರು. ಆದರೆ ಇದು ಹಿಂದಿನ ರೂಢಿ, ಆಚರಣೆ ಮತ್ತು ಪಟ್ಟಿ ಮಾಡಿದ ಅಂಶಗಳಲ್ಲಿ ಇದ್ದದ್ದನ್ನು ಬೇಕೆಂದೇ ನಿರ್ಲಕ್ಷಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಸರ್ಕಾರವೇ ವ್ಯಾಖ್ಯಾನಿಸಿದ ರೀತಿಯಲ್ಲಿ ಆಚರಿಸಲಾರಂಭಿಸಿದ ಉರುಸ್ ವೇಳೆ ಕೇವಲ 'ನಾಮಕಾವಸ್ತೆ'ಗಾಗಿ ಭಾಗವಹಿಸುವುದನ್ನು ಶಾಖಾದ್ರಿ ವಿರೋಧಿಸಿ ಹಿಂದೆ ಸರಿದಿದ್ದರು. ಆಗ 'ಸ್ಥಳೀಯರ ಸಮಿತಿ' ಯೊಂದನ್ನು ರಚಿಸಿದ ಜಿಲ್ಲಾ ಆಡಳಿತ ಹಿಂದಿನ ಪರಂಪರಾನುಗತ ಆಚರಣೆ ಉಲ್ಲಂಘಿಸಿ ತನಗನ್ನಿಸಿದಂತೆ ಆಚರಿಸತೊಡಗಿತ್ತು. ಹೀಗಾಗಿ ಇಲ್ಲಿಗೆ ಬರುತ್ತಿದ್ದ ವಿವಿಧ ಕೋಮು-ಜಾತಿ, ಪ್ರದೇಶಗಳ ಅನುಯಾಯಿ ಭಕ್ತರ ಬರುವುದನ್ನು ಬಹಳಷ್ಟು ಇಳಿಮುಖವಾಗಿಸಿ ನಿರುತ್ಸಾಹ ಉಂಟುಮಾಡಿತ್ತು. ಈ ಹಿನ್ನೆಲೆಯಲ್ಲಿಯೇ ಉರುಸ್ ಆಚರಣೆಯ ತಮ್ಮ ಪರಂಪರಾಗತ ಧಾರ್ಮಿಕ ಹಕ್ಕನ್ನು ರಕ್ಷಿಸುವಂತೆ ಅವಕಾಶ ಕೋರಿ ಸುಪ್ರಿಂ ಕೋರ್ಟ್‌ಗೆ ಮನವಿ ಸಲ್ಲಿಸಲಾಗಿತ್ತು.

ಸರ್ಕಾರಕ್ಕೆ ತಪರಾಕಿ

ಈ ಮನವಿಯನ್ನು ಪುರಸ್ಕರಿಸಿ, ವಿವರವಾಗಿ ಪರಿಶೀಲಿಸಿದ ನ್ಯಾಯಾಲಯವು ಇದೇ ಮಾರ್ಚ್ 1 ರಿಂದ 4ರವರೆಗೆ ಬಾಬಾಬುಡನ್ ಗಿರಿಯಲ್ಲಿ ನಡೆಯಲಿರುವ ಉರುಸ್‌ನಲ್ಲಿ ಎಲ್ಲಾ ಧಾರ್ಮಿಕ ಚಟುವಟಿಕೆಗಳನ್ನು ನಡೆಸಲು ಪೂರ್ಣ ಅವಕಾಶವನ್ನು ಅಲ್ಲಿನ ಮುಖ್ಯಸ್ಥರಾದ ಸಯ್ಯದ್ ಗೌಸ್ ಮೊಹಿಯುದ್ದಿನ್ ಶಾಖಾದ್ರಿಯವರಿಗೆ ನೀಡುವಂತೆ ನಿರ್ದೇಶಿಸಿರುವುದು ಸ್ವಾಗತಾರ್ಹ. ಇದು ಸಂಘ ಪರಿವಾರಕ್ಕೆ ಸರ್ಕಾರಕ್ಕೆ ಮತ್ತೆ ನ್ಯಾಯಾಲಯ ನೀಡಿದ ಕಪಾಳಮೋಕ್ಷ! ಮಾತ್ರವಲ್ಲ ಯಾವುದೇ ಕಾರಣ ಹೇಳಿ 'ಉರುಸ್ ನಡೆಸಲು ಹಾಗೂ ಶಾಖಾದ್ರಿ ಭಾಗವಹಿಸಲು ಅಡ್ಡಿಪಡಿಸಬಾರದೆಂದು ತಾಕೀತು ಮಾಡಿರುವುದು ಸರ್ಕಾರದ ಹುನ್ನಾರಗಳನ್ನು ಗಮನಿಸಿಯೇ ಆಗಿದೆ.

ಇಂತಹ ಉಲ್ಲಂಘನೆ ಒಂದೆರಡಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಪ್ರಧಾನವಾಗಿ ದತ್ತಜಯಂತಿ, ದತ್ತಮಾಲೆ, ದತ್ತ ಯಜ್ಞ, ವಿಗ್ರಹ ಪೂಜೆಯಂತಹ ಹಿಂದೆಂದೂ ಇಲ್ಲದ ಆಚರಣೆಗಳನ್ನು ನಡೆಸುವ ಮೂಲಕ ಸುಪ್ರಿಂ ಕೋರ್ಟ್‌ನ ಆದೇಶವನ್ನೇ ಸತತವಾಗಿ ಉಲ್ಲಂಘಿಸಿಕೊಂಡು ಬರಲು ಸರ್ಕಾರವೇ 'ಸಂಘ'ಕ್ಕೆ ಮುಕ್ತ ಅವಕಾಶ ನೀಡಿದೆ. ಬಹು ಹಿಂದೆಯೇ ಗುಹೆಯ ವೈವಿಧ್ಯತೆ, ಸಂಸ್ಕೃತಿ, ಸೂಫಿ ಪರಂಪರೆಯ ಆಚರಣೆಗಳನ್ನು ನ್ಯಾಯಾಲಯವೇ ಎತ್ತಿಹಿಡಿದಿರುವುದಕ್ಕೆ ವಿರೋಧವಾದುದು. ಆದರೆ ಪರಂಪರೆ, ಜನಸಂಸ್ಕೃತಿ, ಸಾಮರಸ್ಯದ ಬಗ್ಗೆ ವಿಷ ಕಾರುವ ಕೋಮುವಾದಿ ಫ್ಯಾಸಿಸ್ಟ್ ಮನೋಭಾವದವರಿಗೆ ಇವೆಲ್ಲಾ ಪಥ್ಯವಾಗಲು ಹೇಗೆ ಸಾಧ್ಯ?

ಹುನ್ನಾರಗಳು

ಈಗಿನ ಉರುಸ್ ಆಚರಣೆಯ ವಿಷಯವಲ್ಲಿಯೂ 2008ರ ನ್ಯಾಯಾಲಯದ ಆದೇಶವನ್ನೇ ದುರುಪಯೋಗಪಡಿಸಿಕೊಳ್ಳಲು ಪರಿವಾರ ಯತ್ನಿಸಿತ್ತು. 'ಮಳೆಯ ಕಾರಣ'ದಿಂದ ಕುಸಿದ 'ಗುಹೆ'ಯನ್ನೇ ಪುನರ್ ನಿರ್ಮಾಣದ ಹೆಸರಿನಲ್ಲಿ 'ದುರಸ್ತಿ' (ಕರಸೇವೆ ಎನ್ನಬಹುದು) ಮಾಡುವ ಸರ್ಕಾರದ ಯೋಜನೆಯ ಬಗ್ಗೆ ಅನುಮಾನ, ಆಕ್ಷೇಪವನ್ನು ಪ್ರಗತಿಪರರು ವ್ಯಕ್ತಪಡಿಸಿದ್ದರಿಂದ ಪರಿಶೀಲಿಸಿದ ನ್ಯಾಯಾಲಯ 2008 ಡಿಸೆಂಬರ್ 1 ರಂದು 'ಯಥಾಸ್ಥಿತಿ' ಕಾಪಾಡಲು ಸೂಚಿಸಿತ್ತು. ಈ 'ಯಥಾಸ್ಥಿತಿಯನ್ನೇ' ಸಂಘ ಪರಿವಾರ ತಿರುಚಿ ವ್ಯಾಖ್ಯಾನಿಸಿ ಉರುಸ್‌ಗೂ ಅನ್ವಯಿಸಲು ಯತ್ನಿಸಿತ್ತು. ಆದರೆ ನ್ಯಾಯಾಲಯ ಇಂತಹ ವಾದಗಳನ್ನು ಸ್ಪಷ್ಟವಾಗಿ ತಿರಸ್ಕರಿಸಿದೆ. ಶಾಖಾದ್ರಿಯವರ ಪರಂಪರಾಗತ ಹಕ್ಕನ್ನು ಎತ್ತಿ ಹಿಡಿದಿದೆ.

ಪಾಲಿಸಲೇಬೇಕಾದ ತೀರ್ಪು

ಆದ್ದರಿಂದ ಈಗಲಾದರೂ ಸರ್ಕಾರ ನ್ಯಾಯಾಲಯದ ನಿರ್ದೇಶನಕ್ಕೆ ಬದ್ಧವಾಗಿ, ಸಂವಿಧಾನಾತ್ಮಕ ಕರ್ತವ್ಯವನ್ನು ಪಾಲಿಸಿ, ಉರುಸ್ ಆಚರಣೆಗೆ ಮುಕ್ತ ಅವಕಾಶ ನೀಡಬೇಕು. ನ್ಯಾಯಾಲಯದ ಆದೇಶದಂತೆ ಸೂಫಿ ಪರಂಪರೆಯಂತೆ ಅಲ್ಲಿನ ಧಾರ್ಮಿಕ ಆಚರಣೆಗಳಿಗೆ ಅವಕಾಶ ನೀಡಬೇಕು. ಇದನ್ನು ರಕ್ಷಿಸಿ ಜಾರಿಗೊಳಿಸಬೇಕಾದುದು ಪ್ರಜಾಪ್ರಭುತ್ವದಲ್ಲಿ ನಾಗರೀಕ ಸರ್ಕಾರವೊಂದು ಪಾಲಿಸಬೇಕಾದ ಕನಿಷ್ಠ ಕರ್ತವ್ಯವಾಗಿದೆ.

* * *

ಪುಟ 6 ಕ್ಕೆ

ಕೃಷಿ ಕೂಲಿಕಾರರ ಪಾಲಿಗೆ ಶೂನ್ಯ ಬಜೆಟ್

ಪ್ರಾಂತ ಕೃಷಿಕೂಲಿಕಾರರ ಸಂಘದ ಟೀಕೆ

ಅಬ್ಬರದ ಪ್ರಚಾರದೊಂದಿಗೆ ಮುಖ್ಯಮಂತ್ರಿ ಯಡಿಯೂರಪ್ಪನವರು 2011-12 ನೇ ಸಾಲಿನ ಸಾಮಾನ್ಯ ಬಜೆಟ್ ಜತೆಗೆ ಮಂಡಿಸಿದ ಕೃಷಿ ಬಜೆಟ್ ಕೃಷಿ ಕೂಲಿಕಾರರ ಪಾಲಿಗೆ ಶೂನ್ಯ ಬಜೆಟ್ ಆಗಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ತೀವ್ರವಾಗಿ ಟೀಕಿಸಿದೆ.

ಕೃಷಿ ಉತ್ಪಾದನೆಯಲ್ಲಿ ಕೃಷಿ ಕೂಲಿಕಾರರು ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾರೆ. ಕೃಷಿ ಕೂಲಿಕಾರರ ಶ್ರಮವಿಲ್ಲದೆ ಕೃಷಿ ಉತ್ಪಾದನೆ ಸಾಧ್ಯವಿಲ್ಲ. ರಾಜ್ಯದಲ್ಲಿ ಕೃಷಿ ಉತ್ಪಾದನೆ ಕುಸಿಯುತ್ತಿರುವುದನ್ನು ತಡೆಗಟ್ಟಲು ಸಾಧ್ಯವಾಗಬೇಕಾದರೆ ಕೃಷಿ ಕ್ಷೇತ್ರದಿಂದ ಕೃಷಿ ಕೂಲಿಕಾರರು ಹೊರ ಹೋಗುವುದನ್ನು ತಡೆಗಟ್ಟಲು, ಕೃಷಿ ಕ್ಷೇತ್ರಕ್ಕೆ ಅವರನ್ನು ಹೆಚ್ಚೆಚ್ಚು ಆಕರ್ಷಿಸಲು ಪರಿಣಾಮಕಾರಿ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದು ಅಗತ್ಯವಿದೆ. ಆದರೆ ಅದರ ಬದಲಾಗಿ ರಾಜ್ಯ ಸರ್ಕಾರ ನಾಟಿ ಮಾಡುವುದು, ಕಟಾವು ಮಾಡುವುದು ಮೊದಲಾದ ಕೆಲಸಗಳನ್ನು ಯಂತ್ರಗಳ ಸಹಾಯದಿಂದ ಮಾಡುವುದಕ್ಕೆ ಆಧ್ಯತೆ ನೀಡಿ ಯಂತ್ರೋಪಕರಣಗಳಿಗೆ ಶೇ.50 ರಷ್ಟು ಸಬ್ಸಿಡಿಯನ್ನು ಘೋಷಿಸಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಕೂಲಿಕಾರರ ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳಲಿದ್ದು ನಗರ ಪ್ರದೇಶಗಳಿಗೆ ಅವರ ವಲಸೆ ಇನ್ನಷ್ಟು ಹೆಚ್ಚಾಗಲಿದೆ.

ಕೃಷಿ ಕೂಲಿಕಾರರ ಬಗ್ಗೆ ಸಂಪೂರ್ಣವಾಗಿ ಮೌನವಾಗಿರುವ ಯಡಿಯೂರಪ್ಪನವರ ಈ ಕೃಷಿ ಬಜೆಟ್ ರಾಜ್ಯದಲ್ಲಿನ ಒಂದು ಕೋಟಿಯಷ್ಟಿರುವ ಕೃಷಿ ಕೂಲಿಕಾರರಿಗೆ ತೀವ್ರ ನಿರಾಸೆಯನ್ನು ತಂದಿದೆ.

ರಾಜ್ಯದ ಕೃಷಿ ಕ್ಷೇತ್ರಕ್ಕೆ ವಿಶ್ವ ಬಂಡವಾಳವನ್ನು ಹರಿಸುವ ಉದ್ದೇಶದಿಂದ ಕೂಡಿರುವ ಈ ಬಜೆಟ್‌ನಿಂದ ಸಾಮಾನ್ಯ ರೈತರಿಗಾಗಲಿ, ಕೃಷಿ ಕೂಲಿಕಾರರಿಗಾಗಲಿ ಎಳ್ಳಷ್ಟು ಪ್ರಯೋಜನವಾಗದು. ಕೃಷಿ ಕ್ಷೇತ್ರಕ್ಕೆ ವಿದೇಶಿ ಬಂಡವಾಳವನ್ನು ಆಕರ್ಷಿಸುವ ಮೂಲಕ ಕೃಷಿ ಕ್ಷೇತ್ರವನ್ನು ಲೂಟಿ ಮಾಡಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶವಾಗಲಿದ್ದು, ಕಾಂಟ್ರಾಕ್ಟ್ ಕೃಷಿ ಪದ್ಧತಿ ವ್ಯಾಪಕಗೊಳ್ಳಲಿದೆ. ಇದರಿಂದಾಗಿ ಆಹಾರಧಾನ್ಯಗಳ ಬೆಳೆಗಳಿಗೆ ಪ್ರೋತ್ಸಾಹ ಇಲ್ಲದಂತಾಗುವ ಜೊತೆಗೆ ಆಹಾರದ ಸಮಸ್ಯೆ ಉಲ್ಬಣಗೊಳ್ಳುವುದು. ಕೃಷಿ ಕೂಲಿಕಾರರಿಗೆ ಕೃಷಿಯಲ್ಲಿ ಸಿಗುವ ಕೆಲಸ ಕಡಿಮೆಯಾಗಿ ಅವರ ಬಡತನ ಹೆಚ್ಚಾಗಲಿದೆ. ಕೃಷಿಯ ಕಂಪೆನೀಕರಣ ಮಾಡುವ ಉದ್ದೇಶದ ಈ ಬಜೆಟ್ ದೊಡ್ಡ ದೊಡ್ಡ ಕಂಪನಿಗಳಿಗಾಗಿ ರೈತರ ಕೃಷಿಯೋಗ್ಯ ಭೂಮಿಯನ್ನು ಹೆಚ್ಚು ಹೆಚ್ಚಾಗಿ ಸ್ವಾಧೀನಪಡಿಸಿಕೊಳ್ಳಲು ಅವಕಾಶ ಮಾಡಿಕೊಡಲಿದೆ. ಬರುವ ಜೂನ್ ತಿಂಗಳಲ್ಲಿ ಸರ್ಕಾರ ನಡೆಸಲು ಉದ್ದೇಶಿಸಿರುವ ವಿಶ್ವ ಕೃಷಿ ಬಂಡವಾಳ ಸಮಾವೇಶವು ರಾಜ್ಯದ ಕೃಷಿ ಕ್ಷೇತ್ರದ ಕಂಪೆನೀಕರಣಕ್ಕೆ ನಾಂದಿಯಾಗಲಿದ್ದು ರಾಜ್ಯದ ರೈತರ ಮತ್ತು ಕೃಷಿ ಕೂಲಿಕಾರರ ಅವನತಿ ಇನ್ನಷ್ಟು ತೀವ್ರವಾಗಲಿದೆ.

ರಾಜ್ಯದ ಒಟ್ಟು ಸುಮಾರು 25 ಲಕ್ಷ ಕೃಷಿ ಕೂಲಿಕಾರರ ಕುಟುಂಬಗಳಲ್ಲಿ ಶೇ.90 ರಷ್ಟು ಕುಟುಂಬಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿದ್ದಾರೆ. ಅವರಿಗೆ ಯಾವುದೇ ಸ್ವಂತ ಆಸ್ತಿ ಎಂಬುದು ಇಲ್ಲ. ರೈತರ ಭೂಮಿಯಲ್ಲಿ ಕೆಲಸ ಮಾಡಿಕೊಂಡೇ ಅವರು ಜೀವನ ನಿರ್ವಹಿಸುತ್ತಿರುತ್ತಾರೆ. ಇವರನ್ನು ಕಡೆಗಣಿಸುವ ಅಭಿವೃದ್ಧಿ ನೈಜ ಅಭಿವೃದ್ಧಿ ಆಗದು. ಇವರಿಗೆ ತಮ್ಮ ಗ್ರಾಮಗಳಲ್ಲೇ ವರ್ಷವಿಡೀ ಕೆಲಸ, ಬೆಲೆ ಏರಿಕೆಗೆ ತಕ್ಕಂತೆ ವೇತನ, ಅಲ್ಲದೆ ಅವರಿಗೆ ವಾಸಕ್ಕೆ ಮನೆ, ಸಮರ್ಪಕವಾದ ಪಡಿತರ ವ್ಯವಸ್ಥೆ, ಉಚಿತ ಆರೋಗ್ಯ ಮತ್ತು ಶಿಕ್ಷಣ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾದರೆ ಮಾತ್ರ ಅವರು ಹೊಟ್ಟೆಪಾಡಿಗಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದನ್ನು ತಡೆಗಟ್ಟಬಹುದು. ಈ ವಿಷಯಗಳಲ್ಲಿ ನೆರೆಯ ಕೇರಳ ರಾಜ್ಯವು ಮಾದರಿಯಾಗಿದ್ದು ಕೃಷಿ ಕೂಲಿಕಾರರಿಗಾಗಿ ಒಂದು ಸಮಗ್ರ ಶಾಸನವನ್ನು ಅಲ್ಲಿ ರೂಪಿಸಿ ಜಾರಿಗೊಳಿಸಲಾಗುತ್ತದೆ. ಇಂತಹ ಯಾವುದೇ ಪ್ರಸ್ತಾವ ಇಲ್ಲದ ಈ ಕೃಷಿ ಬಜೆಟ್ ರಾಜ್ಯದ ಕೃಷಿ ರಂಗ ಎದುರಿಸುತ್ತಿರುವ ಸಮಸ್ಯೆಗಳಿಗೆ ಯಾವುದೇ ಪರಿಹಾರ ಒದಗಿಸದು ಎಂದು ಪತ್ರಿಕಾ ಹೇಳಿಕೆಯಲ್ಲಿ ಸಂಘಟನೆಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ತಿಳಿಸಿದ್ದಾರೆ.

ಬಿಜೆಪಿಯ ಕೃಷಿ ಬಜೆಟ್-ಕೃಷಿ ಬಿಕ್ಕಟ್ಟನ್ನು ಉಲ್ಬಣಗೊಳಿಸುವ ರೈತ ವಿರೋಧಿ ಬಜೆಟ್ - ಕರ್ನಾಟಕ ಪ್ರಾಂತ ರೈತ ಸಂಘ

ದೇಶದಲ್ಲಿಯೇ ಚರಿತ್ರಿಕ ಪ್ರಪ್ರಥಮ ಕೃಷಿ ಬಜೆಟ್ ಎಂದು ಬೊಗಳೆ ಬಿಡುತ್ತಿರುವ ರಾಜ್ಯ ಸರ್ಕಾರದ ಬಿಜೆಪಿಯ ಬಜೆಟ್, ರಾಜ್ಯದ ಕೃಷಿ ಬಿಕ್ಕಟ್ಟನ್ನು ಉಲ್ಬಣಗೊಳಿಸುವ ರೈತ ಮತ್ತು ಕೃಷಿಕೂಲಿಕಾರರ ವಿರೋಧಿ ಬಜೆಟ್‌ಯೆಂದು ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ರಾಜ್ಯ ಸಮಿತಿ ಅಭಿಪ್ರಾಯಪಡುತ್ತದೆ.

ರೈತರಿಂದ ಕೃಷಿ ಭೂಮಿಯನ್ನು ಕಿತ್ತುಕೊಳ್ಳುವ ಭೂ ಸ್ವಾಧೀನ ಪ್ರಕ್ರಿಯೆಯನ್ನು ತೀವ್ರಗೊಳಿಸುವ ದೃಷ್ಟಿಯಿಂದ ಭೂ ಸುಧಾರಣಾ ಕಾಯ್ದೆ ತಿದ್ದುಪಡಿ, ಕೃಷಿ ಜಾಗತೀಕ ಬಂಡವಾಳ ಹೂಡಿಕೆದಾರರ ಸಮಾವೇಶಗಳ ಮೂಲಕ ಇಡೀ ರೈತರು ವಿಶೇಷವಾಗಿ ಬಡ, ಮಧ್ಯಮ ರೈತರ ಆಧಾರಿತ ರಾಜ್ಯದ ಕೃಷಿಯನ್ನು 'ಕಂಪನಿ ಕೃಷಿಯನ್ನಾಗಿ' ಮಾಡಲು ರಾಜ್ಯ ಸರ್ಕಾರದ ಬಜೆಟ್ ಮುಂದಾಗಿದೆ. ಇದು, ಕೃಷಿ ಬಿಕ್ಕಟ್ಟನ್ನು ಮತ್ತಷ್ಟನ್ನು ಹೆಚ್ಚು ಮಾಡಿ, ರೈತರ ಆತ್ಮಹತ್ಯೆಗಳನ್ನು ಹೆಚ್ಚಿಸಲಿದೆ. ಕೃಷಿರಂಗವನ್ನು ಮತ್ತಷ್ಟು ಬಿಕ್ಕಟ್ಟಿಗೆ ತಳ್ಳುವ ಕ್ರೂರ ಕ್ರಮವಾಗಿದೆ. 200-300 ಕೋಟಿ ರೂ.ಗಳ ಸಹಾಯದ ಶೇ.1 ರ ಬಡ್ಡಿ ದರದಲ್ಲಿ ಕೃಷಿ ಸಾಲದ ಬಗ್ಗೆ ತುಂಬಾ ಮಾತನಾಡುವ ರಾಜ್ಯ ಬಜೆಟ್, ಬ್ಯಾಂಕ್‌ಗಳ ಸಾಲಗಳಿಂದ ವಂಚಿತರಾಗಿ ಖಾಸಗಿ ಬಡ್ಡಿ ಸಾಹುಕಾರರ ಕಪಿಮುಷ್ಟಿಯಿಂದ ನರಳುತ್ತಿರುವ ಲಕ್ಷಾಂತರ ಬಡ ಮಧ್ಯಮ ರೈತ ಕುಟುಂಬಗಳಿಗೆ ಸಾಲದ ಬಲೆ ವಿಸ್ತರಿಸುವ ಬಗ್ಗೆ ಚಕಾರವೆತ್ತಿಲ್ಲದಿರುವುದನ್ನು ರೈತ ಸಂಘ ಖಂಡಿಸುತ್ತದೆ. ಸಂಘ ಪರಿವಾರದ ರಹಸ್ಯ ಅಜೆಂಡಾಗಳನ್ನು ಜಾರಿ ಮಾಡುವ ಸಾವಯವ ಕೃಷಿಗೆ 200 ಕೋಟಿ, ಗೋಶಾಲೆಗೆ ಭೂಮಿ, ಜೈವಿಕ ಇಂಧನಕ್ಕೆ ಸಿಕ್ಕಾಪಟ್ಟಾ ಭೂಮಿ, ಇತ್ಯಾದಿಗಳ ಬಗ್ಗೆ ತುಂಬಾ ಉದಾರವಾಗಿರುವ ರಾಜ್ಯ ಬಜೆಟ್, ರಾಜ್ಯದ ಸುಮಾರು ಒಂದು ಕೋಟಿ ಸಂಖ್ಯೆಯಲ್ಲಿರುವ ಕೃಷಿ ಕೂಲಿಕಾರರ ಬಗ್ಗೆ ಪ್ರಸ್ತಾಪವೇ ಇಲ್ಲ. ಬೆಲೆ ಏರಿಕೆಯ ಹಿನ್ನೆಲೆಯಲ್ಲಿ ಕೆ.ಜಿ. ರೇಷನ್ 2.00 ರೂ.ಇಳಿಸುವ ಬಗ್ಗೆ ಮಾತಾನಾಡದೇ ಇಡೀ ದಕ್ಷಿಣ ಭಾರತದಲ್ಲಿ ಅತ್ಯಂತ ಹೆಚ್ಚು ಹಸಿವಿನ ರಾಜ್ಯವಾಗಿ ಕರ್ನಾಟಕವನ್ನು ಮಾರ್ಪಡಿಸಿದ್ದಾರೆ. ಕೃಷಿ ಯಂತ್ರಗಳ ತಯಾರಿಕೆ ಕಂಪನಿಗಳ ಲೂಟಿಗೆ ಅವಕಾಶ ಮಾಡಿಕೊಡುವ ಸಬ್ಸಿಡಿಗಳು, ಸುವರ್ಣ ಭೂಮಿ ಯೋಜನೆಯ ಹೆಸರಿನಲ್ಲಿ ರೈತ ಕುಟುಂಬಗಳಿಗೆ ನೇರ 1000 ಕೋಟಿಗೂ ಹಣ ಹಂಚುವ ಯೋಜನೆಯಲ್ಲಿ ರೈತರ ಹಿತಕ್ಕಿಂತ ಬಿಜೆಪಿ ಪಕ್ಷ ಮತ್ತು ಸಂಘ ಪರಿವಾರದ ಹಿತವೇ ಮುಖ್ಯವೆಂದು ಬಹಿರಂಗವಾಗಿ ಗೋಚರಿಸುತ್ತಿದೆ.

ಒಟ್ಟಾರೆ ಸಾಕಷ್ಟು ಅಬ್ಬರದ ಪ್ರಚಾರ, ನಾಟಕಗಳನ್ನು ಪ್ರದರ್ಶಿಸುತ್ತಾ, ಇಂದು ಮಂಡಿಸಲಾಗಿರುವ ಬಜೆಟ್, ರೈತರಿಗೆ ಮತ್ತು ಕೂಲಿಕಾರರಿಗೆ ಮಾಡಿದ ಮೋಸವೆಂದು ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ರಾಜ್ಯ ಸಮಿತಿಯು ಸ್ಪಷ್ಟ ಅಭಿಪ್ರಾಯವಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದೂರುದ್ ಬ್ಯಟ್ಟ ನುಣ್ಣಗೆ

ಯಣ್ಣ ಯಳ್ಡ್ ಮೂರು ದಿನದಿಂದ ಕಾಣ್ತಿರ್ಲಿಲ್ವಲ್ಲ ಎಲ್ಲಿಗೋಗಿದ್ದೆ?

ಏ.. ಸಕ್ಲೇಶ್ ಪುರದತ್ರ ಮದ್ವಿಗೋಗಿದ್ದೆ, ಅಂಗೆಯ ಕುಕ್ಕೆ ಸುಬ್ರಮಣ್ಯಕ್ಕೋಗಿ ಬಂದೆ.

ಏನಾರ ಅರ್ಕೆ ಮಾಡ್ಕಂಡಿದ್ಯ?

ಅರ್ಕೆನೂ ಇಲ್ಲ, ಪರ್ಕೆನೂ ಇಲ್ಲ, ಅಷ್ಟ್ ದೂರ ಓಗಿದ್ನಲ, ನೋಡನ ಅಂತ ಓಗಿದ್ದೆ, ಆದ್ರೆ ದೇವುಸ್ತಾನದ ವಳಿಕೋಗ್ಲಿಲ್ಲ. ಅಂಗೆ ಬಂದೆ

ಅಷ್ಟ್ ದೂರ ಓಗಿ ವಳಿಕೋಗ್ದೇ ಬಂದೆ ಅಂದ್ರೆ ನಂಬಕೆ ಆಗದಿಲ್ಲಪ್ಪ. ಯಾಕೆ, ಬಾಗ್ಲಾಕಿದ್ರೆ?

ಬಾಗ್ಲು ತಗ್ದೇ ಇತ್ತು, ಆದ್ರೆ ಗಂಡುಸ್ರು ಅಂಗಿ, ಬನೀನು ಬಿಚ್ಚಿ ಯಗ್ಲು ಮ್ಯಾಲೆ ಆಕ್ಯಂಡು ವಳಿಕೆ ಬರ್ಬೇಕು ಅಂದ್ರು. ನಂಗೆ ಬಟ್ಟೆ ಬಿಚ್ಚಿ ಓಗಕೆ ಇಷ್ಟ ಇರ್ಲಿಲ್ಲ. ಆದ್ರೂ ಓಗ್ಲಿ ಅಂತ ಅಂಗಿ ಬಿಚ್ಚಿ ಯಗ್ಲು ಮ್ಯಾಲಾಯ್ಕಂಡೆ. ಜೋಬಲಿದ್ ಮೊಬೈಲು, ಚಿಲ್ರೆ ದುಡ್ಡು ಯಲ್ಲ ಬಿದ್ದೋದ್ವು. ಮೊಬೈಲು ವಡ್ದೋಯ್ತು. ಅಂಗೆ ಸಿಟ್ ಬಂದ್ಬುಡ್ತು ನೋಡು, ಸುಮ್ಕೆ ಅಂಗಿ ಆಕ್ಯಂಡು ಬಾಗ್ಲಲ್ಲೇ ಕೈಮುಗ್ದು ಬತ್ತಲೇ ಇದ್ದೆ.

ಅಲ್ಲಿ ಮದ್ಲಿಂದಲೂ ಅಂಗೆಯಪ್ಪ.

ಮದ್ಲಿಂದಲಾರ ಆಗ್ಲಿ ಯಾವಾಗ್ಲಾರ ಆಗ್ಲಿ, ಅಂಗಿ ಯಾಕೆ ಬಿಚ್ಬೇಕು, ಅಂಗೆ ಓದ್ರೆ ಏನಾದಳು?

ಅಯ್ಯೋ ಆ ಕಡೆ ಅಂಗೆಯ. ನಿಂಗೆ ಇನ್ನೊಂದ್ ಗೊತ್ತಿಲ್ಲ, ಆ ದೇವುಸ್ತಾನದಲ್ಲಿ ಅದ್ಯಾವತ್ತೋ ಒಂದಿನ ಜನ ಉಂಡಿರ ಎಂಜ್ಲು ಯಲೆ ಮ್ಯಾಲೆ ಅರ್ಕೆ ಮಾಡಿಕಂಡೋರು ಉರುಳು ಸೇವೆ ಮಾಡ್ತರಂತೆ. ಪೇಪ್ರಲಿ ಬಂದಿತ್ತು. ಅದ ನೋಡಿದ್ರೆ ನೀನು ಇನ್ನೇನನ್ನಿವೆ? ಏನೂ ಅಂತಿರ್ಲಿಲ್ಲ, ಇವ್ಯಾವ್ರೋ ತಲೆಕೆಟ್ಟವ್ರು ಅಂದ್ಕಂಡು ಬತ್ತಿದ್ದೆ. ಅವ್ರಿಗಲ್ವಂತೆ ತಲೆ ಕೆಟ್ಟಿರದು, ಅಂಗೆ ಯಂಜ್ಲು ಯಲೆ ಮ್ಯಾಲೆ ಯಾಕೆ ಬಿದ್ದು ವರಳಾಡ್ತಿರಿ, ಇದ್ಯಲ್ಲ ಸರಿ ಇಲ್ಲ, ನಿಲ್ಸಿ ಅಂತ ಯಾರೋ ನಿನ್ನಂತರು ಏಳಕೋದ್ರೆ ನಾವು ಮಾಡದು ಮಾಡದೆಯ, ನಿಂಗೆಲ್ಲೋ ತಲೆ ಕೆಟ್ಟದೆ ಸುಮ್ಕೋಗಯ್ಯ ಅಂದ್ರಂತೆ.

ಕ್ಯಾತೆ

ಈ. ಬಸವರಾಜು
ಮಲ್ಲೇನಹಳ್ಳಿ

ಆದೇನೋ ಬುದ್ದಿ ಏಳಕೋದರ್‍ಗೆ ಯದ್ಗೆ ವದ್ರಂತೆ ಅಂದಂಗಾಯ್ತು. ಮುಂದಿನ್ವರ್ಸ ಅದ್ಯಾತ್ರು ಮ್ಯಾಲೆ ಉರುಳು ಸ್ಯಾವೆ ಮಾಡ್ತರೋ ನೋಡ್ಬೇಕಪ್ಪ. ಆದ್ರೂ ಇವ್ರು ನಮ್ ಅಂಗಿ ಬಿಚ್ಸಿ ಮರ್ಯಾದಿ ಕಳ್ಯದ ನಿಲ್ಲುಸ್ಬೇಕಪ್ಪ.

ಯಣ್ಣ, ನೀನು ಇದ್ನ ಯಾಕೋ ಸೀರಿಯಸ್ಸಾಗಿ ತಗಂಡಂಗಿದ್ದಿಯಲ, ಯಾಕೆ?

ಈಗ ನೋಡು, ಅಂಗಿ ಬಿಚ್ಚಿಸ್ತರೆ, ಪಂಚೆ ಆಕಿರ್ತಿವಿ, ಇದ್ಕೇನರ್ತ ಇದ್ದತೆ?

ಇಂದೆ ಯಾವನೋ ಏನೋ ಮಾಡ್ದ, ಅದ ಈಗ್ಲೂ ನಡಿಸ್ಕಂಡು ಬತ್ತಾ ಇರ್ಬೇಕು.

ಅದ್ನೇ ಮೂಡ್ನಂಬಿಕೆ ಅನ್ನದು, ಈವತ್ತಿನ್ ಕಾಲ್ಕೆ ಇದ ಬೇಕೇ ಬ್ಯಾಡ್ವೇ ಅಂತ ಯೋಚ್ನೆ ಮಾಡ್ಬೇಕು. ಅದ ಬುಟ್ಟು ಅವ್ನ ಏಳ್ದ ಅಂತವ ನಾವ್ ನಡ್ಕಳದಲ್ಲ. ನಾನಿನ್ಯಾವತ್ತೂ ಆ ಕಡಿಕೋಗದಿಲ್ವಪ್ಪ.

ನೀನೋಗ್ದಿದ್ರೆ ಏನು, ಓಗರು ಓಯ್ತರೆ ಬುಡು.

ಅಂಗಲ್ಲ, ಇದ ಕ್ವಚನ್ ಮಾಡ್ಬೇಕು, ಆಗ ಜನ ಯೋಚ್ನೆ ಮಾಡ್ತರೆ, ಮುಂದೆ ಯಾವತ್ತಾರ ಅದ ತಗದಾಕ್ತರೆ.

ಈಗ ನಮ್ ಬೆಳ್ಗೂಳುದ್ ಸ್ವಾಮಿಗಳ್ನೆ ತಗಳಪ್ಪ. ಮೈಮ್ಯಾಲೆ ಬಟ್ಟೆನೇ ಆಕದಿಲ್ಲ. ಇದ್ಕೇನಂತಿ.

ಅದ್ಕೇಳನ, ಅವ್ರೇ ತಿಳ್ಕಬೇಕು. ಈ ಕಾಲ್ದಲೂ ಅಂಗಿದ್ದರೆ? ಅವತ್ತು ವಬ್ ನಿರ್ವಾಣ್ ಸ್ವಾಮಿಗಳು ಓಯ್ತಾ ಇದ್ರು. ನಮ್ಮುಡ್ಗ ಅಂಗೆ ಯದ್ರಿಕ್ಯಂಡು ಓಡಿ ಬತ್ತಪ್ಪ.

ಆದೋಗ್ಲಿ, ದೇವುಸ್ತಾನಿಕ್ಕೋಗಿದ್ದಾಗ ನದೀಲಿ ಮುಳುಗಿ ಬಂದ್ಯ.

ಅದಿನ್ನೊಂದ್ ಕತೆ. ನೀರಾದ್ ನೀರ್ಯಲ್ಲ ಕ್ವಳೆ, ಸುಮ್ಕೆ ಬಂದ್ನಪ್ಪ.

ಕ್ವಳೆ ಅಂದಾಗ ಒಂದ್ ಮಾತೇಳ್ಬೇಕು. ಅಯ್ಯಪ್ ಸ್ವಾಮಿಗೋಗಿದ್ನಲ, ಪಂಪ ನದೀಲಿ ಸ್ನಾನ ಮಾಡ್ತಿದ್ದೆ. ಅವ್ ನ್ಯಾವನೋ ನೀರ್ನಲ್ಲೇ ಗಲೀಜ್ ಮಾಡಿದ್ದ. ಮೂಗ ಮುಚ್ಚಂಡು ನೀರ್ನಿಂದ ಓಡಿಬಂದೆ.

ನೀನೆಲ್ಲಿಂದ ಎಲ್ಗೇ ಓಗು ಇದೇ ಗತಿ, ದೂರುದ್ ಬ್ಯಟ್ಟ ನುಣ್ಣಗೆ ಅಂತರಲ ಅಂಗೆ. ನಾವು ಏನೋ ಅಂನ್ಕಂಡು ಅಷ್ಟ್ ದೂರ ಓಯ್ತಿವಿ. ಅಲ್ಲಿ ಇಂಗಾಯ್ತದೆ.

ಕನ್ನಡ ವಾರಪತ್ರಿಕೆ

ಕೃಷಿ ಬಜೆಟ್ ಎಂಬ ಕೃಷಿಕರ ಮರಣ ಶಾಸನ


ಇಡೀ ದೇಶದಲ್ಲೇ ಪ್ರಥಮ, ಇತಿಹಾಸದಲ್ಲೆ ಪ್ರಪ್ರಥಮ ಎಂದೆಲ್ಲಾ ಡಂಗೂರ ಬಾರಿಸಿಕೊಂಡು ಮಂಡನೆಯಾದ 'ದೇಶದ ಪ್ರಪ್ರಥಮ ಕೃಷಿ ಬಜೆಟ್'ನ ಒಳಗಿನ ನಿಜವಾದ ಹೂರಣ ಏನು ? ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್ಎಸ್) ಬೆಂಗಳೂರಿನ ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಫೆಬ್ರವರಿ 25 ರಂದು ಸಂಘಟಿಸಿದ್ದ ಚರ್ಚೆಯಲ್ಲಿ ಮಂಡನೆಯಾದ ವಿಚಾರಗಳ ವರದಿ ಇದು. ನಿಮಗಾಗಿ. ಓದಿ.

ಅಲ್ಲಿ ನಿಜವಾದ ರೈತರು ರೈತ ಚಳುವಳಿ ಕಾರ್ಯಕರ್ತರು ನೆರೆದಿದ್ದರು. ಕೆ.ಪಿ.ಆರ್.ಎಸ್‌ನ ಜಿಲ್ಲಾ ಅಧ್ಯಕ್ಷರಾದ ವೆಂಕಟಾಚಲಯ್ಯ ಅಧ್ಯಕ್ಷತೆಯಲ್ಲಿ ಚರ್ಚೆ. ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಜಿ.ಎನ್.ನಾಗರಾಜ್‌ರವರು ಮೊದಲಿಗೆ ವಿಚಾರ ಮಂಡಿಸಿದರು. ನಂತರ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ವಿಚಾರ ಮಂಡಿಸಿದರು. ಅವರ ಮಾತಿನ ಪೂರ್ಣ ಪಾಠ ಮುಂದೆ ಇದೆ. ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಚಂದ್ರತೇಜಸ್ವಿ ವಂದಿಸಿದರು.

ಚುನಾವಣೆಗೆ ಮುಂಚೆಯೇ ಮತದಾರರಿಗೆ ಲಂಚ ಹಂಚುವ ಬಿಜೆಪಿ ಬಜೆಟ್

- ಜಿ.ಎನ್.ನಾಗರಾಜ್

ಕಳೆದ ವರ್ಷದ ಬಜೆಟ್‌ನಲ್ಲಿ ಕೃಷಿ ಸಂಬಂಧಿತ ವಿಷಯಕ್ಕೆ 40 ಪುಟಗಳನ್ನು ಇಡಲಾಗಿತ್ತು. ಈ ಬಾರಿ ಅದನ್ನೇ ಪ್ರತ್ಯೇಕ ಮಾಡಿ ಕೃಷಿ ಬಜೆಟ್ ಎಂದು ಮಂಡಿಸಲಾಗಿದೆ. ಇದೊಂದು 'ಕಟ್ ಅಂಡ್ ಪೇಸ್ಟ್' ಬಜೆಟ್ ಆಗಿದೆ.



ಕೃಷಿ ಕೆಡಗು ಉಪೇಕ್ಷೆಯಲಿ ...ಅಂದರೆ ಉಪೇಕ್ಷೆ ಮಾಡಿದರೆ ಕೃಷಿ ಕೆಡುತ್ತದೆ ಎಂಬ ವಚನವನ್ನು ಬಜೆಟ್‌ನಲ್ಲಿ ಬಳಸಲಾಗಿದೆ. ಯಡಿಯೂರಪ್ಪನವರು ಮಂಡಿಸಿರುವ ಕೃಷಿ ಬಜೆಟ್ ಅನ್ನು ನೋಡಿದರೆ ಕೃಷಿ ಬಜೆಟ್ ಕೆಡಗು ಉಪೇಕ್ಷೆಯಲಿ ಎಂದು ವಚನವನ್ನು ಬದಲಿಸಿಕೊಳ್ಳಬೇಕಾಗುತ್ತದೆ.

ಒಂದು ರಾಜ್ಯದ ಬಜೆಟ್ ಮಂಡಿಸುವುದೆಂದರೇನು ? ಎಷ್ಟು ಸಿದ್ದತೆ ಬೇಕು ! ಎಷ್ಟು ಆಳವಾದ ತಿಳುವಳಿಕೆ ಬೇಕು ! ಹಳ್ಳಿ ಹಳ್ಳಿಗಳ ಪರಿಚಯ ಬೇಕು. ಯಡಿಯೂರಪ್ಪನವರ ಬಜೆಟ್‌ನ ಹಿಂದೆ ಈ ಯಾವುವೂ ಇಲ್ಲ.

ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ಕೃಷಿಕರು ಇದ್ದಾರೆ ? ಸಣ್ಣ ರೈತರೆಷ್ಟು ? ಮಧ್ಯಮ ರೈತರೆಷ್ಟು ? ದೊಡ್ಡ ರೈತರೆಷ್ಟು ? ಒಣ ಭೂಮಿ ಎಷ್ಟು ? ನೀರಾವರಿ ಭೂಮಿ ಎಷ್ಟಿದೆ ? ಯಾವ ಯಾವ ಪರಿಕರ, ಸಾಮಾಗ್ರಿಗಳು ಕೃಷಿಯಲ್ಲಿ ಬಳಕೆಯಾಗುತ್ತಿವೆ ? ಕರ್ನಾಟಕದಲ್ಲಿ ಕರಾವಳಿ, ಬಯಲು ಸೀಮೆ, ...ಹೀಗೆ ಯಾವ ಯಾವ ಪ್ರಾದೇಶಿಕ ವಿಭಾಗಗಳಿವೆ ? ರಾಜ್ಯದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಯಾವ ಯಾವ ರೀತಿಯ ಮಣ್ಣಿದೆ ? ವಿವಿಧ ಭಾಗದ ಬೆಳೆ ಪದ್ಧತಿಗಳೇನು ? ಎಲ್ಲೆಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯುತ್ತಿದ್ದಾರೆ ? ಬೆಳೆ ಬೆಳೆಯಲು ರೈತರ ಬಳಿ ಹಣ ಇದೆಯೇ ? ಇಲ್ಲವೇ ? ಹಣ ಇಲ್ಲದವರು ಅದನ್ನು ಎಲ್ಲಿಂದ ಹೊಂದಿಸಿಕೊಳ್ಳುತ್ತಾರೆ ? ಈ ಯಾವ ಪ್ರಶ್ನೆಗಳ ಕುರಿತು ಏನೊಂದು ಜ್ಞಾನವಿಲ್ಲದ ಯಡಿಯೂರಪ್ಪನವರ ಕಟ್ ಅಂಡ್ ಪೇಸ್ಟ್ ಬಜೆಟ್ ಇದು. ಕರ್ನಾಟಕ ರಾಜ್ಯದ ಗಂಭೀರ ಕೃಷಿ ಬಿಕ್ಕಟ್ಟಿನ ಸಂದರ್ಭದಲ್ಲೂ, ರೈತರ ಸಾಲು ಸಾಲು ಆತ್ಮಹತ್ಯೆಗಳ ಈ ಸಂದರ್ಭದಲ್ಲಿಯೂ ಕೂಡ ....ರೈತರ ಆತ್ಮಹತ್ಯೆ ಎಂಬ ಮಾತಿನ ಪ್ರಸ್ತಾಪವೇ ಬಜೆಟ್‌ನಲ್ಲಿ ಇಲ್ಲ.

ಕೃಷಿ ಬಜೆಟ್ ಮಂಡನೆ ದಿನ ಇತ್ತ ಸ್ವಾತಂತ್ರ್ಯ ಪಾರ್ಕಿನಲ್ಲಿ 'ರೈತರೊಂದಿಗೆ' ಮೆರವಣಿಗೆ ಮಾಡುವ ಅದೇ ಹೊತ್ತಿನಲ್ಲಿ ಅತ್ತ ಬೆಳಗಾಂನಲ್ಲಿ ನಿಜವಾದ ರೈತ ಆತ್ಮಹತ್ಯೆಗೆ ಶರಣಾಗಿದ್ದ.

ರಾಜ್ಯದ ರೈತರು ಏನು ಬೆಳೆಯುತ್ತಿದ್ದಾರೆ ? ಎಲ್ಲಿ ಮಾರುತ್ತಿದ್ದಾರೆ ? ಬೆಲೆ ಏರುಪೇರಿನ ಸಮಸ್ಯೆ ಏನು? ತೊಗರಿ, ಕಬ್ಬು, ಈರುಳ್ಳಿ, ಟೆಮೋಟೊ, ಭತ್ತ, ಮುಂತಾದ ಬೆಳೆ ಬೆಳೆದ ರೈತರ ಪಾಡೇನಾಗಿದೆ ? ಈ ಕುರಿತು ಒಂದೇ ಇಂದು ವಾಕ್ಯ ಈ ಬಜೆಟ್‌ನಲ್ಲಿ ಇಲ್ಲ.

ದವಸ ಧಾನ್ಯಗಳನ್ನು ಜನರು ಕೊಂಡುಕೊಳ್ಳುವಾಗ ಅವರಿಗೆ ಬೆಲೆಗಳು ದುಬಾರಿ. ಅದೇ ರೀತಿ ರೈತರು ಮಾರುವಾಗ ಅವುಗಳ ಬೆಲೆ ಕಡಿಮೆ. ಯಾಕೆ ಹೀಗೆ ? ಎಂಬ ಬಗೆಗೆ ಮಾರುಕಟ್ಟೆ ಸರಪಳಿಯ ಬಗೆಗೆ ಒಂದು ಸಣ್ಣ ವಿಶ್ಲೇಷಣೆಯೂ ಇಲ್ಲ.

ಕೋಟಿ ವಿದ್ಯೆಯಲಿ ಭ್ರಷ್ಟ ವಿದ್ಯೆಯೇ ಮೇಲು!?

ರಾಜ್ಯದ ಹತ್ತು ಲಕ್ಷ ಜನರಿಗೆ ಎರಡು ಕಂತಿನಲ್ಲಿ ತಲಾ ಹತ್ತು ಸಾವಿರ ರೂಪಾಯಿಗಳ ನಗದು ಹಣ ನೀಡುವ ಯೋಜನೆ ಬಜೆಟ್‌ನಲ್ಲಿದೆ. ಇಡೀ ದೇಶದಲ್ಲೇ ಎಲ್ಲೂ ಇಲ್ಲದ ಯೋಜನೆ ಇದು. ಆ ಅರ್ಥದಲ್ಲಿ ಅನೈತಿಹಾಸಿಕ ಯೋಜನೆ.

ರಾಜ್ಯದಲ್ಲಿ ಯಾವಾಗ ಬೇಕಾದರೂ ವಿಧಾನ ಸಭಾ ಚುನಾವಣೆ ಬಂದು ಬಿಡಬಹುದು ಎಂಬ ಪರಿಸ್ಥಿತಿ ಇದೆ. ಚುನಾವಣಾ ಆಯೋಗ ಬೇರೆ ಚುನಾವಣೆಯ ಮುಂಚಿನ ದಿನಗಳಲ್ಲಿ ಮನೆ ಮನೆ ಪ್ರಚಾರವನ್ನು ನಿಷೇಧಿಸುವ ಪ್ರಸ್ತಾಪವನ್ನಿಟ್ಟಿದೆ. ಇಂತಹ ಸನ್ನಿವೇಶದಲ್ಲಿ ಸರ್ಕಾರದ ಹಣವನ್ನು ಬಳಸಿ ರಾಜ್ಯದ 10 ಲಕ್ಷ ಕುಟುಂಬಗಳಿಗೆ ಬಿಜೆಪಿ ಪಕ್ಷಕ್ಕೆ ಓಟು ಹಾಕಲು ಲಂಚ ನೀಡುವುದೇ ಈ ಜನರಿಗೆ ಹಣ ಹಂಚುವ ಯೋಜನೆ.

ಈ ರೀತಿಯ ನಗದು ಹಣ ಜನರ ಕೈಗೆ ಪೂರ್ತಿಯಾಗಿ ಸೇರುವುದಿಲ್ಲ. ಈ ಯೋಜನೆ ಫಲಾನುಭವಿ ಆಯ್ಕೆ ಮಾಡಿಸುವ ಬಿಜೆಪಿ ಕಾರ್ಯಕರ್ತರು, ಮುಖಂಡರು ಮಧ್ಯವರ್ತಿಗಳ ಜೇಬು ತುಂಬುವ ಯೋಜನೆಯಾಗಿದೆ. ಬಿಜೆಪಿ ಕಾರ್ಯಕರ್ತರ ಚುನಾವಣಾ ಓಡಾಟಗಳ ಖರ್ಚನ್ನು ರಾಜ್ಯ ಖಜಾನೆಯಿಂದ ಭರಿಸುವ ಯೋಜನೆಯಾಗಿದೆ. ಈ ಯೋಜನೆಯ ಮೂಲಕ ಕೊನೆಗೆ ನಾಲ್ಕೋ, ಐದೋ ಸಾವಿರ ರೂಪಾಯಿಗಳು ಜನರ ಕೈಗೆ ಮುಟ್ಟಿದರೂ ಅದು ಕೃಷಿ ಉದ್ದೇಶಕ್ಕೆ, ಕೃಷಿಯ ಅಭಿವೃದ್ಧಿಗೆ ಬಳಕೆಯಾಗುವ ಸಂಭವ ಬಾರಿ ಕಡಿಮೆ ಇರುತ್ತದೆ. ಆ ಹಣ ಕುಟುಂಬದ ಇತರ ಅಗತ್ಯಗಳಿಗೆ ಖರ್ಚಾಗಿ ಹೋಗುತ್ತದೆ. ಈ ಹಣ ಕುಡುಕರು ಮುಂತಾದವರ ಕೈ ಸೇರಿದರೆ ಕುಡಿತ ಅಥವಾ ದುಂದು ವೆಚ್ಚಗಳಿಗೆ ಬಳಕೆಯಾಗಿ ಹೋಗುತ್ತದೆ.

ಸಾವಯವ ಕೃಷಿಗೆ ಬಜೆಟ್‌ನಲ್ಲಿ 200 ಕೋಟಿ ರೂಗಳನ್ನು ಘೋಷಿಸಲಾಗಿದೆ. ಒಟ್ಟಾರೆ ಸುಮಾರು 2000-2500 ಕೋಟಿ ರೂಪಾಯಿಗಳನ್ನು ಮತದಾರರಿಗೆ ಆಮಿಷ ಒಡ್ಡಲು ಹಾಗು ಸಂಘ ಪರಿವಾರದ ಜನರ ಜೇಬು ತುಂಬುವ ಯೋಜನೆಗಳಿಗೆ ಮೀಸಲಿಡಲಾಗಿದೆ.

ಕೃಷಿಗೆ ಜಾಗತಿಕ ಬಂಡವಾಳದ ಆಹ್ವಾನ
ರೈತರ ಭೂಮಿ ಕಿತ್ತುಕೊಳ್ಳುವ ದುಷ್ಟ ಯೋಜನೆ
ಕೃಷಿಯ ಕಂಪನೀಕರಣದ ಸಂಚು

- ಜಿ.ಸಿ. ಬಯ್ಯಾರೆಡ್ಡಿ

ಭೂಮಿ ಕೊಡುವ ಬಗ್ಗೆ ಚಕಾರವೆತ್ತದ ಕೃಷಿ ಬಜೆಟ್

ಕೃಷಿ ಪ್ರಶ್ನೆ ಶುರುವಾಗುವುದು ಭೂಮಿಯಿಂದ. ಅದನ್ನು ಟಾರ್ ರಸ್ತೆಯ ಮೇಲೋ ಇನ್ನೆಲ್ಲೋ ಮಾಡಲಾಗದು. ಕೃಷಿ ಮಾಡಲು ಭೂಮಿ ಬೇಕು. ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಭೂಮಿಯಲ್ಲಿ ಒಂದು-ಎರಡು ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿರುವ ಲಕ್ಷಾಂತರ ರೈತ ಕುಟುಂಬಗಳು ತಮ್ಮ ಭೂಮಿಯನ್ನು ಸಕ್ರಮ ಮಾಡಿ, ಹಕ್ಕು ಪತ್ರ ನೀಡಿ ಅಂತ ಅರ್ಜಿಗಳನ್ನು ಸಲ್ಲಿಸಿ ಕಾಯುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ 11,23,506 ಅರ್ಜಿಗಳು ಸರ್ಕಾರದ ಮುಂದಿವೆ. ಸರ್ಕಾರ ಅಂಕಿ ಅಂಶಗಳ ಪ್ರಕಾರವೇ ಇಂತಹ ಭೂಮಿಯ ಪ್ರಮಾಣ ಒಟ್ಟು ಸು. 42,05,686 ಎಕರೆಗಳಷ್ಟಿದೆ. ಸರ್ಕಾರ ಈ ಮನವಿಗಳನ್ನು ಇತ್ಯರ್ಥ ಮಾಡದೇ ಬಾಕಿ ಇರಿಸಿ ಕೊಂಡಿದೆ. ಇಲ್ಲವೇ ತಿರಸ್ಕರಿಸಲಾಗಿದೆ. ಇಡೀ ಬಜೆಟ್‌ನಲ್ಲಿ ಎಲ್ಲಿಯೂ ಈ ಬಗ್ಗೆ ಚಕಾರ ಎತ್ತಿಲ್ಲ. ಬಡವರಿಗೆ, ಭೂ ಹೀನರಿಗೆ ಭೂಮಿ ಕೊಡದೆ ಕೃಷಿ ಬಜೆಟ್ ಮಂಡನೆ ಅಂದರೆ ಅದರ ಅರ್ಥವೇನು ?

ಬುಡಕಟ್ಟು ಜನರು, ಇತರೆ ಅರಣ್ಯವಾಸಿ ಜನರು ವ್ಯವಸಾಯ ಮಾಡಿಕೊಂಡು ಬಂದಿರುವ ಭೂಮಿ ರಾಜ್ಯದಲ್ಲಿ ಸುಮಾರು ಒಂದು ಲಕ್ಷ ಎಕರೆಯಷ್ಟಿದೆ. ಅವರಿಗೆ ಭೂಮಿಯ ಒಡೆತನ ಸಿಕ್ಕಿಲ್ಲ. ಅಂದರೆ ಸರಿ ಒಟ್ಟಾರೆ ಸುಮಾರು 50 ಲಕ್ಷ ಎಕರೆಯಷ್ಟು ಭೂಮಿಯಲ್ಲಿ ವ್ಯವಸಾಯ ಮಾಡುತ್ತಿರುವ ಸಣ್ಣ ರೈತರ ಅತಂತ್ರ ಸ್ಥಿತಿಯನ್ನು ಗುರುತಿಸಿಯೇ ಇಲ್ಲ.

ಯಡಿಯೂರಪ್ಪನವರಿಗೆ ಕೃಷಿಯ ಬಗ್ಗೆ ಯಾವ ಜ್ಞಾನವೂ ಇಲ್ಲ. ಕೃಷಿಕರ ಸಮಸ್ಯೆಗಳ ಬಗ್ಗೆ ಎ.ಬಿ.ಸಿ.ಡಿ. ಯೂ ಗೊತ್ತಿಲ್ಲ. ಆಗ್ನೇಯ ಏಷ್ಯಾದ ರಾಷ್ಟ್ರಗಳೊಂದಿಗೆ ಕೇಂದ್ರ ಸರ್ಕಾರ ಮಾಡಿಕೊಂಡಿರುವ ಮುಕ್ತ ವ್ಯಾಪಾರ ಒಪ್ಪಂದವೂ ದೇಶದ ಕೃಷಿಯ ಮೇಲೆ ಹಾಗೂ ಕರ್ನಾಟಕದ ಕೃಷಿಯ ಮೇಲೆ ಗಂಭೀರ ದುಷ್ಪರಿಣಾಮ ಬೀರುತ್ತಿದೆ. ಅಡಿಕೆ,ತೆಂಗು, ಏಲಕ್ಕಿ, ಸಾಂಬಾರ್, ಪದಾರ್ಥಗಳ ಮುಕ್ತ ಆಮದಿನಿಂದ ಕರ್ನಾಟಕದ ಕರಾವಳಿಯ ರೈತರು ತೀರಾ ತೊಂದರೆಗೆ ಸಿಕ್ಕಿದ್ದಾರೆ. ಆ ದೇಶಗಳಲ್ಲಿ ಉತ್ಪಾದನಾ ವೆಚ್ಚವು ಕಡಿಮೆ ಇದೆ. ಹಾಗಾಗಿ ಬೆಲೆ ಕೂಡ ಕಡಿಮೇ ಇರುತ್ತದೆ.

ಕರ್ನಾಟಕ ಕೃಷಿ ಬಿಕ್ಕಟ್ಟಿನ ಸುಳಿಯಲ್ಲಿದೆ. ರೈತರು ತಾವು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದ ಪರಿಸ್ಥಿತಿಯಲ್ಲಿ ಮತ್ತು ಬೆಳೆ ವೈಫಲ್ಯಗಳಿಂದ ಆತ್ಮಹತ್ಯೆಯ ಹಾದಿ ಹಿಡಿದಿದ್ದಾರೆ. ಕೂಲಿಕಾರರು, ಬಡರೈತರು ಗುಳೆ ಏಳುವುದು, ವಲಸೆ ಹೋಗುವುದು ಹೆಚ್ಚುತ್ತಿದೆ. ಆದರೆ ಈ ಯಾವುದರ ಬಗೆಗೂ ವಿವೇಚನೆ ಇಲ್ಲದೇ ಯಡಿಯೂರಪ್ಪನವರು ಕೃಷಿ ಬಜೆಟ್ ಹೆಸರಿನಲ್ಲಿ ಹಾಚು ಪಾಚು ಬಜೆಟೊಂದನ್ನು ಮಂಡಿಸಿದ್ದಾರೆ.

ಕೇಂದ್ರ ಸರ್ಕಾರದ ರೈತ ವಿರೋಧಿ, ದೇಶ ವಿರೋಧಿ ನೀತಿಗಳನ್ನು ಗುರುತಿಸದೇ ಕೃಷಿ ವಿಷಯದಲ್ಲಿ ಮುಂದೆ ಹೋಗುವುದು ಸಾಧ್ಯವೇ ಇಲ್ಲ. ರಸಗೊಬ್ಬರ ಮೇಲಿನ ನಿಯಂತ್ರಣ ರದ್ದತಿ, ಪೆಟ್ರೋಲ್, ಡೀಸೆಲ್‌ಗಳ ತೀವ್ರ ಬೆಲೆ ಏರಿಕೆ, ಜನವಿರೋಧಿಯಾದ ಬೀಜ ಕಾಯ್ದೆ ತಿದ್ದುಪಡಿ........ಇಂತಹ ನೀತಿಗಳಿಗೆ ಸವಾಲು ಹಾಕದೇ ನಮ್ಮ ಕೃಷಿ ಬಿಕ್ಕಟ್ಟಿಗೆ ಪರಿಹಾರದ ದಾರಿ ಕಾಣುವುದು ಸಾಧ್ಯವಿಲ್ಲ.

ಕೃಷಿಯಲ್ಲಿ ಉದ್ಯೋಗಾವಕಾಶಗಳ ಪ್ರಮಾಣವು ಕೆಲ ವರ್ಷಗಳ ಹಿಂದೆ ಶೇ. 65 ಇದ್ದದ್ದು ಈಗ ಶೇ. 61 ಕ್ಕೆ ಇಳಿದಿದೆ, ಒಟ್ಟಾರೆ ಉತ್ಪನ್ನದ ಪ್ರಮಾಣ(ಜಿ.ಡಿ.ಪಿ.)ದಲ್ಲಿ ಕೃಷಿಯ ಪಾಲು ಹಿಂದೆ ಶೇ. 36 ಇದ್ದದ್ದು ಈಗ ಶೇ. 18 ಕ್ಕೆ ಇಳಿದಿದೆ ಎಂದು ಹೇಳುವ ಯಡಿಯೂರಪ್ಪನವರ ಬಜೆಟ್ ಇದು ಯಾಕೆ ಎಂಬ ಬಗ್ಗೆ ಯಾವ ಗಂಭೀರ ವಿಶ್ಲೇಷಣೆಯನ್ನು ಮಾಡದೇ ಸಮಸ್ಯೆಯನ್ನೇ ತೇಲಿಸಿ ಬಿಡುವ ಜಾಳು ಜಾಳು ವಿಶ್ಲೇಷಣೆಯನ್ನು ಜನರ ಮುಂದಿಟ್ಟಿದೆ.

ಯಡಿಯೂರಪ್ಪನವರು ಬಜೆಟ್‌ಗೆ

ಪುಟ 12 ಕ್ಕೆ

ತಣ್ಣೀರುಬಾವಿ : ಮನೆ ಹಕ್ಕುಪತ್ರಕ್ಕಾಗಿ ಪ್ರತಿಭಟನೆ

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಕಡಲತೀರದ ತಣ್ಣೀರುಬಾವಿ ಎಂಬಲ್ಲಿ 262 ಕುಟುಂಬಗಳು ವಾಸವಾಗಿದ್ದು, ಯಾವ ಮನೆಗಳಿಗೂ ಮನೆ ನಂಬರಾಗಲಿ ನಿವೇಶನದ ಹಕ್ಕುಪತ್ರಗಳಾಗಲೀ ಇರುವುದಿಲ್ಲ. ದಲಿತರು ಮತ್ತು ಮುಸ್ಲೀಮರೇ ಹೆಚ್ಚಾಗಿ ವಾಸವಾಗಿರುವ ಇಲ್ಲಿ, ಕೆಲವು ಕುಟುಂಬಗಳು 80 ವರ್ಷಗಳಿಂದಲೂ ಇಲ್ಲವಾಗಿವೆ. ಮನೆ ನಂಬ್ರ ಮತ್ತು ನಿವೇಶನ ಹಕ್ಕುಪತ್ರ ಇಲ್ಲದ ಕಾರಣ ಇಲ್ಲಿನ ಎಲ್ಲ ಕುಟುಂಬಗಳೂ ಸರ್ಕಾರದ ಸವಲತ್ತುಗಳಿಂದ ವಂಚಿತವಾಗಿವೆ.

ತಣ್ಣೀರುಬಾವಿ ನಿವಾಸಿಗಳು ಮಹಾನಗರಪಾಲಿಕೆ ಹಾಗೂ ಸರ್ಕಾರದ ಕಡೆಯಿಂದ ಪಡೆಯಬೇಕಾಗಿದ್ದ ಸವಲತ್ತುಗಳಿಗಾಗಿ ಕಚೇರಿ ಕಚೇರಿ ಅಲೆದು ಸುಸ್ತಾಗಿದ್ದರು. ಈ ಸಂದರ್ಭದಲ್ಲಿ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಹಾಗೂ ದಲಿತ ಹಕ್ಕುಗಳ ನಗರಸಮಿತಿ ಈ ಪ್ರಶ್ನೆಯನ್ನು ಎತ್ತಿಕೊಂಡು ಮಂಗಳೂರು ಮಹಾನಗರ ಪಾಲಿಕೆಯೊಂದಿಗೆ ವ್ಯವಹರಿಸಿದಾಗಲೂ ಪಾಲಿಕೆ ಸ್ಪಂದಿಸದೇ ಇದ್ದ ಹಿನ್ನೆಲೆಯಲ್ಲಿ, ಕಳೆದ 3 ತಿಂಗಳ ಹಿಂದೆ ದಲಿತ ಹಕ್ಕುಗಳ ಸಮಿತಿಯಿಂದ ತಣ್ಣೀರುಬಾವಿ ನಿವಾಸಿಗಳು ನಗರಪಾಲಿಕೆ ಚಲೋ ಕಾರ್ಯಕ್ರಮ ಏರ್ಪಡಿಸಿದ್ದರು. ಇದಕ್ಕೂ ಪ್ರತಿಸ್ಪಂದನ ದೊರೆಯದೇ ಇದ್ದ ಹಿನ್ನೆಲೆಯಲ್ಲಿ ಸಿಪಿಐ(ಎಂ) ಹಾಗೂ ದಲಿತ ಹಕ್ಕುಗಳ ನಗರ ಸಮಿತಿ ನೇತೃತ್ವದಲ್ಲಿ ಫೆಬ್ರವರಿ 28 ರಂದು ತಣ್ಣೀರುಬಾವಿ ನಿವಾಸಿಗಳು ದಕ್ಷಿಣಕನ್ನಡ ಜಿಲ್ಲಾಧಿಕಾರಿ ಕಚೇರಿಯ ಎದುರು ಪ್ರತಿಭಟನೆ ನಡೆಸಿದರು.



ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್, ದಲಿತ ಹಕ್ಕುಗಳ ಜಿಲ್ಲಾಸಮಿತಿ ಸಂಚಾಲಕ ಕೃಷ್ಣಪ್ಪ ಕೊಂಚಾಡಿ, ಮಂಗಳೂರು ನಗರ ದಲಿತ ಹಕ್ಕುಗಳ ಸಮಿತಿ ಕಾರ್ಯದರ್ಶಿ ಲಿಂಗಪ್ಪ ನಂತೂರು ಮಾತನಾಡಿದರು. ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ದಲಿತ ಹಕ್ಕುಗಳ ಸಮಿತಿಯ ಜಯಕುಮಾರ್ ಕೋಡಿಕಲ್, ತಿಮ್ಮಯ್ಯ ಕೊಂಚಾಡಿ, ಯಮುನಾ ಪಚ್ಚನಾಡಿ, ಡಿವೈಎಫ್ಐ ಮುನೀರ್ ಕಾಟಿಪಳ್ಳ, ದಯಾನಂದಶೆಟ್ಟಿ, ಯೋಗೀಶ್ ಜಪ್ಪಿನಮೊಗರು, ತಣ್ಣೀರುಬಾವಿ ಪ್ರದೇಶದ ಬೇಬಿ, ಮಾಧವ, ಉಷಾ ಕಮೀಮಾಬಾನು, ಜಯಶ್ರೀ, ಅಜೀಜ್, ಪ್ರಸನ್ನಕುಮಾರ್ ಮತ್ತಿತರರು ಭಾಗವಹಿಸಿದ್ದರು. ಲಿಂಗಪ್ಪ ನಂತೂರು ಸ್ವಾಗತಿಸಿ ಮಾಧವ ವಂದಿಸಿದರು.

★

ಸಾಮಾಜಿಕ ಅಸಮಾನತೆ ಮತ್ತು ಅಸ್ಪೃಶ್ಯತೆಯ ವಿರುದ್ಧ ನಿರಂತರ ಹೋರಾಟ ಅನಿವಾರ್ಯ

- ಬಿ.ಮಾಧವ

ಭಾರತದ ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ದಲಿತರನ್ನು ಊರಿನಿಂದ ಹೊರಗೆ ತಳ್ಳಿ ಎಲ್ಲಾ ರೀತಿಯ ಸಾಮಾಜಿಕ, ಆರ್ಥಿಕ ಶೋಷಣೆಗಳನ್ನು ನಡೆಸಿ ಅಮಾನವೀಯವಾಗಿ ಕಾಣಲಾಗುತ್ತಿದೆ. ಸ್ವಾತಂತ್ರ್ಯ ದೊರೆತು ಆರು ದಶಕಗಳು ಕಳೆದರೂ ಭಾರತದಲ್ಲಿ ದಲಿತರ ಸಾಮಾಜಿಕ ಸ್ಥಿತಿಗತಿಯಾಗಲೀ, ಆರ್ಥಿಕ, ಶೈಕ್ಷಣಿಕ ಪರಿಸ್ಥಿತಿಯಾಗಲೀ ದೊಡ್ಡ ಮಟ್ಟದಲ್ಲಿ ಪ್ರಗತಿಯಾಗಿಲ್ಲ. ಇಂದು ಕೂಡಾ ಸಾಮಾಜಿಕ ಅಸಮಾನತೆ ಮತ್ತು ಅಸ್ಪೃಶ್ಯತೆ ಮುಂದುವರಿಯುತ್ತಿದ್ದು ಇದರ ವಿರುದ್ಧ ನಿರಂತರ ಹೋರಾಟ ಅನಿವಾರ್ಯವಾಗಿದೆ ಎಂದು ಸಿಪಿಐ(ಎಂ) ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಅಭಿಪ್ರಾಯಪಟ್ಟರು. ಅವರು ಮಾರ್ಚ್ 2 ರಂದು ಉಳ್ಳಾಲ ವಲಯ ಮಟ್ಟದ ದಲಿತ ಅಭಿವೃದ್ಧಿ ಸಮಾವೇಶವನ್ನು ಉದ್ಘಾಟಿಸಿ ಭಾಷಣ ಮಾಡುತ್ತಿದ್ದರು.


ಸಿಪಿಐ(ಎಂ) ದಕ್ಷಿಣಕನ್ನಡ ದಲಿತ ಹಕ್ಕುಗಳ ಜಿಲ್ಲಾ ಸಂಚಾಲಕ ಸಮಿತಿ ನೇತೃತ್ವದಲ್ಲಿ ಈಗಾಗಲೇ ಮಂಗಳೂರು ನಗರ, ಬೆಳ್ತಂಗಡಿ, ಮೂಡಬಿದ್ರೆಗಳಲ್ಲಿ ವಲಯಮಟ್ಟದ ದಲಿತ ಅಭಿವೃದ್ಧಿ ಸಮಾವೇಶಗಳು ನಡೆದಿದ್ದು, ವಲಯಮಟ್ಟದ ದಲಿತ ಹಕ್ಕುಗಳ ಸಮಿತಿಗಳೂ ರಚನೆಯಾಗಿವೆ. ಹಾಗೂ ಈಗಾಗಲೇ ಕೆಲವು ಹೋರಾಟಗಳನ್ನು ಹಮ್ಮಿಕೊಂಡಿದೆ. ಸಿಪಿಐ(ಎಂ) ನೇತೃತ್ವದಲ್ಲಿ ನಡೆದ ವಲಯಮಟ್ಟದ ದಲಿತ ಅಭಿವೃದ್ಧಿ ಸಮಾವೇಶ ಉಳ್ಳಾಲದಲ್ಲಿ ನಡೆದುದು ನಾಲ್ಕನೆಯದಾಗಿದೆ.

ಉಳ್ಳಾಲದಲ್ಲಿ ಸೇರಿದ್ದ ಅಭಿವೃದ್ಧಿ ಸಮಾವೇಶದಲ್ಲಿ ಅಲ್ಲಿನ ಗ್ರಾಮಗಳ 60 ಮಂದಿ ದಲಿತರು ಭಾಗವಹಿಸಿದ್ದು, ದಲಿತ ಹಕ್ಕುಗಳ ಜಿಲ್ಲಾ ಸಮಿತಿ ಸಂಚಾಲಕ ಕೃಷ್ಣಪ್ಪ ಕೊಂಚಾಡಿ ಮಾತನಾಡಿ, ದಲಿತ ಹಕ್ಕುಗಳ ಹೋರಾಟ ಹಮ್ಮಿಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡಿದರು. ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ನಾಲ್ಕನೇ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು. ಕೋಟೆಕಾರು ಪ್ರದೇಶ ಬೀಡಿ ಲೇಬರ್ ಯೂನಿಯನ್ ಕಾರ್ಯದರ್ಶಿ ಜಯಂತ ನಾಯ್ಕ್ ಶುಭಕೋರಿ ಮಾತನಾಡಿದರು. ನಾರಾಯಣ ನಾರ್ಲ ತಲಪಾಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಮಾವೇಶವು 21 ಮಂದಿಯುಳ್ಳ ಉಳ್ಳಾಲ ವಲಯ ದಲಿತ ಹಕ್ಕುಗಳ ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ ನಾರಾಯಣ ನಾರ್ಲ ಹಾಗೂ ಕಾರ್ಯದರ್ಶಿಯಾಗಿ ರೋಹಿದಾಸ್ ಅಬ್ಬಂಜರ ಆಯ್ಕೆಯಾಗಿರುತ್ತಾರೆ. ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಸದಸ್ಯ ಸಂಜೀವ ಪಿಲಾರು ಸ್ವಾಗತಿಸಿದರು. ರೋಹಿದಾಸ್ ಅಬ್ಬಂಜರ ಧನ್ಯವಾದವಿತ್ತರು.

★

ದಲಿತ ಹಕ್ಕುಗಳ ಸಮಿತಿ ಸಭೆ



ವಾ.ಉ.

ಮಾರ್ಚ್ 2 ರಂದು ಸಿಪಿಐ(ಎಂ) ಮಂಗಳೂರು ನಗರ ದಲಿತ ಹಕ್ಕುಗಳ ಸಮಿತಿ ಸಭೆ ನಡೆಯಿತು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಸಭೆಯಲ್ಲಿ ಭಾಗವಹಿಸಿದ್ದರು.

ಮಂಗಳೂರು ನಗರ ದಲಿತ ಹಕ್ಕುಗಳ ಸಮಿತಿ ರಚನೆಯಾದಂದಿನಿಂದ ಮಹಾನಗರ ಪಾಲಿಕೆಯಿಂದ ದಲಿತರಿಗೆ ಇರುವ ಶೇ.22.75 ಮೀಸಲಾತಿ ಸವಲತ್ತುಗಳಿಗಾಗಿ ಹಲವು ಬಾರಿ ಹೋರಾಟ ನಡೆಸಿದೆ. ವಾರದ ಹಿಂದೆಯಷ್ಟೇ ಒಂದು ಪ್ರತಿಭಟನೆಯನ್ನು ಪಾಲಿಕೆ ಮುಂದೆ ಹಮ್ಮಿಕೊಂಡಿತ್ತು. ತಣ್ಣೀರುಬಾವಿ ಪ್ರದೇಶದ ದಲಿತರ ಮನೆ ನಂಬ್ರ, ಮನೆ ನಿವೇಶನಕ್ಕಾಗಿ ಎರಡು ಹಂತದಲ್ಲಿ ಹೋರಾಟ ನಡೆಸಿದೆ. ರಾಷ್ಟ್ರೀಯ ಹೆದ್ದಾರಿಯಿಂದ ಮನೆ ಕಳೆದುಕೊಳ್ಳಲಿದ್ದ ಕೊರಗರಿಗಾಗಿ ನಡೆಸಿದ ಹೋರಾಟ ಯಶಸ್ವಿಯಾಗಿದ್ದು, ಸಂತ್ರಸ್ತ ಕೊರಗರು ಪರ್ಯಾಯ ನಿವೇಶನ ಪಡೆದಿರುವರಲ್ಲದೆ ಅವರ ಮನೆ ನಿರ್ಮಾಣ ಪ್ರಗತಿಯಲ್ಲಿದೆ.

ಸಭೆಯಲ್ಲಿ ದಲಿತ ಹಕ್ಕುಗಳ ಸಮಿತಿ ಸದಸ್ಯರು ನಗರದ ದಲಿತರ ಅನೇಕ ಸಮಸ್ಯೆಗಳನ್ನು ವಿವರವಾಗಿ ಪ್ರಸ್ತಾಪಿಸಿ ಚರ್ಚಿಸಿದರು. ಈ ಹಿಂದೆ ಯಾವ ಪಕ್ಷಗಳೂ ಸಂಘಟನೆಗಳೂ ತಮ್ಮ ಸಮಸ್ಯೆಗಳಿಗೆ ಅರ್ಥಪೂರ್ಣವಾಗಿ ಸ್ಪಂದಿಸಿಲ್ಲವೆಂಬುದನ್ನು ತಿಳಿಸಿದರು. ಈ ಸಂದರ್ಭದಲ್ಲಿ ಮಾರುತಿ ಮಾನ್ಪಡೆಯವರಲ್ಲದೆ ದಲಿತ ಹಕ್ಕುಗಳ ಜಿಲ್ಲಾ ಸಮಿತಿ ಸಂಚಾಲಕ ಕೃಷ್ಣಪ್ಪ ಕೊಂಚಾಡಿ, ಸಿಪಿಐ(ಎಂ) ನಗರ ಸಮಿತಿ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್ ಜಿಲ್ಲಾ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಕೆ.ಯಾದವಶೆಟ್ಟಿ ಉಳ್ಳಾಲ ವಲಯ ದಲಿತ ಹಕ್ಕು ಸಮಿತಿ ಅಧ್ಯಕ್ಷ ನಾರಾಯಣ ನಾರ್ಲ ತಲಪಾಡಿ ಕೂಡಾ ಮಾತನಾಡಿದರು. ದಲಿತ ಹಕ್ಕು ಸಮಿತಿ ಮಂಗಳೂರು ನಗರ ಕಾರ್ಯದರ್ಶಿ ಲಿಂಗಪ್ಪ ನಂತೂರು ಸ್ವಾಗತಿಸಿದರು. ಜಯಕುಮಾರ್ ಧನ್ಯವಾದವಿತ್ತರು.

★

ಗುಟ್ಕಾ ನಿಷೇಧ ಹಿಂದೆಗೆಯಲು ಕರ್ನಾಟಕ ಪ್ರಾಂತ ರೈತ ಸಂಘದ ಒತ್ತಾಯ

ಇವತ್ತು ಅಡಿಕೆ ಬೆಳೆ ಉತ್ಪನ್ನದ ಬಹುಭಾಗ ಗುಟ್ಕಾ ತಯಾರಿಗೆ ಬಳಕೆಯಾಗುತ್ತಿರುವುದರಿಂದ, ಅಡಿಕೆ ಬೆಳೆಗಾರರು ತಕ್ಕಮಟ್ಟಿಗಾದರೂ ಜೀವನ ನಿರ್ವಹಣೆ ಮಾಡುವ ಪರಿಸ್ಥಿತಿಯಲ್ಲಿದ್ದಾರೆ. ನ್ಯಾಯಾಲಯದ ಆದೇಶದಂತೆ ಗುಟ್ಕಾವನ್ನು ಸಂಪೂರ್ಣವಾಗಿ ನಿಷೇಧ ಮಾಡಿದ್ದೇ ಆದರೆ, ಬೆಳೆದ ಅಡಿಕೆ ಮಾರಾಟವಾಗದೇ ಅಡಿಕೆ ಬೆಳೆಗಾರರ ಬದುಕು ಬೀದಿಪಾಲಾಗಬಹುದು. ಈ ಹಿನ್ನೆಲೆಯಲ್ಲಿ ರೈತರ ಸಮಸ್ಯೆಯನ್ನು ನ್ಯಾಯಾಲಯಗಳಿಗೆ ಮನವರಿಕೆ ಮಾಡಿಕೊಟ್ಟು, ಗುಟ್ಕಾ ನಿಷೇಧ ಕಾಯ್ದೆಯನ್ನು ಹಿಂತೆಗೆಯುವ ಮೂಲಕ, ರೈತರನ್ನು ಸಂಕಷ್ಟಗಳಿಂದ ಪಾರು ಮಾಡಬೇಕೆಂದು ಸರ್ಕಾರವನ್ನು ಕೋರುವ ನಿರ್ಣಯವನ್ನು ಕರ್ನಾಟಕ ಪ್ರಾಂತ ರೈತ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಕೈಗೊಂಡಿರುತ್ತದೆ. ಸಾರ್ವಜನಿಕರ ಆರೋಗ್ಯಕ್ಕೆ ಹಾನಿ ತರದಂತಹ ರೀತಿಯಲ್ಲಿ ಅದನ್ನು ಪ್ರಕ್ರಿಯೆಗೊಳಪಡಿಸುವುದೂ ಸಹ ಅತ್ಯಗತ್ಯವಿದೆ. ಮಾರ್ಚ್ 2 ರಂದು ಮಂಗಳೂರಿನಲ್ಲಿ ನಡೆದ ಸಭೆಯಲ್ಲಿ ರಾಜ್ಯಸಮಿತಿ ಅಧ್ಯಕ್ಷ ಮಾರುತಿ ಮಾನ್ಪಡೆಯವರೂ ಉಪಸ್ಥಿತರಿದ್ದರು.

ಈ ವಾರ

ಪುಟ 3 ರಿಂದ

ಹೇಮಮಾಲಿನಿ ಆಯ್ಕೆ

ಇದು ನಿರೀಕ್ಷಿತ ಫಲಿತಾಂಶವೇ. ರಾಜಶೇಖರ್ ಮೂರ್ತಿಯವರ ನಿಧನದಿಂದ ತೆರವಾಗಿದ್ದ ರಾಜ್ಯಸಭಾ ಸ್ಥಾನಕ್ಕೆ ಕರ್ನಾಟಕ ವಿಧಾನಸಭೆಯಿಂದ ಬಿಜೆಪಿ ಅಭ್ಯರ್ಥಿಯಾಗಿದ್ದ ಖ್ಯಾತ ನಟಿ ಹೇಮಾಮಾಲಿನಿ ಧರ್ಮೇಂದ್ರ ಡಿಯೋಲ್ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳ ಬೆಂಬಲದ ಅಭ್ಯರ್ಥಿಯಾಗಿದ್ದ ಸಾಹಿತಿ ಡಾ. ಕೆ.ಮರುಳಸಿದ್ದಪ್ಪನವರು ಸೋತಿದ್ದು ಸಂಖ್ಯಾಬಲದಲ್ಲಿ ಸಹಜವೂ ಆಗಿತ್ತು. ಕನ್ನಡ, ಕರ್ನಾಟಕದ ಸ್ವಾಭಿಮಾನವನ್ನು ಎತ್ತಿ ಹಿಡಿಯುವಂತೆ, ಆತ್ಮಸಾಕ್ಷಿಯಂತೆ ಮತದಾನ ಮಾಡಲು ಬಿಜೆಪಿಯ ಶಾಸಕರಿಗೆ ಮನವಿ ಮಾಡಿದ್ದರೂ ಅದು ‘ ಅವರ ಆತ್ಮವನ್ನು ಕಲಕಲಿಲ್ಲ! ಈಗಾಗಲೇ ಅತ್ಯಂತ ಭ್ರಷ್ಟಗೊಂಡು ಸಂದರ್ಭಸಾಧಕತೆಯಲ್ಲಿ ತೇಲುತ್ತಿರುವ ಅವರ ಮನಸ್ಸು, ಆತ್ಮ(?)ಗಳು ಇಂತಹ ಮನವಿಗಳಿಗೆ ಓಗೊಡುವುದಿಲ್ಲ!

ಹೇಮಾಮಾಲಿನಿಯ ಗೆಲುವು ಬಿಜೆಪಿಯ ಗೆಲುವೇ ಆಗಿದೆ. ಹೊರರಾಜ್ಯದವರು ಎಂಬ ಕಾರಣವಲ್ಲ. ಅದೇನಿದ್ದರೂ ಅವರ ಸ್ಥಾನ ರಾಷ್ಟ್ರದಲ್ಲಿ ಕೋಮುವಾದೀ ಉದಾರೀಕರಣದ ಆರ್ಥಿಕ ನೀತಿಗಳ ಧಾಳಿಗಳನ್ನು, ಜನರ ಮೇಲೆ ಸಂಕಷ್ಟ ಹೊರಿಸುವುದನ್ನು ಸಮರ್ಥಿಸಲು ದೊರೆತ ಬಲವೇ ಆಗಿದೆ. ಮೇಲಾಗಿ ಹಗರಣ, ಭ್ರಷ್ಟತೆ, ಜನದ್ರೋಹಗಳಿಂದ ಅಧಿಕಾರದಲ್ಲಿ ಮುಂದುವರೆದಿರುವ ರಾಜ್ಯದ ಬಿಜೆಪಿಯನ್ನು ಸಮರ್ಥಿಸಿಕೊಂಡು ಈ ಜನಪ್ರಿಯ ನಟಿ ಕರ್ನಾಟಕದಾದ್ಯಂತ ತಿರುಗಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಆಗಲೇ ಮುಂದಿನ ಚುನಾವಣಾ ಕೆಲಸ ಹಂಚಿದ್ದಾರೆ. ನಿಜ, ಕಳಂಕಗಳ ಮಸಿ ಮೆತ್ತಿಕೊಂಡಿರುವ ಇಂಥವರಿಗೆ ರಂಗಿನ ಬಣ್ಣ ರಚಿಸಿಕೊಂಡು ಮುಖ ಉಳಿಸಿಕೊಳ್ಳಲು ಅಂಥವರೇ ಬೇಕಲ್ಲವೇ?

ಈ ಚುನಾವಣೆಯಲ್ಲಿ ಡಾ. ಕೆ.ಎಂ.ಎಸ್. ಇಂತಹ ಪ್ರಶ್ನೆಗಳನ್ನು ಕೇಂದ್ರೀಯ ವಿಷಯಗಳನ್ನಾಗಿಸಬೇಕಿತ್ತು. ಕೇವಲ ಸಾಂಸ್ಕೃತಿಕ ಸಂಗತಿಗಳಿಗೆ ಮಿತಿಗೊಳಿಸಬೇಕಾಗಿರಲಿಲ್ಲ ಅನ್ನಿಸುತ್ತದೆ.

ಜನಶಕ್ತಿ
- ಕನ್ನಡ ವಾರಪತ್ರಿಕೆ

ಪಿ.ಡಿ. ಸಂಪಾದಕೀಯ

ಉತ್ತಮ ಭಾರತದ ನಿರ್ಮಾಣಕ್ಕೆ ಎಡಪಕ್ಷಗಳ ಯಶಸ್ಸು ಅತ್ಯಗತ್ಯ

> **ಮುಂದಿನ ಎರಡು ತಿಂಗಳಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುವ ರಾಜ್ಯಗಳಲ್ಲಿ ಪಶ್ಚಿಮ ಬಂಗಾಲ ಮತ್ತು ಕೇರಳವೂ ಸೇರಿವೆ. ಭಾರತೀಯ ಆಳುವ ವರ್ಗಗಳು ತಮ್ಮ ನವ-ಉದಾರವಾದಿ ಆರ್ಥಿಕ ದಿಕ್ಪಥದ ಮೂಲಕ ನಡೆಸುತ್ತಿರುವ ಲಂಗುಲಗಾಮಿಲ್ಲದ ಶೋಷಣೆಗೆ ಪ್ರತಿರೋಧವನ್ನು ದುರ್ಬಲಗೊಳಿಸಲು, ಸಿಪಿಐ(ಎಂ) ವಿರುದ್ಧ ಅದರ ಕೋಟೆಗಳಲ್ಲಿ ಅವ್ಯಾಹತವಾಗಿ ದಾಳಿಯನ್ನು ನಡೆಸುತ್ತಿರುವ ಸಂದರ್ಭದಲ್ಲಿ ಇಲ್ಲಿಯ ಎಡನೇತೃತ್ವದ ಸರಕಾರಗಳು ಮತ್ತೆ ಅಧಿಕಾರಕ್ಕೆ ಬರುವುದು ದುಡಿಯುವ ಜನಗಳ ಹಿತದೃಷ್ಟಿಯಿಂದ, ನಮ್ಮ ಜನಗಳಿಗೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ನಮ್ಮ ಹೋರಾಟದಲ್ಲಿ ಬಹಳ ಮಹತ್ವದ್ದಾಗುತ್ತದೆ.**

ಐದು ರಾಜ್ಯಗಳ ವಿಧಾನ ಸಭೆಗಳಿಗೆ ಚುನಾವಣೆಗಳ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಈ ಐದು ರಾಜ್ಯಗಳಲ್ಲಿ ಎಡಪಕ್ಷಗಳು ಅಧಿಕಾರದಲ್ಲಿರುವ ಪಶ್ಚಿಮ ಬಂಗಾಳ ಮತ್ತು ಕೇರಳವೂ ಸೇರಿವೆ. ಒಂದು ಉತ್ತಮ ಭಾರತವನ್ನು ನಿರ್ಮಿಸುವ, ಈಗಾಗುತ್ತಿರುವಂತೆ ಕೇವಲ ಕೆಲವರಿಗಾಗಿ ಅಲ್ಲ, ಸಮಸ್ತ ಜನತೆಗಾಗಿ ಅದನ್ನು ನಿರ್ಮಿಸುವ ಪ್ರಯತ್ನಗಳನ್ನು ಮುಂದೊಯ್ಯಲು ಪಶ್ಚಿಮ ಬಂಗಾಲದಲ್ಲಿ ಎಡರಂಗ ಮತ್ತು ಕೇರಳದಲ್ಲಿ ಎಡ ಪ್ರಜಾಪ್ರಭುತ್ವವಾದಿ ರಂಗ ಯಶಸ್ವಿಯಾಗುವಂತೆ ಮಾಡಿ ಎಂಬುದು ನಮ್ಮ ಕರೆ.

ಪಶ್ಚಿಮ ಬಂಗಾಲದಲ್ಲಿ ಏಳು ಅವಧಿಗಳಿಂದ ಅಧಿಕಾರದಲ್ಲಿರುವ ಎಡರಂಗವನ್ನು ಸೋಲಿಸ ಬಯಸುವ ಪ್ರಧಾನ ವಿರೋಧಿಯೆಂದರೆ ತೃಣಮೂಲ-ಕಾಂಗ್ರೆಸ್ ಮೈತ್ರಿಕೂಟ. ತೃಣಮೂಲ ಕಾಂಗ್ರೆಸ್ ಈ ಪತ್ರಿಕೆಯಲ್ಲಿ ಹಲವು ಬಾರಿ ವರದಿಯಾಗಿರುವಂತೆ, ಎಡರಂಗವನ್ನು ಸೋಲಿಸಲಿಕ್ಕಾಗಿ ಭಯೋತ್ಪಾದನೆ ಮತ್ತು ಹಿಂಸಾಚಾರಕ್ಕೆ ಚಿತಾವಣೆ ನೀಡುವಲ್ಲಿ 'ಮಾವೋವಾದಿ'ಗಳೊಂದಿಗೆ ಬಹಿರಂಗವಾಗಿಯೇ ಶಾಮೀಲಾಗಿರುವ ಪಕ್ಷ. ಮೇ 2009ರಲ್ಲಿ ಸಾರ್ವತ್ರಿಕ ಚುನಾವಣೆಗಳ ನಂತರ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವರೆಗೆ, ಈ 'ತೃಣಮೂಲ-ಮಾವೋವಾದಿ' ಕೂಟ ಸುಮಾರು 400 ಎಡರಂಗ ಕಾರ್ಯಕರ್ತರ ಜೀವ ಬಲಿ ತೆಗೆದುಕೊಂಡಿದೆ. ಕೇಂದ್ರದಲ್ಲಿ ಸರಕಾರಕ್ಕೆ ನೇತೃತ್ವ ನೀಡುತ್ತಿರುವ ಕಾಂಗ್ರೆಸ್ ಪಕ್ಷ ಮತ್ತು ಆಳುವ ಯುಪಿಎ ಅಂಗಪಕ್ಷ ತೃಣಮೂಲ ಕಾಂಗ್ರೆಸ್ ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ವಿರುದ್ಧ ಬಹಿರಂಗವಾಗಿಯೇ ಯುದ್ಧ ಸಾರಿರುವ 'ಮಾವೋವಾದಿ'ಗಳೊಂದಿಗೆ ಕೈಮಿಲಾಯಿಸಿದ್ದರೆಂಬುದು ವ್ಯಂಗ್ಯಕ್ಕಿಂತಲೂ ನಿಕೃಷ್ಟವಾದ ಸಂಗತಿ.

ಎಡರಂಗ-ವಿರೋಧಿಗಳ ಚಾರಿತ್ರ್ಯವಿದು!

ಇಷ್ಟೇ ಅಲ್ಲ, ತೃಣಮೂಲ ಕಾಂಗ್ರೆಸ್ ಈ ಮೊದಲು ಬಿಜೆಪಿ ನೇತೃತ್ವದ ಎನ್‌ಡಿಎಯ ಅಂಗವಾಗಿತ್ತು, ಅದರ ಮುಖಂಡರು ಈಗಿನಂತೆ ಆಗಲೂ ರೈಲು ಮಂತ್ರಿಯಾಗಿದ್ದರು. ಸ್ವಲ್ಪ ಸಮಯ ಎನ್‌ಡಿಎ ಬಿಟ್ಟು ಬಂದು, 2001 ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನೊಂದಿಗೆ ಮೈತ್ರಿ ಮಾಡಿಕೊಂಡ ತೃಣಮೂಲ ಕಾಂಗ್ರೆಸ್ 2002ರಲ್ಲಿ ಗುಜರಾತ ಹತ್ಯಾಕಾಂಡ ನಡೆದ ಸ್ವಲ್ಪವೇ ಸಮಯದಲ್ಲಿ ಮತ್ತೆ ಎನ್‌ಡಿಎ ಹಾಗೂ ಬಿಜೆಪಿ ನೇತೃತ್ವದ ಮಂತ್ರಿ ಮಂಡಲವನ್ನು ಸೇರಿಕೊಂಡಿತು. ಹೀಗೆ ಗುಜರಾತಿನಲ್ಲಿ ಬಿಜೆಪಿಯ ಕೋಮು ಹತ್ಯಾಕಾಂಡವನ್ನು ಸ್ಪಷ್ಟವಾಗಿ ಅನುಮೋದಿಸಿರುವ ಪಕ್ಷ ಇದು. ತಾನು ಕೋಮುವಾದದ ಪ್ರಧಾನ ವಿರೋಧಿ ಎಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಭೀಕರ ಕೋಮುದಂಗೆಗಳ ರಕ್ತ ಮೆತ್ತಿಕೊಂಡಿರುವವರ ಜತೆಗೆ ಕೈಜೋಡಿಸಲು ಯಾವುದೇ ಅಳುಕು ಬಾಧಿಸಲಿಲ್ಲ.

ಎನ್‌ಡಿಎ ಭಾಗವಾಗಿದ್ದಾಗ, ತೃಣಮೂಲ ಕಾಂಗ್ರೆಸ್ ಬಂಗಾಲದೊಳಗೆ ಕೋಮುವಾದಿ ಶಕ್ತಿಗಳ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿತು, ಸಂಸತ್ತಿಗೆ ಕೆಲವು ಬಿಜೆಪಿ ಅಭ್ಯರ್ಥಿಗಳು ಗೆದ್ದು ಹೋಗಲು ಅನುಕೂಲ ಮಾಡಿಕೊಟ್ಟಿತು. ಇಂದು, ಯುಪಿಎ ಭಾಗವಾಗಿ ತೃಣಮೂಲ ಬಂಗಾಲದಲ್ಲಿ 'ಮಾವೋವಾದಿ'ಗಳ ಪ್ರವೇಶ ಮತ್ತು ಕಾರ್ಯಾಚರಣೆಗೆ ಅನುಕೂಲ ಕಲ್ಪಿಸಿ ಕೊಡುತ್ತಿದೆ ಮತ್ತು ಭಯೋತ್ಪಾದನೆ ಮತ್ತು ಹಿಂಸಾಚಾರ ಹರಡಲು ಅವರೊಂದಿಗೆ ಶಾಮೀಲಾಗುತ್ತಿದೆ. ಹೀಗಿದೆ ಕಾಂಗ್ರೆಸ್ ಪಕ್ಷದ ಮಿತ್ರರ ಚಾರಿತ್ರ್ಯ. ಹೀಗಿದೆ ಎಲ್ಲ ಎಡರಂಗವನ್ನು ಸೋಲಿಸಬೇಕೆನ್ನುವವರ ಚಾರಿತ್ರ್ಯ, ಎಲ್ಲ ಪ್ರತಿಗಾಮಿ ಶಕ್ತಿಗಳನ್ನು ಒಟ್ಟು ಸೇರಿಸಿ ಒಂದು ಮಹಾಮೈತ್ರಿಯನ್ನು ಬೆಸೆಯ ಬಯಸುವವರ ಚಾರಿತ್ರ್ಯ.

ಮೂರು ಕಣ್ಣೋಟಗಳು

ಪಶ್ಚಿಮ ಬಂಗಾಲದಲ್ಲಿ ಎಡರಂಗ ಮತ್ತು ಕೇರಳದಲ್ಲಿ ಎಲ್‌ಡಿಎಫ್ ಜಯಶಾಲಿಯಾಗುವಂತೆ ಮಾಡಿ ಎನ್ನುವುದು ಅಧಿಕಾರದಲ್ಲಿ ಅಥವ ಸರಕಾರದಲ್ಲಿ ಮುಂದುವರೆಯಲೆಂದಷ್ಟೇ ಅಲ್ಲ. ಪಶ್ಚಿಮ ಬಂಗಾಲ ಮತ್ತು ಕೇರಳದಲ್ಲಿ ಎಡ-ನೇತೃತ್ವದ ರಚನೆಗಳನ್ನು ರಕ್ಷಿಸಿಕೊಳ್ಳುವುದೆಂದರೆ, ಒಂದು ಸ್ವತಂತ್ರ ಭಾರತದ ಸ್ವರೂಪಕ್ಕೆ ಸಂಬಂಧಪಟ್ಟಂತೆ ನಾವು ಮುಂದಿಟ್ಟ ಕಣ್ಣೋಟವನ್ನು ರಕ್ಷಿಸಿಕೊಳ್ಳುವುದು ಎಂದೇ ಅರ್ಥ. ಸ್ವಾತಂತ್ರ್ಯ ಹೋರಾಟದಲ್ಲಿ ಸ್ವತಂತ್ರ ಭಾರತದ ಸ್ವರೂಪ ಹೇಗಿರಬೇಕು ಎಂಬ ಬಗ್ಗೆ ಮೂರು ಕಣ್ಣೋಟಗಳು ಮೂಡಿ ಬಂದವು-ಮೊದಲನೆಯದು, ಸ್ವತಂತ್ರ ಭಾರತ ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವಾಗಬೇಕೆಂದು ಕಂಡರಿಸಿತು. ಎರಡನೆಯದು, ಎಡ ಕಣ್ಣೋಟ, ಭಾರತದ ಭವಿಷ್ಯವೆಂದರೆ ಬ್ರಿಟಿಶರಿಂದ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸುವುದಷ್ಟೇ ಅಲ್ಲ, ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಕ್ರೋಡೀಕರಿಸುವುದು, ಅದಕ್ಕಾಗಿ ನಾವು ಗಳಿಸಿದ ಸ್ವಾತಂತ್ರ್ಯವನ್ನು ಸಮಸ್ತ ಜನತೆಗೆ ನಿಜವಾದ ಆರ್ಥಿಕ ಸ್ವಾತಂತ್ರ್ಯವಾಗಿ ಪರಿವರ್ತಿಸುವುದು, ಅಂದರೆ ಸಮಾಜವಾದದ ಸ್ಥಾಪನೆ. ಮೂರನೆಯ ಕಣ್ಣೋಟ ಈ ಎರಡಕ್ಕೂ ವಿರುದ್ಧವಾದದ್ದು. ಅದು ಸ್ವತಂತ್ರ ಭಾರತದ ಸ್ವರೂಪವನ್ನು ಜನಗಳ ಧಾರ್ಮಿಕ ಪಂಥಗಳ ಆಧಾರದಲ್ಲಿ ನಿರೂಪಿಸುವ ಪ್ರಯತ್ನ ನಡೆಸಿತು. ಇದು ಎರಡು ರೀತಿಗಳಲ್ಲಿ, ಅವಳಿಗಳಾಗಿ ವ್ಯಕ್ತಗೊಂಡಿತು-ಆರೆಸ್ಸೆಸ್ ಪ್ರತಿಪಾದಿಸಿದ ಉನ್ಮತ್ತ ಅಸಹಿಷ್ಣು 'ಹಿಂದೂ ರಾಷ್ಟ್ರ'ದ ಫ್ಯಾಸಿಸ್ಟ್ ಮಾದರಿಯ ಕಣ್ಣೋಟ ಮತ್ತು ದೇಶವನ್ನು ವಿಭಜಿಸಿ ಒಂದು ಇಸ್ಲಾಮಿಕ್ ಗಣತಂತ್ರವನ್ನು ಸ್ಥಾಪಿಸುವ ಮುಸ್ಲಿಂ ಲೀಗ್ ಕಣ್ಣೋಟ. ಈ ಮೂರು ಕಣ್ಣೋಟಗಳ ನಡುವಿನ ಸೈದ್ಧಾಂತಿಕ ಸಮರ ಇಂದು ಕೂಡ ಮುಂದುವರೆಯುತ್ತಿದೆ; ಪ್ರಸಕ್ತ ರಾಜಕೀಯ ಬೆಳವಣಿಗೆಗಳು ಕೂಡ ಈ ಪರಿಮಿತಿಗಳ ಸುತ್ತವೇ ಗಿರಕಿ ಹೊಡೆಯುತ್ತಿವೆ. ಪಶ್ಚಿಮ ಬಂಗಾಳ ಮತ್ತು ಕೇರಳ ಎಡಶಕ್ತಿಗಳು ಮುಂದಿಟ್ಟ ಕಣ್ಣೋಟದ ಕಾವಲು ಬುರುಜುಗಳು, ಆದ್ದರಿಂದ, ಈ ರಾಜ್ಯಗಳಲ್ಲಿನ ಸರಕಾರಗಳನ್ನು ರಕ್ಷಿಸಿಕೊಳ್ಳುವುದೆಂದರೆ, ಎಡ ಕಣ್ಣೋಟವನ್ನು, ಅದಕ್ಕಿಂತ ಮುಖ್ಯವಾಗಿ ಇಂದು ನಾವು ಭಾರತ ಎಂದು ಏನನ್ನು ತಿಳಕೊಂಡಿದ್ದೇವೋ ಅದನ್ನು ರಕ್ಷಿಸುವುದೆಂದೇ ಅರ್ಥ. ಒಂದು ಉತ್ತಮ ಭಾರತವನ್ನು ನಿರ್ಮಿಸುವ ಹೋರಾಟವನ್ನು ಮುಂದೊಯ್ಯಲು ಇದು ಪೂರ್ವ-ಶರತ್ತು.

ಸ್ವತಂತ್ರ ಭಾರತದಲ್ಲಿ ಭಾಷಾವಾರು ಆಧಾರದಲ್ಲಿ ರಾಜ್ಯಗಳ ಪುನರ್ಸಂಘಟನೆಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು ಕಮ್ಯುನಿಸ್ಟರು-ವಿಶಾಲಾಂಧ್ರ, ಅದರ ಬೆನ್ನ ಹಿಂದೆ ಐಕ್ಯ ಕೇರಳ ಮತ್ತು ಸಂಯುಕ್ತ ಮಹಾರಾಷ್ಟ್ರ. ಈ ಹೋರಾಟ ಭಾರತದ ರಾಜಕೀಯ ಸಂಘಟನೆಯ ಬುನಾದಿ ಹಾಕಿತು. ಕಮುನಿಸ್ಟರ ನೇತೃತ್ವದಲ್ಲಿ ರೈತಾಪಿ ಜನಗಳ ಸಮರಧೀರ ಮತ್ತು ಬೃಹತ್ ಹೋರಾಟಗಳು ಭೂಸುಧಾರಣೆಗಳು ಮತ್ತು ಭೂಮಾಲಕತ್ವದ ನಿರ್ಮೂಲನೆ ಸ್ವತಂತ್ರ ಭಾರತದ ಅಜೆಂಡಾದಲ್ಲಿ ಬರುವಂತೆ ಮಾಡಿದವು. ಇದರ ಫಲಿತಾಂಶವೆಂದರೆ, ಗ್ರಾಮೀಣ ಭಾರತದ ವಿಶಾಲ ಜನಸಮೂಹವನ್ನು ಭಾರತದ ರಾಜಕೀಯ ಪ್ರಜಾಪ್ರಭುತ್ವದತ್ತ ಸೆಳೆಯುವುದು, ಮತ್ತು ಆರ್ಥಿಕವಾಗಿ ಸಬಲೀಕರಿಸುವುದು. ಎಡಶಕ್ತಿಗಳು ಆರಂಭಿಸಿದ ಅಧಿಕಾರಗಳ ವಿಕೇಂದ್ರೀಕರಣ ಮತ್ತು ಪ್ರಜಾಪ್ರಭುತ್ವವನ್ನು ಆಳಗೊಳಿಸುವ ಪ್ರಕ್ರಿಯೆ ಪ್ರಜಾಪ್ರಭುತ್ವದ ರಾಜಕೀಯ ಸಂಸ್ಥೆಗಳನ್ನು ಬಲಪಡಿಸಿತು, ಆ ಮೂಲಕ ಇಂದಿನ ಭಾರತವನ್ನು ನಿರ್ಮಿಸಿತು.

ಪರ್ಯಾಯ ದಿಕ್ಪಥ

ಪಶ್ಚಿಮ ಬಂಗಾಲ ಮತ್ತು ಕೇರಳದ ಸರಕಾರಗಳು ಪ್ರಸಕ್ತ ವ್ಯವಸ್ಥೆಯ ಮಿತಿಯೊಳಗೆ ಹಲವು ಜನಪರ ಕ್ರಮಗಳನ್ನು ಜಾರಿಗೊಳಿಸಿದವು ಹಾಗೂ ಭಾರತದಲ್ಲಿ ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಗೆ ಒಂದು ಪರ್ಯಾಯ ದಿಕ್ಪಥವನ್ನು ಮುಂದಿಟ್ಟವು. ಪಶ್ಚಿಮ ಬಂಗಾಲದಲ್ಲಿ ತೀವ್ರಗಾಮಿ ಭೂಸುಧಾರಣೆಗಳ ಫಲಿತಾಂಶವಾಗಿ ಸುಮಾರು 13 ಲಕ್ಷ ಎಕ್ರೆ ಭೂಮಿಯನ್ನು ಭೂಹೀನರಲ್ಲಿ ಹಂಚಲಾಯಿತು. ಬಡವರಲ್ಲಿ ಹಂಚಿದ ಭೂಮಿಯ ಕನಿಷ್ಟ ಮೌಲ್ಯವನ್ನು ಲೆಕ್ಕಕ್ಕೆ ತಗೊಂಡರೂ ಪಶ್ಚಿಮ ಬಂಗಾಲ ಸರಕಾರ ಸುಮಾರು 1,30,000 ಕೋಟಿ ರೂ. ಮೌಲ್ಯದ ಸಂಪತ್ತನ್ನು ಶ್ರೀಮಂತರಿಂದ ಬಡವರಿಗೆ ಹಸ್ತಾಂತರಿಸಿತು.

ಈ ಎರಡೂ ರಾಜ್ಯಗಳಲ್ಲಿ ಪಂಚಾಯತೀ ರಾಜ್ಯ ವ್ಯವಸ್ಥೆ ಅಧಿಕಾರವನ್ನು ವಿಕೇಂದ್ರೀಕರಿಸಿದ್ದರಿಂದ, ಸ್ಥಳೀಯ ಸ್ವಯಮಾಡಳಿತದ ಪ್ರಜಾಸತ್ತಾತ್ಮಕ ಸಂಸ್ಥೆಗಳ ಸ್ಥಾಪನೆ ಮತ್ತು ದಕ್ಷ ನಿರ್ವಹಣೆಯ ಮೂಲಕ ಬುಡಮಟ್ಟದಲ್ಲಿ ಪ್ರಜಾಪ್ರಭುತ್ವ ಆಳಗೊಳ್ಳುವಂತಾಯಿತು. ಪಶ್ಚಿಮ ಬಂಗಾಲದಲ್ಲಿ ಎಡರಂಗ ಪ್ರಜಾಸತ್ತಾತ್ಮಕವಾಗಿ ಚುನಾಯಿಸಿದ ಸಂಸ್ಥೆಗಳ ಮೂರು ಹಂತಗಳ ವ್ಯವಸ್ಥೆಯನ್ನು ಸ್ಥಾಪಿಸಿದ ಪೂರ್ಣ ಹದಿನೇಳು ವರ್ಷಗಳ ನಂತರವೇ ದೇಶಕ್ಕೆ ಸಂವಿಧಾನದ 73ನೇ ಮತ್ತು 74ನೇ ತಿದ್ದುಪಡಿಗಳ ಮೂಲಕ ಪಂಚಾಯತಿ ರಾಜ್ಯ ವ್ಯವಸ್ಥೆಯನ್ನು ಅಂಗೀಕರಿಸಿದ್ದು.

ಎಡಶಕ್ತಿಗಳು ಜಾತ್ಯಾತೀತತೆಯನ್ನು ರಕ್ಷಿಸಿಕೊಳ್ಳುವಲ್ಲಿ ಮತ್ತು ಕೋಮು ಸಾಮರಸ್ಯವನ್ನು ಉಳಿಸಿಕೊಳ್ಳುವಲ್ಲಿ ಅತ್ಯಂತ ಅಚಲವಾಗಿ ನಿಂತಿರುವ ಶಕ್ತಿ. ಅಲ್ಪಸಂಖ್ಯಾತರ ಹಕ್ಕುಗಳನ್ನು ಸುರಕ್ಷಿತಗೊಳಿಸುವುದಲ್ಲದೆ, ರಂಗನಾಥ ಮಿಶ್ರ ಆಯೋಗದ ಶಿಫಾರಸುಗಳನ್ನು ಮೊತ್ತಮೊದಲಿಗೆ ಜಾರಿಗೆ ತಂದದ್ದು ಹಾಗೂ ಮುಸ್ಲಿಂ ಒಬಿಸಿ ವರ್ಗಕ್ಕೆ 10 ಶೇ. ಮೀಸಲಾತಿ ಒದಗಿಸಿದ್ದು ಪಶ್ಚಿಮ ಬಂಗಾಲದ ಎಡರಂಗ ಸರಕಾರ.

ಎಡಶಕ್ತಿಗಳ ಬದ್ಧತೆ

ಜನಗಳ ಹಕ್ಕುಗಳನ್ನು ಪ್ರತಿಪಾದಿಸುವಲ್ಲಿ ಮತ್ತು ಅವರ ಬದುಕಿನ ಮಟ್ಟಗಳು ಕೇಂದ್ರ ಸರಕಾರ ಅನುಸರಿಸುತ್ತಿರುವ ನವ-ಉದಾರವಾದಿ ಆರ್ಥಿಕ ಧೋರಣೆಗಳಿಂದ ಗಂಭೀರವಾಗಿ ಕುಸಿಯಲು ಬಿಡಬಾರದು ಎಂದು ಪ್ರತಿಪಾದಿಸುವಲ್ಲಿ ಎಡಶಕ್ತಿಗಳು ಮುಂಚೂಣಿಯಲ್ಲಿವೆ. ಸಾಮ್ರಾಜ್ಯಶಾಹಿಯೊಂದಿಗೆ ಸಾಮರಿಕ ಪಾಲುದಾರಿಕೆಗೆ ಪ್ರಯತ್ನಿಸುತ್ತ ಭಾರತೀಯ ಜನತೆಯ ಮತ್ತು ದೇಶದ ಹಿತಗಳನ್ನು ಬಿಟ್ಟುಕೊಡುತ್ತಿರುವ ಭಾರತೀಯ ಆಳುವ ವರ್ಗಗಳ ವಿರುದ್ಧ ಈ ಶಕ್ತಿಗಳು ಎಡೆಬಿಡದೆ ಹೋರಾಟ

ಪುಟ 11 ಕ್ಕೆ

ಕೇಂದ್ರದಲ್ಲಿನ ಸರ್ಕಾರದ ನೇತೃತ್ವ ಕಾಂಗ್ರೆಸ್‌ನದು. ರಾಜ್ಯ ಸರ್ಕಾರದ ನೇತೃತ್ವ ಬಿಜೆಪಿಯದು. ಆದರೆ ಎರಡು ಸರ್ಕಾರದ ನೀತಿಗಳನ್ನು ಮುನ್ನಡೆಸುವ ಎಂಜಿನ್ ಲೂಟಿಕೋರ ಜಾಗತೀಕರಣ ಎಂಬುದು ಆಕಸ್ಮಿಕವೇನಲ್ಲ.

ಜನಸಮುದಾಯದ ಸಂಪತ್ತಿನ

ಲೂಟಿ ಹೊಡೆಯುವ ಸಾಧನವಾದ ಕೇಂದ್ರ - ರಾಜ್ಯ ಬಜೆಟ್‌ಗಳು

■ ಜಿ.ಎನ್.ನಾಗರಾಜ್

ಇತ್ತೀಚೆಗೆ ಕರ್ನಾಟಕ ರಾಜ್ಯದ ಬಿಜೆಪಿ ಸರ್ಕಾರ ಎರಡು ಬಜೆಟ್‌ಗಳನ್ನು ಅತ್ಯಂತ ಅಬ್ಬರದ ಪ್ರಚಾರದೊಂದಿಗೆ ರೈತರ ಉದ್ಧಾರಕ್ಕಾಗಿ ಎಂಬ ಜಾಗಟೆಯೊಂದಿಗೆ ದೇಶದಲ್ಲಿಯೇ ಮೊದಲ ಬಾರಿಗೆ ಕೃಷಿ ಬಜೆಟ್ ಹಾಗೂ ಸಾಮಾನ್ಯ ಬಜೆಟ್‌ಗಳನ್ನು ಮಂಡಿಸಿತು. ಅದರ ಹಿಂದೆಯೇ ಯುಪಿಎ ಸರ್ಕಾರ ಕೇಂದ್ರದಲ್ಲಿಯೂ ಎಂದಿನಂತೆ ಎರಡು ಬಜೆಟ್‌ಗಳನ್ನು ರೈಲ್ವೆ ಬಜೆಟ್ ಹಾಗೂ ಸಾಮಾನ್ಯ ಬಜೆಟ್‌ಗಳನ್ನು ಮಂಡಿಸಿತು. ಕೇಂದ್ರದಲ್ಲಿ ಆಳುತ್ತಿರುವುದು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಮತ್ತು ರಾಜ್ಯದಲ್ಲಿ ಆಳುತ್ತಿರುವುದು ಬಿಜೆಪಿ ಪಕ್ಷದ ಸರ್ಕಾರ. ಎರಡೂ ಪಕ್ಷಗಳ ಹಾವು, ಮುಂಗುಸಿಯಂತೆ ಕಚ್ಚಾಡುತ್ತಿರುತ್ತವೆ. ಪರಸ್ಪರ ಸ್ಪರ್ಧೆ ಮಾಡುತ್ತಿರುತ್ತವೆ. ನೀವು ಭ್ರಷ್ಟರು, ನೀವು ಅತಿಭ್ರಷ್ಟರು, ನಾವು ಅತ್ಯಂತ ಜನಪರರು, ರೈತಪರರು, ನಾವು ನಿಮಗಿಂತಲೂ ಹೆಚ್ಚು ಜನಪರರು, ರೈತ, ಹಿಂದುಳಿದ, ದಲಿತ, ಮಹಿಳಾ ಜನಪರರು ಎಂದು ತಮ್ಮನ್ನು ತಾವು ಹೊಗಳಿಕೊಳ್ಳುವುದರಲ್ಲಿ ಎದುರಾಳಿ ಪಕ್ಷವನ್ನು ಹೀಗಳೆಯುವುದರಲ್ಲಿ ತೊಡಗಿರುತ್ತವೆ. ಇದನ್ನು ಕಂಡು ಜನಸಾಮಾನ್ಯರು ಈ ಪಕ್ಷಕ್ಕಿಂತ ಆ ಪಕ್ಷ ಮೇಲು, ಆ ಪಕ್ಷಕ್ಕಿಂತ ಈ ಪಕ್ಷ ಮೇಲು ಎಂಬ ಭ್ರಮೆಗೆ ಒಳಗಾಗುತ್ತಿದ್ದಾರೆ. ಕಾಂಗ್ರೆಸ್ ಅನ್ನು ಸೋಲಿಸಲು ಬಿಜೆಪಿಯನ್ನು, ಬಿಜೆಪಿಯನ್ನು ಸೋಲಿಸಲು ಕಾಂಗ್ರೆಸ್ಸನ್ನು ಆರಿಸುತ್ತಾರೆ. ಕಾಂಗ್ರೆಸ್‌ಗಿಂತ ಬಿಜೆಪಿ ಉತ್ತಮ ಆಡಳಿತ ನೀಡಬಹುದೆಂದು ಅಥವಾ ಬಿಜೆಪಿಗಿಂತ ಕಾಂಗ್ರೆಸ್ ಉತ್ತಮ ಆಡಳಿತ ನೀಡಬಹುದೆಂದು ಆಸೆಗಣ್ಣಿನಿಂದ ನಿರೀಕ್ಷೆ ಮಾಡುತ್ತಾರೆ.

ಆದರೆ ಈ ಸರ್ಕಾರಗಳ ನೀತಿ ಧೋರಣೆ, ಕಾರ್ಯಕ್ರಮ, ಬಜೆಟ್‌ಗಳ ಪ್ಯಾಕೇಜ್ ಮೇಲಿನ ಬಣ್ಣ ಬಣ್ಣ ಚಿತ್ರದ ಹಾಗೂ ಅಬ್ಬರದ ಅಗ್ಗಳಿಕೆಗಳ ಹೊರಮುಸುಕನ್ನು ಸರಿಸಿ ಒಳಹೊಕ್ಕು ನೋಡಲು ಕಲಿತರೆ ಎರಡೂ ಪಕ್ಷಗಳ ಹೂರಣವೂ ಒಂದೇ ಎನ್ನುವುದು ತಿಳಿಯುತ್ತದೆ. 2011ನೇ ವರ್ಷದ ಕೇಂದ್ರ, ರಾಜ್ಯ ಬಜೆಟ್‌ಗಳು ಈ ಸತ್ಯವನ್ನು ಮುಖಕ್ಕೆ ರಾಚುತ್ತವೆ.

ಕಾಂಗ್ರೆಸ್ ಹಾಗೂ ಬಿಜೆಪಿ ಎರಡೂ ಪಕ್ಷಗಳೂ ತಯಾರಿಸಿದ ಈ ಬಜೆಟ್‌ಗಳ ನಿಜವಾದ ಗುರಿಯನ್ನು ನುಣ್ಣನೆಯ ಬೆಣ್ಣೆಯಂತಹ ಮಾತುಗಳಲ್ಲಿ ಕೆಲವು ಜನಪ್ರಿಯ ಯೋಜನೆಗಳಲ್ಲಿ ಮುಚ್ಚಿಕೊಳ್ಳುವುದು ಜನರಲ್ಲಿ ಭ್ರಮೆ ಮೂಡಿಸುವುದು ಎರಡೂ ಸರ್ಕಾರಗಳ ಬಜೆಟ್‌ಗಳಿಗೆ ಸಾಮಾನ್ಯವಾಗಿದೆ.

ಎರಡೂ ಸರ್ಕಾರಗಳ ನಾಲ್ಕೂ ಬಜೆಟ್‌ಗಳಲ್ಲಿ ಸಾಮಾನ್ಯವಾದ ಮತ್ತೊಂದು ಗುಣ ತೆರಿಗೆ ಆದಾಯವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸದಿರುವುದು ಆ ಮೂಲಕ ಸರ್ಕಾರಗಳು ಒದಗಿಸುವ ಸೇವೆ, ಸೌಲಭ್ಯ, ಸಹಾಯಧನಗಳನ್ನು ವಿಸ್ತರಿಸದಿರುವುದು, ಕೊಡುತ್ತಿರುವ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿಸಲು ಹಣ ಹೆಚ್ಚಿಸದಿರುವುದು, ಸರ್ಕಾರಿ ಹುದ್ದೆಗಳನ್ನು ತುಂಬದಿರುವುದು.

ಸರ್ಕಾರದ ಸೇವೆಗಳನ್ನು ವಿಸ್ತರಿಸದಿರುವುದರ ಪರಿಣಾಮವೆಂದರೆ ಆ ಸೇವೆಗಳನ್ನು ಸರ್ಕಾರೇತರವಾಗಿ ಎಂದರೆ ಖಾಸಗೀ ಕ್ಷೇತ್ರದಿಂದ ಒದಗಿಸಿಕೊಳ್ಳಬೇಕು ಎಂದರ್ಥ. ಅಂದರೆ ಖಾಸಗೀಕರಣಕ್ಕೆ ಅಪ್ರತ್ಯಕ್ಷ ಉತ್ತೇಜನ ಅಥವಾ ಖಾಸಗೀಕರಣದ ಅನಿವಾರ್ಯತೆಯನ್ನು ಸೃಷ್ಟಿಸುವುದು. ಸರ್ಕಾರಿ ಸೇವೆಗಳನ್ನು ಹೀನಾಯ ಸ್ಥಿತಿಗೆ ತಳ್ಳಿ ಜನರಲ್ಲಿ ಅವುಗಳ ಬಗ್ಗೆ ಅತೃಪ್ತಿ ಮೂಡಿಸಿ ಅವರನ್ನು ಖಾಸಗೀ ಸಂಸ್ಥೆಗಳ ಮಡಿಲಿಗೆ ತಳ್ಳುವುದು. ಹೀಗೆ ಅಪ್ರತ್ಯಕ್ಷ ಉತ್ತೇಜನದ ಜೊತೆಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹಣ ಸಾಲದು ಎಂದು ನೇರವಾಗಿ ಸರ್ಕಾರಿ ಖಾಸಗಿ



ಸಹಭಾಗಿತ್ವವನ್ನು ನಾಲ್ಕೂ ಬಜೆಟ್‌ಗಳೂ ಹಲವು ಬಾರಿ ಪ್ರತಿಪಾದಿಸುತ್ತಿವೆ. 2 ದಶಕಗಳ ಖಾಸಗೀಕರಣದ ಪರಿಣಾಮವಾಗಿ ಇಂದು ದೇಶದ ಜನರಿಗೆ ಖಾಸಗೀ ಸೇವೆಯೆಂದರೆ ಲಾಭಕೋರತನ ಎಂದರೆ ಹೆಚ್ಚು ಹೆಚ್ಚು ಬೆಲೆ ತೆರಬೇಕಾಗುತ್ತದೆ (ಕೆಲವೇ ರಂಗಗಳ ಹೊರತಾಗಿ) ಎಂಬುದು ಅರಿವಾಗುತ್ತಿದೆ.

ತೆರಿಗೆಗಳ ವಿಷಯದಲ್ಲಿ ಕೇಂದ್ರ ಸರ್ಕಾರದ ಪಾತ್ರ ಬೃಹತ್ತಾದದ್ದು. ಹೀಗೆ ತೆರಿಗೆ ಏರಿಕೆಗೆ ಪ್ರಯತ್ನಿಸದಿರುವುದು ಒಂದೆಡೆ ಇರಲಿ. ಆದರೆ ಈಗಾಗಲೇ ನಿಗದಿಪಡಿಸಿದ್ದ ತೆರಿಗೆಗಳನ್ನು ಸಂಗ್ರಹಿಸದೆ ಕೈಬಿಟ್ಟ ತೆರಿಗೆಗಳ ಪ್ರಮಾಣವೂ ಬೃಹತ್ತಾದದ್ದು (ಬಾಕ್ಸ್ ನೋಡಿ)

ಪ್ರತಿ ಬಜೆಟ್‌ನಲ್ಲಿಯೂ ಹೀಗೆ ಅತಿ ಶ್ರೀಮಂತರಿಗೆ ತೆರಿಗೆಗಳ ವಿನಾಯಿತಿ ಮೂಲಕ ದೊಡ್ಡ ಪ್ರಮಾಣದ ಗಿಫ್ಟ್‌ಗಳನ್ನು (ಕೊಡುಗೆಗಳನ್ನು) ಕೇಂದ್ರಸರ್ಕಾರ ನೀಡುತ್ತಿರುವಂತೆಯೇ ಈ ಬಜೆಟ್‌ನಲ್ಲಿಯೂ 12,000 ಕೋಟಿಯಷ್ಟು ನೇರ ತೆರಿಗೆ ವಿನಾಯತಿಯನ್ನು ನೀಡಿದೆ. ಆದರೆ ಸರಿಸುಮಾರು ಅದೇ ಪ್ರಮಾಣದಲ್ಲಿ ಸಾಮಾನ್ಯ ಜನರಿಂದ ವಸ್ತುಗಳ ಮಾರಾಟದ ಮೇಲೆ ವಿಧಿಸುವ ಅಪ್ರತ್ಯಕ್ಷ ತೆರಿಗೆಗಳನ್ನು ಏರಿಸಿದೆ.

ಹೀಗೆ ಕೇಂದ್ರ ಸರ್ಕಾರದ ಬಜೆಟ್ ಎಂದರೆ ದೇಶದ ಸಾಮಾನ್ಯ ಜನಗಳ ಕ್ಷೇಮ ಎನ್ನುವುದಕ್ಕೆ ಬದಲಾಗಿ ಕೋಟಿಗಟ್ಟಲೆ ಸಾಮಾನ್ಯ ಜನರಿಂದ ಸಂಗ್ರಹಿಸಿದ ತೆರಿಗೆಗಳನ್ನು ಕೆಲವೇ ಶ್ರೀಮಂತರಿಗೆ ಅಪಾರ ಪ್ರಮಾಣದಲ್ಲಿ ವರ್ಗಾಯಿಸುವುದು ಎಂದಾಗಿದೆ.

ದೇಶದ ಸಂಪತ್ತಿನ ಲೂಟಿ

ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಬಜೆಟ್‌ಗಳಲ್ಲಿ ಸಾಮಾನ್ಯವಾದ ಮತ್ತೊಂದು ಅಂಶವೆಂದರೆ ದೇಶದ ಸಂಪತ್ತಿನ ಭೂಸಂಪತ್ತು ಖನಿಜ ಸಂಪತ್ತು, ಅರಣ್ಯ ಸಂಪತ್ತು, ಉಪಗ್ರಹ ಮೊದಲಾದ ತಾಂತಿಕ ಸಂಪತ್ತಿನ ಲೂಟಿ.

ರಾಜ್ಯ ಸರ್ಕಾರ ಕೃಷಿ ಭೂಮಿಯನ್ನು ವಿವಿಧ ಯೋಜನೆ, ಕೈಗಾರಿಕೆಗಳ ಹೆಸರಿನಲ್ಲಿ 68 ಲಕ್ಷ ಎಕರೆ ಭೂಸ್ವಾಧೀನ ಮಾಡಿಕೊಳ್ಳುತ್ತಿದೆ. ಅದರ ಹೊರತಾಗಿಯೂ ಕೃಷಿ ಬಜೆಟ್‌ನ ಹೆಸರಿನಲ್ಲಿ ವಿವಿಧ

ಚಮಚಾ ಬಂಡವಾಳಶಾಹಿ ಎಂದರೇನು?

ಬಂಡವಾಳಶಾಹಿಗಳು ತಮ್ಮ ವ್ಯವಹಾರದಿಂದ ಕೈಗಾರಿಕ ಮಾಲೀಕರಾಗಿಯೋ ವ್ಯಾಪಾರಿ ಗಳಾಗಿಯೋ ಲಾಭ ಪಡೆಯುತ್ತಾರೆ. ಸರ್ಕಾರಗಳನ್ನು ತಮ್ಮ ಕೈಯಲ್ಲಿಟ್ಟುಕೊಂಡು ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳಲು, ಶೋಷಣೆಯನ್ನು ತೀವ್ರಗೊಳಿಸಲು, ಶೋಷಣೆಯ ವಿರುದ್ಧದ ಪ್ರತಿಭಟನೆಗಳನ್ನು ದಮನ ಮಾಡಲು ಈ ಸರ್ಕಾರಗಳನ್ನು ಬಳಸಿಕೊಳ್ಳುತ್ತಾರೆ. ಇವರ ಲಾಭದ, ಸಂಪತ್ತಿನ ಪ್ರಧಾನ ಮೂಲಇವರ ಕೈಗಾರಿಕೆಗಳು ಅಥವಾ ವ್ಯಾಪಾರ ಸರ್ಕಾರಗಳಿಂದ ಸಹಕಾರ. ಇಂತಹ ಬಂಡವಾಳಶಾಹಿಗಳಲ್ಲಿ ಎಷ್ಟೋ ಜನ ತಮಗೆ ಬೇಕಾದ ಕೆಲವು ಸರ್ಕಾರಿ ನಿಯಮ ಅಥವಾ ಲೈಸೆನ್ಸ್‌ಗಳನ್ನು ಪಡೆಯುವುದಕ್ಕೆ ಎಷ್ಟು ಬೇಕೋ ಅಷ್ಟು ತಮ್ಮ ಕಾಣಿಕೆಯನ್ನು ಸರ್ಕಾರದಲ್ಲಿರುವ ಪಕ್ಷಕ್ಕೆ ಅಧಿಕಾರ ನಡೆಸುವ ವ್ಯಕ್ತಿಗಳಿಗೆ ಸಲ್ಲಿಸುವುದನ್ನು ಬಿಟ್ಟರೆ ಉಳಿದಂತೆ ಸರ್ಕಾರಕ್ಕೂ, ತಮಗೂ ಯಾವುದೇ ಸಂಬಂಧವಿಲ್ಲದಂತೆ ತಮ್ಮ ವ್ಯವಹಾರಗಳಲ್ಲಿ ತಾವು ಮುಳುಗಿರುತ್ತಾರೆ.

ಚಮಚಾ ಬಂಡವಾಳಶಾಹಿಗಳೆಂದರೆ ಬಂಡವಾಳಶಾಹಿಗಳ ಒಂದು ಭಾಗ. ಇವರು ಸರ್ಕಾರಕ್ಕೆ ಜೋತುಬಿದ್ದು ಸರ್ಕಾರವನ್ನು ಉಪಯೋಗಿಸಿಕೊಂಡು ಸಾರ್ವಜನಿಕ ಸಂಪತ್ತನ್ನು, ಭೂಮಿ, ನೀರು, ವಿದ್ಯುತ್, ಖನಿಜ ಸಂಪತ್ತುಗಳನ್ನು ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು, ಸಂಸ್ಥೆಗಳನ್ನು ಲೂಟಿ ಹೊಡೆಯುವುದರಲ್ಲಿ ನಿರತರಾಗಿರುತ್ತಾರೆ. ಅವರ ಸಂಪತ್ತಿನ ಪ್ರಧಾನ ಮೂಲ ಇಂತಹ ಲೂಟಿಯೇ ಆಗಿರುತ್ತದೆ. ಈ ವಿಭಾಗಕ್ಕೆ ಯಾವ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರಬೇಕು. ಆ ಸರ್ಕಾರದಲ್ಲಿ ತಮಗೆ ಅನುಕೂಲವಾದವರು ಎಂತಹ ಅಧಿಕಾರ ಪಡೆಯಬೇಕು ಎಂಬುದರಲ್ಲಿ ವಿಪರೀತ ಆಸಕ್ತಿ. ಏಕೆಂದರೆ ಇದೇ ಅವರ ಸಂಪತ್ತಿನ ರಹದಾರಿ. ಇವರ ಸರ್ಕಾರಗಳು ಅಧಿಕಾರಕ್ಕೆ ತರುವುದು, ಅಧಿಕಾರದಿಂದ ಬೀಳಿಸುವುದು ತಮಗೆ ಬೇಕಾದ ಮಂತ್ರಿಗಳನ್ನು, ಅಧಿಕಾರಿಗಳನ್ನು ಬೇಕಾದ ಇಲಾಖೆಗಳಲ್ಲಿ ಕೂರಿಸುವುದು ಬೇಡವಾದವರನ್ನು ಕಿತ್ತೊಗೆಯುವುದು ಯಾರಿಂದ ಯಾವ ತಮಗೆ ಬೇಕಾದ ಯಾವ ಸರ್ಕಾರಿ ಆಜ್ಞೆ ಪಡೆಯುವುದು ಯಾವ ನಿಯಮ ಕಾನೂನುಗಳ ಕಾಲು ಮುರಿಯುವುದು. ಇಂತಹ ಕಿತಬಿ ಕೆಲಸಗಳಲ್ಲಿಯೇ ಮುಳುಗಿರುತ್ತಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೈಬಿಟ್ಟ ತೆರಿಗೆಗಳ ಮೊತ್ತ 5 ಲಕ್ಷ ಕೋಟಿ

ಯುಪಿಎ ಸರ್ಕಾರ 2010 ಮತ್ತು 11 ರಲ್ಲಿ ಸಂಗ್ರಹಿಸಬಾರದೆಂದು ಕೈಬಿಟ್ಟ ತೆರಿಗೆಗಳ ಮೊತ್ತ 5 ಲಕ್ಷ ಕೋಟಿ ರೂ.ಗಳು. ಅದರಲ್ಲಿ ದೊಡ್ಡ ಕಂಪನಿಗಳಿಂದ ಸಂಗ್ರಹಿಸದೇ ಬಿಟ್ಟದ್ದೇ 88,000 ಕೋಟಿ ರೂ. ಕೆಲವೇ ಸಾವಿರ ಕಂಪನಿಗಳಿಂದ ಸಂಗ್ರಹಿಸದೇ ಕೈಬಿಟ್ಟ ಹಣ ಆ ಕಂಪನಿಗಳ ಮಾಲೀಕರಿಗೆ, ಅವರ ಆಡಂಬರಕ್ಕೆ ವೆಚ್ಚವಾಗುತ್ತದೆ. ಅದೇ ಹಣ ಸರ್ಕಾರ ಸಂಗ್ರಹಿಸಿ ಪಡಿತರದ ಮೂಲಕ ಆಹಾರಕ್ಕಾಗಿ ಖರ್ಚು ಮಾಡಿದ್ದರೆ ಒಂದು ವರ್ಷ ಕಾಲ 35 ಕೆ.ಜಿ. ಅಕ್ಕಿ ಇಡೀ ದೇಶದ ಎಲ್ಲಾ ಕುಟುಂಬಗಳಿಗೆ ಒದಗಿಸಲು ಸಾಕಾಗುತ್ತಿತ್ತು.

ಜನಪ್ರಿಯ ಯೋಜನೆಗಳ ಮುಸುಕಿನಲ್ಲಿ ನಿಜವಾಗಿಯೂ ಮಾಡಹೊರಟಿರುವುದು ಭೂ ಕಬಳಿಕೆ. ರಾಜ್ಯದ ಭೂಮಾಫಿಯಾಕ್ಕೆ, ವಿವಿಧ ಕೈಗಾರಿಕೆ ಹಾಗೂ ವಾಣಿಜ್ಯ ಸಂಸ್ಥೆಗೆ ಸ್ವೇಚ್ಛೆಯಾಗಿ ರೈತರ ಭೂಮಿಯನ್ನು ವಶಪಡಿಸಿಕೊಳ್ಳಲು ಅವಕಾಶ. ಯಾರು, ಎಲ್ಲಿ ಬೇಕಾದರೂ ಎಷ್ಟು ಬೇಕಾದರೂ ಕೃಷಿ ಭೂಮಿಯನ್ನು ಕೊಳ್ಳಲು ಅವಕಾಶ. ಅದರಲ್ಲಿ ನೀರಾವರಿ, ಒಣಭೂಮಿ ಎಂಬ ಬೇಧವಿಲ್ಲ. ಫಲವತ್ತಾದ ಭೂಮಿ, ಭಂಜರು ಭೂಮಿ ಎಂಬ ಬೇಧವಿಲ್ಲದೆ, ರಾಜ್ಯ ಕೃಷಿ ಉತ್ಪಾದನೆಯ ಆಹಾರ ಉತ್ಪಾದನೆಯ ಅಗತ್ಯ ಎಂಬ ಬೇಧವಿಲ್ಲದೆ ಕೃಷಿ ಭೂಮಿಯನ್ನು ಕೊಳ್ಳಲು ಭೂ ಸುಧಾರಣಾ ಕಾನೂನಿನ ತಿದ್ದುಪಡಿ. ರಾಜ್ಯ ಸರ್ಕಾರ ಅರಣ್ಯ ಕಾಯಿದೆ, ಖನಿಜ ಕಾಯಿದೆ, ಪರಿಸರ ಕಾಯಿದೆ, ಭೂ ಕಾಯಿದೆಗಳನ್ನು ಉಲ್ಲಂಘಿಸಿ ಲೆಕ್ಕವಿಲ್ಲದೆ ರಾಜ್ಯದ ಖನಿಜ ಸಂಪತ್ತನ್ನು ಕೊಳ್ಳೆ ಹೊಡೆಯಲು ಗಣಿ ಮಾಫಿಯಾಕ್ಕೆ ಅವಕಾಶ ನೀಡಿರುವುದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಬಜೆಟ್‌ನ ಸಂದರ್ಭದಲ್ಲಿ ಈ ಗಣಿಗಳ್ಳತನವನ್ನು ನಿಯಂತ್ರಿಸುವ ಬಣ್ಣದ ಮಾತುಗಳಿವೆಯೇ ಹೊರತು ಅದನ್ನು ನಿರ್ಮೂಲ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳುತ್ತೇವೆ ಎಂಬ ಬಗ್ಗೆ ಚಕಾರ ಶಬ್ದವಿಲ್ಲ.

ಸರ್ಕಾರದ ಸಚಿವರು, ಅಧಿಕಾರಿಗಳ ಯೋಜನೆಗಳ ಹಣವನ್ನು ಸರ್ಕಾರ ಸಂಗ್ರಹಿಸಬೇಕಾದ ಹಣವನ್ನು ಲಪಟಾಯಿಸಿ ಹತ್ತಾರು, ನೂರಾರು ಕೋಟಿಗಟ್ಟಲೆ ಆಸ್ತಿಯನ್ನು ಲಪಟಾಯಿಸುತ್ತಿರುವುದು ಲೋಕಾಯುಕ್ತ ಧಾಳಿಗಳ ಮೂಲಕ, ಆದಾಯ ತೆರಿಗೆ ಧಾಳಿಗಳ ಮೂಲಕ ಬೆಳಕಿಗೆ ಬಂದಿರುವಾಗಲೇ ಬಜೆಟ್‌ನಲ್ಲಿ ಭ್ರಷ್ಟಾಚಾರದ ಬಗ್ಗೆ ಒಂದೇ ಒಂದು ಸೊಲ್ಲಿಲ್ಲ. ರಾಜ್ಯ ಸರ್ಕಾರದ 88 ಸಾವಿರ ಕೋಟಿ ರೂ. ಬಜೆಟ್‌ನಲ್ಲಿ ಎಷ್ಟು ಪಾಲು ಹಾದಿಯಲ್ಲಿಯೇ ತಿಮಿಂಗಲ, ಹೆಗ್ಗಣಗಳ ಪಾಲಾಗುತ್ತದೆ, ಎಷ್ಟು ನೆಲಕ್ಕೆ ಮುಟ್ಟುತ್ತದೆ ಎಂಬ ಯಾವ ಖಾತರಿಯೂ ಇಲ್ಲ.

ಇನ್ನು ಕೇಂದ್ರ ಸರ್ಕಾರದ ಬಜೆಟ್‌ನ ಮಾತಂತೂ ಸರಿಯೇ ಸರಿ. ನಮ್ಮ ದೇಶದಲ್ಲಿರುವ ಅಧಿಕಾರದ ಅತಿ ಕೇಂದ್ರೀಕರಣ ಕೇಂದ್ರ ಸರ್ಕಾರದ ಕೈಗೆ ಇಡೀ ದೇಶದ ಜನರ ಜುಟ್ಟನ್ನೇ ಕೊಟ್ಟಿದೆ. ಇಂತಹ ಸಮಯದಲ್ಲಿ, ತರಂಗಾಂತರ ಹಗರಣಗಳೆಂಬ ಮೊಬೈಲ್ ಫೋನ್‌ಗಳಿಗೆ ಸಂಬಂಧಿಸಿದ ವ್ಯವಹಾರದಲ್ಲಿ 2 ಲಕ್ಷ ಕೋಟಿ 1.7 ಲಕ್ಷ ಕೋಟಿ ರೂ.ಗಳಷ್ಟು ದೇಶದ ಸಂಪತ್ತು ಹತ್ತಾರು ಕಂಪನಿಗಳ ಪಾಲಾಗಿದೆ. ಕೇಂದ್ರ ಸರ್ಕಾರವೂ ದೇಶದ ಖನಿಜ ಸಂಪತ್ತನ್ನು, ಅರಣ್ಯ ಸಂಪತ್ತನ್ನು ಅಪಾರ ಪ್ರಮಾಣದಲ್ಲಿ ಖಾಸಗೀ ಕಂಪನಿಗಳಿಗೆ ವಹಿಸಿ ಲೂಟಿ ಮಾಡಲು ಅವಕಾಶ ಮಾಡಿಕೊಟ್ಟಿದೆ. ಕೇಂದ್ರ, ರಾಜ್ಯ ಬಜೆಟ್‌ಗಳೆರಡು ಲೂಟಿಕೋರ ಬಂಡವಾಳಶಾಹಿ ಕೇಂದ್ರೀಕರಣದ ಸಾಧನಗಳಾಗಿವೆ (ಬಾಕ್ಸ್ ನೋಡಿ).

ಲೂಟಿಕೋರ ಬಂಡವಾಳ ಶೇಖರಣೆ

ಚಮಚಾ ಬಂಡವಾಳಶಾಹಿಗಳಿಗೆ ಸಂಬಂಧಿಸಿದ ಪ್ರಕ್ರಿಯೆ ಇದು. ಬಂಡವಾಳದ ಶೇಖರಣೆ ಎಂಬುದು ಅರ್ಥಶಾಸ್ತ್ರದಲ್ಲಿ ಒಂದು ಬಹಳ ಮುಖ್ಯ ಸಂಗತಿ. ಬಂಡವಾಳಶಾಹಿಗಳು ಶೋಷಣೆಯ ಮೂಲಕ ಲಾಭ, ಗೇಣಿ ಅಥವಾ ಗುತ್ತಿಗೆ, ಬಡ್ಡಿ ಮತ್ತಿತರ ಸಂಪತ್ತನ್ನು ಗಳಿಸುತ್ತಾರೆ. ಇದಕ್ಕೆ ಒಟ್ಟಾರೆಯಾಗಿ ಮಿಗುತಾಯ ಮೌಲ್ಯ ಎಂದು ಕರೆಯುತ್ತಾರೆ. ಈ ಲಾಭ, ಗೇಣಿ ಮೊದಲಾದ ಮಿಗುತಾಯ ಮೌಲ್ಯವನ್ನು ಗಳಿಸಬೇಕಾದರೆ ಉತ್ಪಾದನೆಯಲ್ಲಿ ತೊಡಗಬೇಕು. ಕಾರ್ಮಿಕರನ್ನು ನೇಮಿಸಿಕೊಂಡು ದುಡಿಸಿಕೊಳ್ಳಬೇಕು. ಹೀಗೆ ಗಳಿಸಿದ ಮಿಗುತಾಯ ಮೌಲ್ಯದ ಒಂದು ಭಾಗ ಬಂಡವಾಳವಾಗಿ ಮತ್ತೆ ಉತ್ಪಾದನೆಗೆ ತೊಡಗಿಸಲ್ಪಡುತ್ತದೆ. ಉಳಿದ ಭಾಗ ಆಡಂಬರದ ಜೀವನಕ್ಕಾಗಿ ಮತ್ತಿತರ ರೀತಿಯಲ್ಲಿ ವ್ಯಯವಾಗುತ್ತದೆ. ಹೀಗೆ ಉತ್ಪಾದನೆಯ ಮೂಲಕ ಬಂಡವಾಳದ ಶೇಖರಣೆಯಾಗುತ್ತದೆ. ಹೀಗೆ ಬಂಡವಾಳಶಾಹಿಗಳ ಕೈಯಲ್ಲಿ ಬಂಡವಾಳದ ಕೇಂದ್ರೀಕರಣವಾಗುತ್ತಾ ಹೋಗುತ್ತದೆ.

ಆದರೆ ಚಮಚಾ ಬಂಡವಾಳಶಾಹಿಗಳು ಉತ್ಪಾದನೆಯ ಮೂಲಭೂತ ಆರ್ಥಿಕ ಚಟುವಟಿಕೆಗಳ ಶ್ರಮಕ್ಕೆ ಕೈಹಾಕದೆ ಸಾರ್ವಜನಿಕ ಅಥವಾ ಸಮುದಾಯದ ಸಂಪತ್ತನ್ನು ಆಕ್ರಮಿಸಿಕೊಳ್ಳುವ ಮೂಲಕ ಬಂಡವಾಳದ ಶೇಖರಣೆ ಮಾಡುತ್ತಾರೆ. ಇದನ್ನು ಲೂಟಿಕೋರ ಬಂಡವಾಳ ಶೇಖರಣೆ ಎನ್ನುತ್ತಾರೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳೆರಡೂ ಹೀಗೆ ದೊಡ್ಡ ರೀತಿಯಲ್ಲಿ ಲೂಟಿಕೋರ ಬಂಡವಾಳ ಶೇಖರಣೆಗೆ, ಆ ಮೂಲಕ ಚಮಚಾ ಬಂಡವಾಳಶಾಹಿ ಬೆಳವಣಿಗೆಗೆ ಕಾರಣರಾಗಿದ್ದಾರೆ.

'ಆಮ್ ಆದ್ಮಿ'ಯನ್ನು ನಡುನೀರಿನಲ್ಲಿ ಕೈಬಿಟ್ಟ ಕೇಂದ್ರ ಬಜೆಟ್

ನವ ಉದಾರವಾದಿ ನೀತಿಗೆ ಬಲಿಷ್ಠ ಪ್ರತಿರೋಧಕ್ಕೆ ಸಿಪಿಐ(ಎಂ) ಕರೆ

2011 ಮತ್ತು 12ನೇ ಸಾಲಿನ ಕೇಂದ್ರ ಆಯವ್ಯಯ ಪತ್ರವು ದೇಶದ ಜನತೆ ಮತ್ತು ಆರ್ಥಿಕತೆಯನ್ನು ಬಾಧಿಸುತ್ತಿರುವ ಗಂಭೀರ ಸಮಸ್ಯೆಗಳನ್ನು ಬಗೆಹರಿಸಲು ವಿಫಲವಾಗಿದೆ. ಅತಿಯಾದ ಹಣದುಬ್ಬರ ಮತ್ತು ಆಹಾರ ಹಾಗೂ ಇಂಧನಗಳ ನಿರಂತರ ಬೆಲೆಯೇರಿಕೆಯಿಂದಾಗಿ ಜನತೆ ಬಸವಳಿಯುತ್ತಿರುವ ಸಂದರ್ಭದಲ್ಲಿ ಈ ಬಜೆಟ್ ಮಂಡನೆಯಾಗಿದೆ. ಈ ಹಿನ್ನೆಲೆಯಲ್ಲಿ 2010 ಮತ್ತು 11 ರಲ್ಲಿ ಖರ್ಚು ಮಾಡಿದ್ದಕ್ಕೆ (ಪರಿಷ್ಕೃತ ಅಂದಾಜು) ಪ್ರತಿಯಾಗಿ 2011 ಮತ್ತು 12ನೇ ಬಜೆಟ್‌ನಲ್ಲಿ ಇಂಧನ, ರಸಗೊಬ್ಬರ ಮತ್ತು ಆಹಾರ ಸಬ್ಸಿಡಿಗಳಲ್ಲಿ 20,000 ಕೋಟಿ ರೂಪಾಯಿಗಳನ್ನು ಕಡಿತ ಮಾಡಿರುವುದು ಆಘಾತಕರ ಸಂಗತಿಯಾಗಿದೆ. ಆಹಾರ ಸಬ್ಸಿಡಿಯಲ್ಲಿ 27 ಕೋಟಿ ರೂಪಾಯಿಗಳನ್ನು ಕಡಿತ ಮಾಡಿರುವುದು, ಒಂದು ಅರ್ಥಪೂರ್ಣ ಆಹಾರ ಭದ್ರತೆ ಕಾನೂನನ್ನು ರೂಪಿಸಲು ಸರಕಾರಕ್ಕೆ ಮನಸ್ಸಿಲ್ಲ ಎಂಬುದಕ್ಕೆ ಹಿಡಿದ ಕನ್ನಡಿಯಾಗಿದೆ. ಪೆಟ್ರೋ ಉತ್ಪನ್ನಗಳ ಮೇಲಿನ ಅಬಕಾರಿ ಮತ್ತು ಸೀಮಾ ಸುಂಕಗಳನ್ನು ಕಡಿತ ಮಾಡಲು ಹಣಕಾಸು ಸಚಿವರು ನಿರಾಕರಿಸಿರುವುದು ಹಾಗೂ ಸರಕುಗಳ ಮಾರಾಟಕ್ಕೆ ತಕ್ಕಬೆಲೆ (ಅಡವಲೋರಮ್) ಸುಂಕ ವ್ಯವಸ್ಥೆಯಿಂದ ದೂರ ಸರಿಯುವ ವಿಚಾರದಲ್ಲಿ ಹಠಮಾರಿತನ ಮಾತ್ರವಲ್ಲದೆ ಇಂಧನ ಸಬ್ಸಿಡಿಯಲ್ಲಿ 15,000 ಕೋಟಿ ರೂಪಾಯಿ ಕಡಿತ ಮಾಡಿರುವುದು ಮುಂದಿನ ದಿನಗಳಲ್ಲಿ ಇಂಧನ ಬೆಲೆಗಳಲ್ಲಿ ಭಾರೀ ಏರಿಕೆ ಆಗುವುದರ ಸೂಚನೆಯಾಗಿದೆ. ಇದು ಸರಕಾರದ ಜನವಿರೋಧಿ ಧೋರಣೆಯನ್ನು ಬಯಲು ಮಾಡಿದೆ.

ಮುಂದಿನ ವರ್ಷದಿಂದ ಜಾರಿಗೊಳಿಸುವುದಾಗಿ ಪ್ರಕಟಿಸಿರುವ ನೇರ ನಗದು ವರ್ಗಾವಣೆ (ಡೈರೆಕ್ಟ್ ಕ್ಯಾಶ್ ಟ್ರಾನ್ಸ್‌ಫರ್) ಕಾರ್ಯಕ್ರಮ ಈ ಸಬ್ಸಿಡಿ ಕಡಿತಕ್ಕೆ ಒಂದು ಮುಖವಾಡವಾಗಿದೆ. ಪ್ರಸಕ್ತ ಬಿಪಿಎಲ್ ಪಟ್ಟಿಯು ದೇಶದ ಬಡವರ ಬಹುದೊಡ್ಡ ಭಾಗವನ್ನು ಹೊರತುಪಡಿಸಿದೆ. ಒಂದು ಸಣ್ಣ ವಿಭಾಗದ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆಯು ಆಹಾರ ಮತ್ತು ಇಂಧನದಂಥ ಅಗತ್ಯ ವಸ್ತುಗಳ ಸಬ್ಸಿಡಿ ದರದ ಪೂರೈಕೆಗೆ ಪರ್ಯಾಯವಾಗಲಾರದು. ಸೀಮೆ ಎಣ್ಣೆ ದರದ ಏರಿಕೆ ಬಡವರನ್ನು ತಕ್ಷಣವೇ ತಟ್ಟುತ್ತದೆ.

ಪರೋಕ್ಷ ತೆರಿಗೆಗಳ ಮೂಲಕ 11,300 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಸಂಗ್ರಹಿಸಲು ಪ್ರಸ್ತಾಪಿಸಿರುವ ಬಜೆಟ್ ನೇರ ತೆರಿಗೆಯಲ್ಲಿ 11,500 ಕೋಟಿ ರೂಪಾಯಿಗಳ ಪರಿಹಾರವನ್ನು ಪ್ರಕಟಿಸಿದೆ. ಈ ಪರೋಕ್ಷ ತೆರಿಗೆಯ ಹೊರೆ ನಿಸ್ಸಂಶಯವಾಗಿಯೂ ಗ್ರಾಹಕರ ಮೇಲೆ ಬೀಳಲಿದೆ. ಇದು ಒಂದು ಪ್ರತಿಗಾಮಿ ತೆರಿಗೆ ವ್ಯವಸ್ಥೆಯಾಗಿದ್ದು ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಲು ಹಾಗೂ ಜನಸಾಮಾನ್ಯರಿಗೆ ಇನ್ನಷ್ಟು ಹೊರೆಯಾಗಲು ಅವಕಾಶ ಕಲ್ಪಿಸುತ್ತದೆ.

ಉಳ್ಳವರಿಗೆ ವಿನಾಯಿತಿಗಳು ಭರಪೂರ

ಖಚಿತ ಆದಾಯ ಹೇಳಿಕೆ (ಸ್ಟೇಟ್‌ಮೆಂಟ್ ಆಫ್ ರೆವಿನ್ಯೂ ಫಾರ್‌ಗಾನ್) ಪ್ರಕಾರ 2010 ಮತ್ತು 11 ರಲ್ಲಿ ಒಟ್ಟು ತೆರಿಗೆ ರಿಯಾಯಿತಿ ಮೊತ್ತ ಐದು ಲಕ್ಷ ಕೋಟಿ ರೂಪಾಯಿಗಳನ್ನು ಮೀರಿದೆ. ಆ ಪೈಕಿ ಕಾರ್ಪೊರೇಟ್ ವಲಯದ ತೆರಿಗೆ ವಿನಾಯಿತಿಗಳೇ 88,000 ಕೋಟಿ ರೂಪಾಯಿ ಆಗಿದೆ. 2007 ಮತ್ತು 08 ರಲ್ಲಿ ಬಹುತೇಕ ಶೇ.12 ಆಗಿದ್ದ ತೆರಿಗೆ ಜಿಡಿಪಿ ಅನುಪಾತ ಈಗ ಪ್ರಸಕ್ತ ಬಜೆಟ್‌ನಲ್ಲಿ ಸುಮಾರು ಶೇಕಡ 10 ಕ್ಕೆ ಕುಸಿದಿದೆ. ಆದಾಯ ಅಸಮಾನತೆಗಳು ತೀವ್ರಗತಿಯಲ್ಲಿ ಹೆಚ್ಚುತ್ತಿರುವ ಪ್ರಸಕ್ತ ಕಾಲಘಟ್ಟದಲ್ಲಿ ತೆರಿಗೆ, ಜಿಡಿಪಿ ಅನುಪಾತದಲ್ಲಿನ ಕುಸಿತವು ಮರು ಹಂಚಿಕೆ ನೀತಿಯಲ್ಲಿನ ಬದ್ಧತೆಯ ಕೊರತೆಯನ್ನು ಸೂಚಿಸುತ್ತದೆ.

ತೆರಿಗೆ ವಂಚನೆಗೆ ಮಹಾಪರ್ಮಿಟ್

ವಿದೇಶಿ ಬ್ಯಾಂಕ್‌ಗಳಲ್ಲಿ ಇಡಲಾಗಿರುವ ಕಪ್ಪು ಹಣವನ್ನು ಹೊರತೆಗೆಯಲು ಯಾವುದೇ ನಿರ್ದಿಷ್ಟ ಕ್ರಮಗಳನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿಲ್ಲ. ಭಾರತಕ್ಕೆ ಹರಿದುಬರುವ ಶೇಕಡ 42 ರಷ್ಟು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಕ್ಕೆ ಮಾರ್ಗವಾಗಿರುವಂಥದ್ದು ಮಾರಿಷಸ್ ಜತೆಗಿನ ದುಪ್ಪಟ್ಟು ತೆರಿಗೆ ನಿವಾರಣೆ ಒಪ್ಪಂದ (ಡಿಟಿಎಎ) ಬಹುರಾಷ್ಟ್ರೀಯ ಕಂಪನಿಗಳು (ಎಂಎನ್‌ಸಿ) ಮತ್ತು ಭಾರತದ ಕಾರ್ಪೊರೇಟ್ ಕಂಪನಿಗಳು ತೆರಿಗೆ ವಂಚನೆಗೆ ಈ ಒಪ್ಪಂದ ಅತಿ ದೊಡ್ಡ ರಹದಾರಿಯಾಗಿದೆ. ಇಂಥ ಮಾರ್ಗಗಳನ್ನು ಮುಚ್ಚಲು ಕ್ರಮ ಕೈಗೊಳ್ಳುವ ಬದಲು ಹಣಕಾಸು ಸಚಿವರು ಇತರ ದೇಶಗಳೊಂದಿಗೂ ಇಂಥ ತೆರಿಗೆ ನಿವಾರಣೆ ಒಪ್ಪಂದಗಳನ್ನು ಮಾಡಿಕೊಳ್ಳುವ ರಾಗ ತೆಗೆಯುತ್ತಿದ್ದಾರೆ.

ಸಂಪನ್ಮೂಲ ಕ್ರೋಢೀಕರಣದ ಮಾತು ಹಿನ್ನೆಲೆಗೆ ಸರಿಯುತ್ತಿರುವುದರಿಂದ ಜಿಡಿಪಿಯ ಶೇಕಡವಾರು ಯೋಜನಾ ವೆಚ್ಚವು ಕಳೆದ ವರ್ಷ ವ್ಯಯಿಸಿದ್ದಕ್ಕಿಂತ 2011 ಮತ್ತು 12 ರಲ್ಲಿ ಕಡಿಮೆಯಾಗಲಿದೆ. ಕೇಂದ್ರೀಯ ಯೋಜನೆಗೆ ಆಯವ್ಯಯದ ಬೆಂಬಲ 2010 ಮತ್ತು 2011 ಕ್ಕಿಂತ ಕೇವಲ ಶೇ.12 ಏರಿಕೆಯಾಗಿದೆ. ಆದರೆ ಜಿಡಿಪಿ ಶೇಕಡ 14 ರಷ್ಟು ಹೆಚ್ಚಿದೆ. ನೈಜ ವೆಚ್ಚದಲ್ಲಿ ಈ ರೀತಿಯ ಹೇರಿಕೆಯಾಗುವುದು ಎಲ್ಲಾ ಪ್ರಮುಖ ಅಭಿವೃದ್ಧಿ ಕಾರ್ಯಕ್ರಮಗಳ ಮೇಲೆ ಪರಿಣಾಮ ಬೀರುತ್ತದೆ. ಸಾಮಾಜಿಕ ವಲಯದ ಅತ್ಯಂತ ಮಹಾತ್ವಾಕಾಂಕ್ಷಿ ಯೋಜನೆಗಳನ್ನು ಬಜೆಟ್‌ನಲ್ಲಿ ಕಡೆಗಣಿಸಲಾಗಿದೆ. ನೈಜ ತಲಾ ಆದಾಯದ ವಿಚಾರವಾಗಿ ಹೇಳುವುದಾದಲ್ಲಿ ಸಾಮಾಜಿಕ ವಲಯದ ವೆಚ್ಚ ಕುಸಿಯಲಿದೆ. ರೇಗಾ (ಉದ್ಯೋಗ ಖಾತರಿ ಯೋಜನೆ) ಕೂಲಿಯಲ್ಲಿ ಹೆಚ್ಚಳವಾಗಿದೆಯೆಂದು ಹೇಳಲಾಗುತ್ತಿದ್ದರೂ ರೇಗಾ

ಪುಟ 15 ಕ್ಕೆ

ನೆರೆ ಹೊರೆ

ಚುನಾವಣಾ ಬಿಸಿಯಲ್ಲಿ ಪಶ್ಚಿಮ ಬಂಗಾಳ :

ಜನಬೆಂಬಲ ಗಳಿಸಿಕೊಳ್ಳುತ್ತಿರುವ ಎಡರಂಗ, ನಕ್ಸಲ್ ನಂಟಿನ ಮಮತಾಗೆ ಸಂಕಟ

ನಾಲ್ಕು ರಾಜ್ಯ ಹಾಗೂ ಒಂದು ಕೇಂದ್ರಾಡಳಿತ ಪ್ರದೇಶದ ಚುನಾವಣೆಗಳು ಘೋಷಣೆಯಾಗಿವೆ. ಈ ಪೈಕಿ ಪಶ್ಚಿಮ ಬಂಗಾಳ ಇಡೀ ದೇಶದಲ್ಲಿ ಗಮನ ಸೆಳೆವ ರಾಜ್ಯ. ಇದಕ್ಕೆ ಹಲವು ಕಾರಣಗಳಿವೆ. ಸಿಪಿಐ(ಎಂ) ನೇತೃತ್ವದ ಎಡರಂಗ ಸತತ ಎಂಟನೇ ಬಾರಿ ಬಹುಮತ ಪಡೆದು ಅಧಿಕಾರಕ್ಕೆ ಮರಳುತ್ತದೋ ಅಥವಾ ಕಳೆದ ಕೆಲ ಚುನಾವಣೆಗಳಂತೆ ಹಿನ್ನಡೆ ಕಾಣುತ್ತದೋ ಎಂಬ ಎಂಬ ಕುತೂಹಲ ವ್ಯಾಪಕವಾಗಿದೆ.

ದೇಶದ ರೈತ-ಕಾರ್ಮಿಕ, ಶೋಷಣೆಗೊಳಗಾದವರ ಪರ ಧ್ವನಿ ಎತ್ತುತ್ತಿರುವ ಎಡ ಶಕ್ತಿಗಳ ಸ್ಫೂರ್ತಿ ಸೆಲೆಯಾಗಿರುವ ಪಶ್ಚಿಮ ಬಂಗಾಳ ಅಧಿಕಾರದಲ್ಲಿ ಉಳಿಯಬೇಕು ಎಂಬ ಬಯಕೆ ಸಹಜವಾಗಿಯೇ ಎಡ, ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ಚಳವಳಿಯದ್ದು. ಅದನ್ನು ಸಾಕಾರಗೊಳಿಸಲು ಸಿಪಿಐ(ಎಂ) ಸೇರಿದಂತೆ ಎಡರಂಗದ ಕಾರ್ಯಕರ್ತರು, ಹಿತೈಷಿಗಳು ಶಕ್ತಿಮೀರಿ ದುಡಿಯುತ್ತಿದ್ದಾರೆ.

ಇದಕ್ಕೆ ಪ್ರತಿಯಾಗಿ, ಈ ಬಾರಿ ಯಾವುದೇ ರೀತಿಯಲ್ಲಾದರೂ ಅಧಿಕಾರ ಪಡೆದೇ ಪಡೆಯಬೇಕೆಂಬ ಹಠಕ್ಕೆ ಬಿದ್ದವರ ಹಾಗೆ ತೃಣಮೂಲ ಕಾಂಗ್ರೆಸ್ ಎಲ್ಲ ಕುಕೃತ್ಯಗಳಲ್ಲಿ ತೊಡಗಿದೆ. ಕಳೆದ ಲೋಕಸಭಾ ಚುನಾವಣೆ, ಆ ಬಳಿಕ ನಡೆದ ವಿವಿಧ ಚುನಾವಣೆಗಳಲ್ಲಿ ಪಶ್ಚಿಮಬಂಗಾಳದ ಆಡಳಿತಾರೂಢ ಎಡರಂಗಕ್ಕೆ ಸಾಕಷ್ಟು ಹಿನ್ನಡೆಯಾಗಿತ್ತು. ಈ ಹಿನ್ನೆಲೆಯಲ್ಲಿ ಮೂರುವರೆ ದಶಕದ ಎಡರಂಗದ ಅಧಿಪಥ್ಯ ಕೊನೆಗೊಳ್ಳುತ್ತಿದೆ ಎಂಬ ಭಾವನೆಯನ್ನು ಮೂಡಿಸಲಾಗುತ್ತಿದೆ. ಇದನ್ನೇ ಬಯಸುವವರಂತೆ ದೊಡ್ಡಬಂಡವಾಳಿಗರ ಹಿಡಿತದ ಮಾಧ್ಯಮಗಳು ಇದಕ್ಕೆ ಪೂರಕವಾದ ಕಪೋಲಕಲ್ಪಿತ ವರದಿಯನ್ನು ಪ್ರಕಟಿಸುತ್ತಾ ಬಂದಿವೆ.

ಎಪ್ರಿಲ್-ಮೇನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗೆ ನೀತಿ ಸಂಹಿತೆ ಜಾರಿಯಾಗಿದೆ. ಸಭೆ-ಸಮಾರಂಭಗಳು, ರಾಜಕೀಯ ಚಟುವಟಿಕೆ ಮೇಲೆ ಚುನಾವಣಾ ಆಯೋಗ ಹದ್ದಿನ ಕಣ್ಣಿಡುತ್ತಿದೆ. ವೈಯಕ್ತಿಕ ಆರೋಪ-ಪ್ರತ್ಯಾರೋಪದಲ್ಲಿ ತೊಡಗಿಕೊಳ್ಳದಂತೆ ಸೂಚನೆಯನ್ನೂ ನೀಡಲಾಗಿದೆ.

ಆರು ಹಂತಗಳಲ್ಲಿ ಚುನಾವಣೆ

ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಆರು ಹಂತಗಳಲ್ಲಿ ಚುನಾವಣೆ ನಡೆಯಲಿದೆ. 294 ಸದಸ್ಯ ಬಲದ ರಾಜ್ಯ ವಿಧಾಸನಭೆಗೆ ಎಪ್ರಿಲ್ 18ರಿಂದ ಮೇ 10ರ ವರೆಗೆ ಮತದಾನ ಪ್ರಕ್ರಿಯೆ ನಡೆಯಲಿದ್ದು, 5.61 ಕೋಟಿ ಮತದಾರರು ತಮ್ಮ ಹಕ್ಕನ್ನು ಚಲಾಯಿಸಲಿದ್ದಾರೆ. ಚುನಾವಣಾ ಆಯೋಗದ ಈ ನಿರ್ಧಾರಕ್ಕೆ ಎಡರಂಗ ಸಂಚಾಲಕ ಬಿಮನ್ ಬಸು ಸಂತೃಪ್ತಿ ವ್ಯಕ್ತಪಡಿಸಿದ್ದಾರೆ. ಮಾವೋ ಪೀಡಿತ ಜಂಗಲ್‌ಮಹಲ್ ಸೇರಿದಂತೆ ರಾಜ್ಯದ ಹದಗೆಟ್ಟ ಕಾನೂನು ಪರಿಸ್ಥಿತಿಗೆ ತೃಣಮೂಲ ಕಾಂಗ್ರೆಸ್ ಪ್ರಮುಖ ಕಾರಣ ಎಂದು ಅವರು ಟೀಕಿಸಿದ್ದಾರೆ. ಮಾವೋವಾದಿಗಳ ಪೊಲೀಸ್ ಸಂತ್ರಸ್ತ್ ವಿರೋಧಿ ಜನಸಂಘರ್ಷ ಸಮಿತಿಗೆ ತೃಣಮೂಲ ಬೆಂಬಲ ನೀಡದೇ ಇರುತ್ತಿದ್ದರೆ, ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಪ್ರಜಾಸತ್ತೆಯ ಕಗ್ಗೊಲೆ ನಡೆಯುತ್ತಿರಲಿಲ್ಲ, ಇಷ್ಟೊಂದು ಸಾವು ನೋವುಗಳು ಸಂಭವಿಸುತ್ತಿರಲಿಲ್ಲ ಎಂದು ಬಿಮನ್ ಬಸು ಸ್ಪಷ್ಟಪಡಿಸಿದ್ದಾರೆ. ಚುನಾವಣೆಗೆ ಎಡರಂಗ ಸರ್ವಸಜ್ಜಾಗಿದೆ, ಮಾರ್ಚ್ 15ರೊಳಗೆ ಅಭ್ಯರ್ಥಿಗಳ ಪಟ್ಟಿ ಹಾಗೂ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ಹೆಚ್ಚುತ್ತಿರುವ ಜನಬೆಂಬಲ

ನಂದಿಗ್ರಾಮ, ಸಿಂಗೂರು ಹಾಗೂ ಲಾಲ್‌ಘಡದಲ್ಲಿ ನಡೆದ ಹಿಂಸಾಚಾರ ಎಲ್ಲೆಡೆ ವ್ಯಾಪಕ ಚರ್ಚೆಗೊಳಗಾದವು. ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಕುಸಿದಿರುವ ಭೀತಿಯನ್ನು ಕೇಂದ್ರ ಸರ್ಕಾರ ವ್ಯಕ್ತಪಡಿಸಿತ್ತು. ದೇಶಾದ್ಯಂತ ನಡೆದ ಅಪಪ್ರಚಾರ, ಸುಳ್ಳಿನ ವರದಿಗಳಿಂದಾಗಿ ಎಡಪಕ್ಷಗಳ ಶಕ್ತಿಕೇಂದ್ರ ಪಶ್ಚಿಮ ಬಂಗಾಳದ ಬಗ್ಗೆ ಅಲ್ಲಿನ ಪಕ್ಷ, ಸಂಘಟನೆ ಬಗ್ಗೆ ಜನ ಸಂಶಯದಿಂದ ನೋಡುವಂತಾಯಿತು. ಕೆಲವೊಂದು ಜನವಿಭಾಗಗಳು ಎಡರಂಗದಿಂದ ದೂರ ಸರಿದದ್ದೂ ಸ್ವಲ್ಪಮಟ್ಟಿಗೆ ವಾಸ್ತವವಾಗಿತ್ತು. ಇದು ಎಡವಿರೋಧಿ ಅಪಪ್ರಚಾರಕ್ಕೆ ಮತ್ತಷ್ಟು ತುಪ್ಪ ಸುರಿಯುವಂತಾಯಿತು. ತೃಣಮೂಲ ಇದನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಎಲ್ಲ ರೀತಿಯ ಪ್ರಯತ್ನಗಳನ್ನೂ ಮಾಡಿತು. ಮಾವೋವಾದಿ ಸಂಘಟನೆಗಳ ಜೊತೆ ನಿಕಟವಾದ ಸಂಪರ್ಕವನ್ನಿಟ್ಟಿತ್ತು. ಅವರಿಗೆ ನಂದಿಗ್ರಾಮ, ಲಾಲ್‌ಗಢ ಹಾಗೂ ಜಂಗಲ್‌ಮಹಲ್‌ಗಳಲ್ಲಿ ನೆಲೆಯನ್ನು ರೂಪಿಸಿತು. ನಕ್ಸಲ್ ನಾಯಕರೊಂದಿಗೆ ತೃಣಮೂಲದ ಪ್ರಮುಖ ಸಂಸತ್ ಸದಸ್ಯರು, ನಾಯಕರು ಹಗಲಿರುಳು ಶ್ರಮಿಸಿ ಕೆಲ ಗ್ರಾಮಸ್ಥರನ್ನು ಬುಟ್ಟಿಗೆ ಹಾಕಿಕೊಂಡರು. ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಿದರು. ಸಿಪಿಐ(ಎಂ) ಕಾರ್ಯಕರ್ತರನ್ನು, ನಾಯಕರನ್ನು ಬೆನ್ನಟ್ಟಿ ಕೊಂದರು. ಹಿತೈಷಿ ಕುಟುಂಬಗಳ ಮೇಲೆ ದೌರ್ಜನ್ಯ ನಡೆಸಿದರು. ಪಕ್ಷದ, ಸಾಮೂಹಿಕ ಸಂಘಟನೆಗಳ ಕಚೇರಿಗಳನ್ನು ಧ್ವಂಸಗೊಳಿಸಿದರು. ಬೆಂಕಿ ಇಟ್ಟರು. ಕೃಷಿ ಭೂಮಿಯ ರಕ್ಷಣೆ ಹೆಸರಲ್ಲಿ ಗ್ರಾಮಸ್ಥರನ್ನು ದೋಚಿದರು. ಸಾವಿರಾರು ಕುಟುಂಬಗಳು ಬೀದಿಪಾಲಾಗುವಂತೆ ಮಾಡಿದರು. ಅಂತಿಮವಾಗಿ ನಕ್ಸಲರ ಹಿಂಸಾಚಾರದಿಂದ ಜನ ರೋಸಿ ಹೋದರು. ಒಂದು ಹಂತದಲ್ಲಿ ತಿರುಗಿಬಿದ್ದರು. ಸಂಘಟಿತರಾದರು. ನಕ್ಸಲೀಯರು-ತೃಣಮೂಲ ನಂಟಿನ ಹಿಂದಿರುವ ಸತ್ಯವನ್ನು ಜನರು ಅರಿತರು.

ಇನ್ನೊಂದೆಡೆ, ತಮ್ಮಿಂದ ದೂರ ಹೋದ ಜನತೆಯನ್ನು ಮನವೊಲಿಸಲು ಸಿಪಿಐ(ಎಂ) ಕಾರ್ಯಕರ್ತರೂ ಹಗಲಿರುಳು ಶ್ರಮಿಸಿದರು. ನಿರಂತರ ಸಂಪರ್ಕ, ಚಟುವಟಿಕೆ ಹಾಗೂ ಜನಪರ ಕಾರ್ಯಕ್ರಮಗಳಿಂದಾಗಿ ಮತ್ತೆ ಜನಬೆಂಬಲ ಜನರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾದರು.

ಡಿಸೆಂಬರ್ ಮತ್ತು ಜನವರಿಯಲ್ಲಿ ಪಕ್ಷ ಗ್ರಾಮ ಗ್ರಾಮಗಳಲ್ಲಿ ಬೀದಿ ಬದಿ ಸಭೆ, ಗಲ್ಲಿ ಮೀಟಿಂಗ್ ಹಾಗೂ ಹೋಬಳಿ ಮಟ್ಟದ ಸಭೆಗಳನ್ನು ಆಯೋಜಿಸಿತು. ಮುಂದಿನ ಹಂತವಾಗಿ ಜಿಲ್ಲಾ ಮಟ್ಟದ ರ್‍ಯಾಲಿಗಳು ನಡೆದವು.(ಹೆಚ್ಚಿನ ವಿವರಗಳಿಗೆ ಹಿಂದಿನ ಸಂಚಿಕೆ ನೋಡಿ) ಈ ಎಲ್ಲ ಜಿಲ್ಲಾ ಮಟ್ಟದ ರ್‍ಯಾಲಿಗಳಿಗೂ ಅಭೂತಪೂರ್ವ ಜನಬೆಂಬಲ ವ್ಯಕ್ತವಾದವು. ಜಂಗಲ್ ಮಹಲ್, ಲಾಲ್‌ಗಢದಲ್ಲಿ ನಡೆದ ರ್‍ಯಾಲಿಗೂ ಭರ್ಜರಿ ಬೆಂಬಲ ವ್ಯಕ್ತವಾದವು.



ಅಂತಿಮವಾಗಿ ಫೆಬ್ರವರಿ 13ರಂದು ಕೊಲ್ಕೊತ್ತಾದ ಬ್ರಿಗೇಡ್ ಪೆರೇಡ್ ಗ್ರೌಂಡ್‌ನಲ್ಲಿ ಸೇರಿದ ಜನಸಾಗರ ಇಲ್ಲಿಯತನಕದ ಎಲ್ಲ ದಾಖಲೆಯನ್ನು ಮುರಿದು ಹೊಸ ಇತಿಹಾಸ ಬರೆಯಿತು. ಈ ರ್‍ಯಾಲಿ ಚುನಾವಣಾ ಪ್ರಚಾರಕ್ಕೆ ಮುನ್ನುಡಿ ಬರೆಯಿತು. ಈ ರ್‍ಯಾಲಿಯಲ್ಲೂ ನಕ್ಸಲ್ ಪೀಡಿತ ಜಂಗಲ್ ಮಹಲ್ ಹಾಗೂ ಉತ್ತರ ಬಂಗಾಳದ ಜಿಲ್ಲೆಗಳ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಎಡ ಪರ್ಯಾಯವೇ ಜನರಿಗೆ ಇರುವ ಏಕೈಕ ದಾರಿ ಎಂಬುದನ್ನು ಈ ಜನಸಾಗರ ಮತ್ತೊಮ್ಮೆ ಸಾಬೀತುಪಡಿಸಿತು.

ಕಂಗೆಟ್ಟ ತೃಣಮೂಲ- ಬೆಂಬಲಕ್ಕೆ ಮೊರೆ

ಇತ್ತೀಚಿನ ದಿನಗಳಲ್ಲಿ ಎಡರಂಗದತ್ತ ಮತ್ತೆ ಜನ ಬೆಂಬಲ ಹರಿದುಬರುತ್ತಿರುವುದನ್ನು ಕಂಡು ಮಮತಾ ಹತಾಶೆಗೊಂಡಿದ್ದಾರೆ. ಈ ಹತಾಶೆ, ಸಂಕಟ ಅವರ ಮಾತು ಮತ್ತು ಕೃತಿಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ. ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹೇಳುವ ಮೂಲಕ ಅವರ ಬೆಂಬಲಿಗರಿಗೆ ಶಾಕ್ ನೀಡಿದ್ದಾರೆ. ಒಂದು ವೇಳೆ ತೃಣಮೂಲ ಅಧಿಕಾರಕ್ಕೆ ಬಂದರೆ ಆರು ತಿಂಗಳಲ್ಲಿ ಚುನಾವಣೆ ಎದುರಿಸಿ ವಿಧಾನಸಭೆ ಪ್ರವೇಶಿಸುತ್ತೇನೆ ಎಂದಿದ್ದಾರೆ. ಇದು ಪಕ್ಷಕ್ಕೆ ಹಿನ್ನಡೆಯಾಗಲಿದೆ ಎಂಬ ಸ್ಪಷ್ಟ ಸಂಕೇತವನ್ನು ರವಾನಿಸಿದೆ. ಅಷ್ಟೇ ಅಲ್ಲದೆ, ಎಡರಂಗವನ್ನು ಸೋಲಿಸಲು ಮಹಾಮೈತ್ರಿ ಅತ್ಯಗತ್ಯ ಎಂಬ ತನ್ನ ಹಳೆರಾಗ ಉಲಿದಿದ್ದಾರೆ. ಬದಲಾವಣೆಗಾಗಿ ತಮ್ಮನ್ನು ಬೆಂಬಲಿಸುವಂತೆ ಎಡರಂಗದ ಬೆಂಬಲಿಗರು, ಹಿತೈಷಿಗಳಲ್ಲಿ ಮೊರೆ ಇಟ್ಟಿದ್ದಾರೆ.

"35 ವರ್ಷಗಳಿಂದ ಎಡರಂಗವನ್ನು ಬೆಂಬಲಿಸಿದ್ದೀರಾ... ತಾತ್ವಿಕವಾಗಿ ಎಡ ಸಿದ್ಧಾಂತ ಕೆಟ್ಟದೇನಲ್ಲ. ಆದರೆ, ನೇತಾಯಿ ಹಾಗೂ ನಂದಿಗ್ರಾಮದ ನರಮೇಧದಿಂದ ಸಾಕಷ್ಟು ಮಂದಿ ನೋವು ಅನುಭವಿಸಿದ್ದಾರೆ. ಇದರಿಂದ ಈ ಬಾರಿಯಾದರೂ ಬದಲಾವಣೆಗಾಗಿ ಮತ ಚಲಾಯಿಸಲಿ" ಎಂದು ಮಮತಾ ಜನತೆಯಲ್ಲಿ ಗೋಗರೆದಿದ್ದಾರೆ. ಎಸ್‌ಯುಸಿಐ ಮತ್ತು ಕಾಂಗ್ರೆಸ್ ಜೊತೆಗೆ ಮೈತ್ರಿ ಮಾಡಿಕೊಂಡಿರುವ ತೃಣಮೂಲ ನಾಯಕಿ ಮಮತಾ, ಸಿಪಿಐ(ಎಂ)ನ್ನು ಅಧಿಕಾರದಿಂದ ಕಿತ್ತೊಗೆಯಬೇಕಾದರೆ ಪ್ರತಿಪಕ್ಷಗಳು ಒಗ್ಗೂಡಿ ಏರ್ಪಡುವ ಮಹಾಮೈತ್ರಿ ಅಗತ್ಯ ಎಂದು ಪ್ರತಿಪಾದಿಸಿದ್ದಾರೆ.

ಈ ಮನವಿ ಮಮತಾ ಅವರ ಹತಾಶತನವನ್ನು ತೋರ್ಪಡಿಸುತ್ತಿದೆ ಎಂದು ಸಿಪಿಐ(ಎಂ) ನಾಯಕ ಮಹಮ್ಮದ್ ಸಲೀಂ ಅಭಿಪ್ರಾಯಪಟ್ಟಿದ್ದಾರೆ. ಸಿಪಿಐ(ಎಂ)ಗೆ ಹೆಚ್ಚುತ್ತಿರುವ ಜನಬೆಂಬಲ ಕಂಡು ಮಮತಾ ಮನೋಬಲ ಕುಗ್ಗಿಹೋಗಿದೆ, ಅವರು ಆತ್ಮವಿಶ್ವಾಸ ಕಳೆದುಕೊಂಡಿದ್ದಾರೆ. ಏಕಾಂಗಿಯಾಗಿ ಅಥವಾ ಈಗಿರುವ ಪರಿಸ್ಥಿತಿಯಲ್ಲಿ ಎಡರಂಗವನ್ನು ಅಧಿಕಾರದಿಂದ ಕಿತ್ತೊಗೆಯಲು ಸಾಧ್ಯವಿಲ್ಲ ಎಂಬ ಹತಾಶೆಯಲ್ಲಿ ಮಮತಾ ಈ ಹೇಳಿಕೆ ನೀಡಿದ್ದಾರೆ ಎಂದು ಸಲೀಂ ಪ್ರತಿಕ್ರಿಯೆ ನೀಡಿದ್ದಾರೆ.

ಎರಡು ವರ್ಷಗಳ ಹಿಂದೆ ಅಥವಾ ಒಂದು ವರ್ಷದ ಕೆಳಗೆ ಆಕೆ ವಿಧಾನಸಭೆಯಲ್ಲಿ ಬಹುಮತ ಸಾಧಿಸುವ ವಿಶ್ವಾಸ ಹೊಂದಿದ್ದರು. ಆದರೀಗ, ಮಹಾಮೈತ್ರಿಯ ಹೊರತಾಗಿಯೂ ಈ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಎಂದಿದ್ದಾರೆ.

ನಕ್ಸಲ್ ನಂಟಿಗೆ ಮತ್ತಷ್ಟು ಪುರಾವೆ

ಪಶ್ಚಿಮ ಬಂಗಾಳದಲ್ಲಿ ಕಳೆದೆರಡು ವರ್ಷಗಳಿಂದ ನಡೆದ ಹಿಂಸಾಚಾರಕ್ಕೆ, ರಾಜಕೀಯ ಹತ್ಯಾಕಾಂಡಗಳ ಹಿಂದೆ ನಕ್ಸಲೀಯರ ಕೈವಾಡ ಇದೆ. ಈ ನಕ್ಸಲೀಯರು ತೃಣಮೂಲ ಕಾಂಗ್ರೆಸ್ ಜೊತೆ ನಿಕಟ ನಂಟು ಹೊಂದಿದ್ದಾರೆ ಎಂಬುದಕ್ಕೆ ಮತ್ತಷ್ಟು ಸಾಕ್ಷಿ ಪುರಾವೆಗಳು ಲಭಿಸಿವೆ. ಜನವರಿ 10ರಂದು ಒರಿಸ್ಸಾದ ಕಟಕ್‌ನಲ್ಲಿ ಬಂಗಾಳ ಮತ್ತು ಒರಿಸ್ಸಾ ಪೊಲೀಸರು ತೃಣಮೂಲ ಕಾಂಗ್ರೆಸ್ ನಾಯಕನನ್ನು ಬಂಧಿಸಿದರು. ಬಂಧಿತ ಆರೋಪಿ ಡಿಸೆಂಬರ್ 5ರಂದು ನಡೆದ ಜಂಗಲ್‌ಮಹಲ್ ಅರಣ್ಯದಲ್ಲಿ ಸ್ಫೋಟ ನಡೆಸಿದ ಹಾಗೂ ವಿವಿಧ ಸರಣಿ ಅಪರಾಧ ಕೃತ್ಯ ನಡೆಸಿದ್ದ ನಕ್ಸಲೀಯರಿಗೆ ಆಶ್ರಯ ನೀಡಿದ್ದ ಆರೋಪ ಹೊಂದಿದ್ದ. ಕಟಕ್ ಆಸ್ಪತ್ರೆಗೆ ಸೇರಿಸಿದ ಇಬ್ಬರು ವ್ಯಕ್ತಿಗಳು ನಕ್ಸಲೀಯರೇ ಅಲ್ಲ ಎಂದು ಬಂಧಿತ ಜಾರ್ಗ್ರಮ್‌ನ ಪ್ರಭಾವಿ ತೃಣಮೂಲ್ ನಾಯಕ

ಪುಟ 15ಕ್ಕೆ

ಒಂದು ವಾರಗಳ ಕಾಲ ಪತ್ರಿಕೆಗಳಲ್ಲಿ ಟಿ.ವಿ ಮಾಧ್ಯಮಗಳಲ್ಲಿ ಅಂಗನವಾಡಿ ನೌಕರರಿಗೆ ನಿವೃತ್ತಿ ವೇತನ ನಿಗದಿ, ಕಾರ್ಯಕರ್ತೆಯರಿಗೆ 500 ಮತ್ತು ಸಹಾಯಕಿಯರಿಗೆ-250 ರೂ. ಹೆಚ್ಚಳ ರಾಜ್ಯ ಬಜೆಟ್‌ನಲ್ಲಿ, ಕೇಂದ್ರ ಬಜೆಟ್‌ನಲ್ಲಿ ಅಂಗನವಾಡಿ ನೌಕರರಿಗೆ ಬಂಪರ್ ಕೊಡುಗೆ ಕ್ರಮವಾಗಿ 1500,750 ರೂ. ಎಂದು ಎಲ್ಲೆಡೆಯೂ ಸುದ್ದಿಯೋ ಸುದ್ದಿ. ಇದು ಮೇಲ್ನೋಟಕ್ಕೆ ಸಂತೋಷದ ವಿಚಾರ ಹೌದು. ಆದರೆ ಅಷ್ಟೊಂದು ಸಂತೋಷ ಪಡುವ ವಿಚಾರವು ಅಲ್ಲ...

ಹೇಗೆ ಎನ್ನುತ್ತೀರಾ ?

36 ವರ್ಷಗಳ ಸತತ ದುಡಿಮೆ "ಮಾನವ ಸಂಪನ್ಮೂಲಗಳ ಸಮಗ್ರ ಅಭಿವೃದ್ಧಿಗೆ" ಶ್ರಮಿಸುತ್ತಿರುವ ಐಸಿಡಿಎಸ್ ಮುಖ್ಯ ಬೆನ್ನೆಲುಬಾಗಿ ದುಡಿಯುತ್ತಿರುವವರು ಈ ಅಂಗನವಾಡಿ ನೌಕರರು.

ಇವರ ಬೇಡಿಕೆ ತಮ್ಮನ್ನು 3 ಮತ್ತು 4 ನೇ ಗ್ರೇಡಿನ ಸರ್ಕಾರಿ ನೌಕರರನ್ನಾಗಿ ಪರಿಗಣಿಸ ಬೇಕೆಂಬುದು. ಅದನ್ನು ಪರಿಗಣಿಸುವ ತನಕ ಕೌಶಲ್ಯ ಮತ್ತು ಅರೆಕೌಶಲ್ಯ ಭರಿತ ಕನಿಷ್ಠ ಕೂಲಿ ಕೊಡಬೇಕೆಂಬುದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆಯ ಆಗ್ರಹವಾಗಿತ್ತು. ಆದರೆ ಸರ್ಕಾರ ಇದ್ಯಾವುದಕ್ಕೂ ಸೊಪ್ಪೆ ಹಾಕುತ್ತಿಲ್ಲ. ಅಖಿಲ ಭಾರತ ಮಟ್ಟದಲ್ಲಿ ನಿರಂತರವಾದ ಹೋರಾಟಗಳನ್ನು ಮಾಡಿ ಅದರಲ್ಲೂ 2010ರಲ್ಲಿ ಮೇ ತಿಂಗಳಲ್ಲಿ 2 ಬಾರಿ ಮಹಾ ಪಡಾವ್, ರಾಜ್ಯದಲ್ಲಿ ಹಲವು ತರಹದ ಹೋರಾಟಗಳು, 23 ಫೆಬ್ರವರಿಯಲ್ಲಿ ನಡೆದ ದೆಹಲಿ ಚಲೋ, ಆ ಸಂದರ್ಭದಲ್ಲಿಯೇ ಹಣಕಾಸು ಮಂತ್ರಿಗಳಾದ ಪ್ರಣವ್ ಮುಖರ್ಜಿಯವರ ಭೇಟಿ ರಾಜ್ಯದಲ್ಲಿ ನವಂಬರ್ 15 ರಿಂದ ಬೆಂಗಳೂರಿನಲ್ಲಿ 4 ದಿನಗಳ ಅನಿರ್ದಿಷ್ಟ ಹೋರಾಟ, ನವಂಬರ್ 22, ಫೆಬ್ರವರಿ 2 ರಂದು ಜಿಲ್ಲಾ ಪಂಚಾಯತ್‌ಗಳ ಮುತ್ತಿಗೆ ಕಾರ್‍ಯಕ್ರಮದಂತಹ ಹಲವು ಸತತ ಹೋರಾಟಗಳು ರಾಜ್ಯದಲ್ಲಿ ಮತ್ತು ದೇಶದಲ್ಲಿ ನಡೆದಿವೆ. ಬಹುಶಃ

ಅಂಗನವಾಡಿ ನೌಕರರಿಗೆ ವೇತನ ಹೆಚ್ಚಳವಾಗಿದೆ. ಇದು ಸರ್ಕಾರ ದಯಾಪರತೆ ಏನಲ್ಲ. ಬೆವರು ಸುರಿಸಿ ದುಡಿಯುವ ನೌಕರರ ನ್ಯಾಯಬದ್ಧ ಹಕ್ಕು ಹಾಗೂ ಹೋರಾಟದ ಫಲ ಅದು. ಈ ಮಧ್ಯೆ ರಾಜ್ಯ ಬಿಜೆಪಿ ಸರ್ಕಾರ ಮುಷ್ಕರ ಮಾಡುವಂತಿಲ್ಲ ಎಂದಿದೆ. ಅಂಗನವಾಡಿ ನೌಕರರ ಸಂಘವು ಏನನ್ನುತ್ತದೆ? ಓದಿ.

ಅಂಗನವಾಡಿ ನೌಕರರಿಗೆ ಗೌರವಧನ ಹೆಚ್ಚಳ ನಿರಂತರ ಹೋರಾಟಕ್ಕೆ ಸಿಕ್ಕ ಫಲ

■ ಎಸ್. ವರಲಕ್ಷ್ಮಿ

ದೇಶದಾದ್ಯಂತ ತಿಂಗಳಿಗೊಮ್ಮೆ ಅಂಗನವಾಡಿ ನೌಕರರ ಹೋರಾಟ ನಡೆದಿದೆ. ಇದರ ಫಲವಾಗಿ ಸ್ವಲ್ಪ ಮಟ್ಟಿಗೆ ಗೌರವಧನ ಹೆಚ್ಚಳವಾಗಿದೆ.

ಬೇಡಿಕೆಯು ಖಾಯಂಯಾತಿ ಆಗಬೇಕೆನ್ನುವುದು. ಆಗುವವರೆಗೂ ಕುಶಲ ಮತ್ತು ಅರೆಕುಶಲ ಕಾರ್ಮಿಕರ ಕೂಲಿಯನ್ನು ಕೊಡಬೇಕು ಎಂಬುದು. ಈ ಬೇಡಿಕೆಯನ್ನು ಸರ್ಕಾರ ಪುರಸ್ಕರಿಸಿಲ್ಲ.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ರೂ 500, 250 ರೂ. ಹೆಚ್ಚಳ ಮಾಡಿದ್ದು ಅಂಗನವಾಡಿ ನೌಕರರ ಮೇಲಿನ ಪ್ರೀತಿಯಿಂದಲ್ಲ. ಅಂಗನವಾಡಿ ಕೇಂದ್ರದ ಕೆಲಸ ಮೊದಲು ಬೆಳಗ್ಗೆ 9-30 ರಿಂದ 1-30 ರ ತನಕ ಮಾತ್ರ ಇತ್ತು. ಈ ಕೆಲಸದ ಅವಧಿಯನ್ನು ಸಂಜೆ 4.00 ಗಂಟೆಯ ತನಕ ವಿಸ್ತರಿಸಲಾಗಿದೆ. ಕೆಲಸವನ್ನು ಮೊದಲು ಹೆಚ್ಚು ಮಾಡಿ ನಂತರ ಗೌರವಧನವನ್ನು ಹೆಚ್ಚಳ ಮಾಡಿರುವುದನ್ನು ಸಂಗಾತಿಗಳು ಗುರ್ತಿಸಬೇಕಾಗಿದೆ.



ಅಂಗನವಾಡಿ ನೌಕರರ ನಿರಂತರ ಹೋರಾಟಗಳಿಂದಾಗಿ ಸರ್ಕಾರ ಇವರ ಬೇಡಿಕೆಯನ್ನು ಈಡೇರಿಸಲೇ ಬೇಕಾದ ಅನಿವಾರ್ಯತೆ ಬಂದಿದೆ. ಆದ್ದರಿಂದಲೇ ನಿವೃತ್ತಿ ವೇತನವನ್ನು ಘೋಷಣೆ ಮಾಡಲಾಗಿದೆ. ಆದರೆ ಈ ನಿವೃತ್ತಿ ವೇತನ ಷೇರು ಮಾರುಕಟ್ಟೆ ಆಧಾರಿತ. ಇಂತಹ ಷೇರು ಮಾರುಕಟ್ಟೆ ಆಧಾರಿತ ನಿವೃತ್ತಿ ವೇತನದ ಹಣಕ್ಕೆ ಯಾವುದೇ ಗ್ಯಾರಂಟಿಯಿಲ್ಲ, ಬಡ್ಡಿಗೆ ಗ್ಯಾರಂಟಿಯಿಲ್ಲ, ಈ ಹಣವನ್ನು ಹೂಡಿದ ಕಂಪನಿ ಮುಚ್ಚಿಕೊಂಡು ಹೋದರೆ ಅದನ್ನು ಕೇಳಲು ಯಾರಿಗೂ ಅಧಿಕಾರವಿಲ್ಲ, ಐಸಿಡಿಎಸ್ ಯೋಜನೆಯ ಬೆನ್ನೆಲುಬಾಗಿ ಕೆಲಸ ಮಾಡಿದ 55 ವರ್ಷಮೇಲ್ಪಟ್ಟ ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ಕೇವಲ 30 ರಿಂದ 50 ಸಾವಿರ ಮಾತ್ರ ಪರಿಹಾರವನ್ನು ಘೋಷಿಸಲಾಗಿದೆ. ತಿಂಗಳ ಮಾಸಿಕ ವೇತನ... ಇಂತಹ ನಿವೃತ್ತಿ ಯೋಜನೆಯನ್ನು ಒಪ್ಪುವುದಾದರೂ ಹೇಗೆ?

ಇದನ್ನು ಮತ್ತು ಇಲಾಖೆಯಲ್ಲಿ ಐಸಿ... ಯೋಜನೆಯನ್ನು ಜಾರಿ ಮಾಡುವಾಗ ಆಗುತ್ತಿರುವ ಲೋಪದೋಷಗಳನ್ನು ಸಂಘಟನೆಯಿಂದ ಪತ್ತೆ ಮಾಡಲಾಗುತ್ತಿದೆ. ಇದನ್ನು ಸಹಿಸದ ಇಲಾಖೆ ಈಗ "ಅಂಗನವಾಡಿ ನೌಕರರು ಮುಷ್ಕರ ಮಾಡಬಾರದು, ಮಾಡಿದರೆ ಕೆಲಸದಿಂದ ವಜಾ" ಎಂದು ಬೆದರಿಸುವ ಸುತ್ತೋಲೆಯನ್ನು ತಂದಿದ್ದಾರೆ. ಇದನ್ನು ತೀವ್ರವಾಗಿ ಖಂಡಿಸಬೇಕಾಗುತ್ತದೆ. ಇದೇ ಸಮಯದಲ್ಲಿಯೇ ಸರ್ಕಾರಕ್ಕೆ ಹೇಳಬೇಕಾದ್ದು

"ಮುಷ್ಕರ ಮಾಡುವುದು ಮನುಷ್ಯನ ಮೂಲಭೂತ ಹಕ್ಕು, ರಾಜ್ಯದಲ್ಲಿರುವುದು ಪ್ರಜಾಪ್ರಭುತ್ವವೇ ಹೊರತು ಪಾಳೆಗಾರ ರಾಜರ ಆಳ್ವಿಕೆಯಲ್ಲ" ಎಂಬುದನ್ನು ಎದೆಯುಬ್ಬಿಸಿ ಹೇಳ ಬೇಕಾಗುತ್ತದೆ.

ಇದಕ್ಕೆ ಸಂಬಂಧಿಸಿ ಈಗಾಗಲೇ ಸರ್ಕಾರಕ್ಕೆ ಪತ್ರವನ್ನು ಸಂಘಟನೆಯಿಂದ ಬರೆಯಲಾಗಿದೆ.

ಒಟ್ಟಾರೆ ಅಂಗನವಾಡಿ ನೌಕರರ ನಿರಂತರ ಹೋರಾಟದ ಫಲದಿಂದ . ಇಂದು ಕಾರ್ಯಕರ್ತೆಯರಿಗೆ ರೂ 2500 .ಗಳಿಂದ 4500 ರೂ.ಕ್ಕೆ, ಸಹಾಯಕಿಯರಿಗೆ 1250 ರಿಂದ 2250 ರೂ.ಕ್ಕೆ ಗೌರವಧನ ಹೆಚ್ಚಾಗಿದೆ. ಇಂತಹ ಚಳುವಳಿಗಳಲ್ಲಿ ಭಾಗವಹಿಸಿದ ಆತ್ಮೀಯ ಸಹೋದರಿಯರಿಗೆ ಕ್ರಾಂತಿಕಾರಿ ಅಭಿನಂದನೆಗಳು.... ಹೋರಾಟವನ್ನು ಮುಂದುವರಿಸೋಣ, ಹೊಸ ಪಿಂಚಣಿ. ವಿರುದ್ಧ ಮಾರ್ಚ್ ತಿಂಗಳಲ್ಲಿ ಬೃಹತ್ ಹೋರಾಟಕ್ಕೆ ಮುನ್ನಡೆಯೋಣ. ○

ಎಡಪಕ್ಷಗಳ ಯಶಸ್ಸು ಅತ್ಯಗತ್ಯ

ಪುಟ 7 ರಿಂದ

ನಡೆಸುತ್ತಿವೆ; ಈಗಿರುವ ವ್ಯವಸ್ಥೆಯೊಳಗೂ ವಿವಿಧ ಜನಪರ ಕ್ರಮಗಳನ್ನು ಜಾರಿಗೊಳಿಸಿ ಹೆಚ್ಚಿನ ಪರಿಹಾರ ಕೊಡಲು ಸಾಧ್ಯ ಎಂದು ತೋರಿಸಿ ಕೊಟ್ಟಿವೆ ಮತ್ತು ಆಮೂಲಾಗ್ರ ಆಳುವ ವರ್ಗಗಳ ಶೋಷಣಾತ್ಮಕ ಸ್ವರೂಪವನ್ನು ಬಯಲಿಗೆಳೆದಿವೆ. ಈ ಎಲ್ಲ ಅಂಶಗಳಿಂದಾಗಿ ಭಾರತೀಯ ಆಳುವ ವರ್ಗಗಳು ತಮ್ಮ ನವ-ಉದಾರವಾದಿ ಆರ್ಥಿಕ ದಿಕ್ಪಥದ ಮೂಲಕ ನಡೆಸುತ್ತಿರುವ ಲಂಗುಲಗಾಮಿಲ್ಲದ ಶೋಷಣೆಗೆ ಪ್ರತಿರೋಧವನ್ನು ದುರ್ಬಲಗೊಳಿಸಲು, ಸಿಪಿಐ(ಎಂ) ವಿರುದ್ಧ ಅದರ ಕೋಟೆಗಳಲ್ಲಿ ಅವ್ಯಾಹತವಾಗಿ ದಾಳಿಯನ್ನು ನಡೆಸುತ್ತಿವೆ.

ಎಡಶಕ್ತಿಗಳು ಪ್ರಜಾಪ್ರಭುತ್ವವನ್ನು ಬಲಪಡಿಸುವುದಕ್ಕೆ ಮತ್ತು ಪಶ್ಚಿಮ ಬಂಗಾಲದಲ್ಲಿ ಶಾಂತಿಯ ಒಂದು ವಾತವರಣದಲ್ಲಿ ಅಭಿವೃದ್ಧಿ ನಡೆಸುವುದಕ್ಕೆ ಬದ್ಧವಾಗಿವೆ. ಈ ಗುರಿಗಳನ್ನೇ ತೃಣಮೂಲ-'ಮಾವೋವಾದಿ' ಕೂಟ ಹೇಗಾದರೂ ಅಧಿಕಾರವನ್ನು ವಶಪಡಿಸಿಕೊಳ್ಳುವ ಆಕಾಂಕ್ಷೆಯಲ್ಲಿ ಅಡ್ಡಗಟ್ಟಲು ಮಾಡುತ್ತಿದೆ. ಸಿಪಿಐ(ಎಂ) ನೇತೃತ್ವದ

ಎಡರಂಗ ಪಶ್ಚಿಮ ಬಂಗಾಲದ ಜನತೆ ಸಾಧಿಸಿದ ಮುನ್ನಡೆಯನ್ನು ಕಾಪಾಡಿಕೊಳ್ಳಲು ಮತ್ತು ಅರಾಜಕ ಶಕ್ತಿಗಳ ಪ್ರತಿಗಾಮಿ ಕೂಟವನ್ನು ರಾಜಕೀಯವಾಗಿ ಏಕಾಂಗಿಯಾಗಿಸಲು ಹಾಗೂ ಸೋಲಿಸಲು ಬದ್ಧವಾಗಿದೆ. 1977ರಲ್ಲಿ ಎಡರಂಗ ಜಯಶಾಲಿ ಯಾದದ್ದು ಮತ್ತು ಸತತವಾಗಿ ಜನರ ಸೇವೆ ಮಾಡಿಕೊಂಡು ಬಂದದ್ದು ಹಾಗೂ ಶಾಂತಿಯನ್ನು ಕಾಪಾಡಿಕೊಳ್ಳುತ್ತಲೇ ಪ್ರಜಾಪ್ರಭುತ್ವವನ್ನು ಆಳಗೊಳಿಸಿದ್ದು, 1970ರ ದಶಕದಲ್ಲಿ 1,400ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರು ಹುತಾತ್ಮರಾದ, 22,000ಕ್ಕೂ ಹೆಚ್ಚು ಪಕ್ಷ ಕುಟುಂಬಗಳನ್ನು ಬೇರೆಡೆಗೆ ಕಳಿಸಬೇಕಾಗಿ ಬಂದ ಹಿನ್ನೆಲೆಯಲ್ಲಿ ಇಂತಹ ಶಕ್ತಿಗಳ ವಿರುದ್ಧವೇ ನಡೆಸಿದ ಒಂದು ದೀರ್ಘ ಹೋರಾಟದ ಮೂಲಕ.

ಆದ್ದರಿಂದ ನಮ್ಮ ಜನಗಳಿಗೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ನಮ್ಮ ಹೋರಾಟದಲ್ಲಿ ಪಶ್ಚಿಮ ಬಂಗಾಲದ ಎಡರಂಗ ಸರಕಾರದ ರಕ್ಷಣೆ ಒಂದು ಬಹಳ ಮಹತ್ವದ ಪೂರ್ವ-ಶರತ್ತು.

ಹೈದ್ರಾಬಾದ್ ಕರ್ನಾಟಕ ಸ್ಥಾನಮಾನ

ಪುಟ 3 ರಿಂದ

ಸಕಾರಣವಾದ ಹಕ್ಕು. ಸಂವಿಧಾನ ಕೊಡಮಾಡಿರುವ ಹಕ್ಕನ್ನು ಕೇಂದ್ರ ಸರ್ಕಾರ ಕೊಡಲೇಬೇಕು. ಜನರ ಭಾವನೆಗಳಿಗೆ ಸ್ಪಂದಿಸಬೇಕು. ಇಲ್ಲವಾದಲ್ಲಿ ಅತೃಪ್ತಿ ಇನ್ನಷ್ಟು ಹೆಚ್ಚಿ ಛಿದ್ರಕಾರಿ ಶಕ್ತಿಗಳು ಬೆಳೆಯಲು ಕಾರಣವಾಗುವುದು.

ಆದರೆ ಅಂತಹ ಯಾವುದೇ ಮನಸ್ಸಿಲ್ಲದ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ 371ನೇ ವಿಧಿಯನ್ವಯಿಸುವುದನ್ನು ವಿರೋಧಿಸುವುದು ಎಲ್ಲಾ ಪ್ರದೇಶಗಳೂ ಸಮಾನ ಅಭಿವೃದ್ಧಿಯಿಂದ ಬೆಳೆಯಬೇಕು ಎಂಬ ಉದ್ದೇಶಕ್ಕೆ ವ್ಯತಿರಿಕ್ತವಾಗಿದೆ ಮತ್ತು ಆಡಳಿತ, ಯೋಜನೆ, ಆರ್ಥಿಕತೆಯ ವಿಕೇಂದ್ರೀಕರಣಕ್ಕೆ ವಿರುದ್ಧವಾಗಿದೆ. ಹೊಸ ಆರ್ಥಿಕ ನೀತಿಗನುಗುಣವಾಗಿ ಕೇಂದ್ರೀಕರಣದ ನೀತಿಗಳನ್ನೇ ಸಮರ್ಥಿಸಿದೆ. ಬಿಜೆಪಿಯೂ ಇದಕ್ಕೆ ಹೊರತಲ್ಲ.

ಕೇಂದ್ರದಲ್ಲಿ ಅಧಿಕಾರದಲ್ಲಿರುವಾಗ ಏನೊಂದೂ ಮಾಡದ, ರಾಜ್ಯದಲ್ಲಿ ನಿಧಿ ಕಬಳಿಕೆಯ ಯೋಜನೆಯೇ ಪ್ರಧಾನವಾಗಿರುವ ನೀತಿ ಅನುಸರಿಸುತ್ತಿರುವ ಬಿಜೆಪಿಯೂ ಅವೇ ನೀತಿಗಳಿಂದ ಹೊರತಲ್ಲ. ಈಗಲೂ 371ನೇ ವಿಧಿಯ ಪ್ರಶ್ನೆಯನ್ನು ಸಂಸತ್ತಿನಲ್ಲಿ ಎತ್ತಿರುವುದೂ, ಮುಂಬರಬಹುದಾದ ಮಧ್ಯಂತರ ಚುನಾವಣಾ ರಾಜಕಾರಣದ ಲಾಭದ ದೃಷ್ಟಿಯಲ್ಲೇ. ಮತ್ತು ಹಗರಣಗಳಿಂದ ತತ್ತರಿಸುತ್ತಿರುವ ಬಿಜೆಪಿ ಜನರ ಗಮನ ಬೇರೆಡೆಗೆ ತಿರುಗಿಸಲೆಂದೇ.

ಇದೇ ಹೊತ್ತಿನಲ್ಲಿ 371 ನೇ ವಿಧಿಗಾಗಿನ ಆಗ್ರಹ ಹಾಗೂ ಅದರ ಫಲವೂ ಅತ್ಯಂತ ಮಿತಿಗೊಳಪಟ್ಟಿದೆ. ಮೂಲಭೂತ ಸಮಸ್ಯೆಗಳ ಇತ್ಯರ್ಥಕ್ಕೆ ಇದೇ ಸಿದ್ಧೌಷಧವಲ್ಲ ಎಂಬುದನ್ನು ಜನತೆ ಗಮನಿಸಬೇಕು. ಈ ಅಸಮಾನತೆಯು ಭೂಮಾಲಿಕ ಬಂಡವಾಳಶಾಹಿ ವರ್ಗ ನೀತಿಗಳು ಅನುಸರಿಸುತ್ತಿರುವುದೇ ಕಾರಣ ಎಂಬುದನ್ನೂ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ, ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಸ್ಥೆಗಳಂತಹವುಗಳಿಂದ ನಿರ್ದೇಶಿತವಾದವು ಎಂಬುದನ್ನು ಅರ್ಥ ಮಾಡಿಕೊಂಡು ಇವುಗಳ ಎದುರು ವಿಶಾಲ ನೆಲೆಯಲ್ಲಿ ಹೋರಾಟಗಳನ್ನು ನಡೆಸಬೇಕು. ನೀತಿ, ನಿಲುವುಗಳಲ್ಲಿನ ಬದಲಾವಣೆಗಳಿಂದಲೇ ನಿಜವಾದ ಪ್ರಗತಿ ಸಾಧಿಸಲು ಸಾಧ್ಯ. ಇಲ್ಲವಾದಲ್ಲಿ ಆಳುವ ವರ್ಗಗಳು ಸೃಷ್ಟಿಸುವ 'ಸ್ಥಾನಮಾನ'ದ ಸುತ್ತಲಿನ ಹಾದಿ ತಪ್ಪಿಸುವ ಉದ್ರೇಕದ ವಾದಗಳಿಗೆ ಅವರ ನಿರೀಕ್ಷೆಯಂತೆಯೇ ಬಲಿ ಬೀಳಬೇಕಾದೀತು.

ಕೃಷಿ ಬಜೆಟ್ ಎಂಬ...

ಪುಟ 5 ರಿಂದ

ನಿಗದಿಪಡಿಸಿಕೊಂಡಿರುವ ಚೌಕಟ್ಟು ನೋಡಿದರೆ ಸ್ಪಷ್ಟವಾಗಿ ಇದೊಂದು 'ತತ್‌ಕ್ಷಣದ ಗಿಮಿಕ್' ಎಂಬುದು ಗೊತ್ತಾಗಿ ಹೋಗುತ್ತದೆ. ಕೃಷಿರಂಗದ ವಾಸ್ತವತೆಯನ್ನು ತಾವು ನೋಡದೇ ಕಣ್ಣು ಮುಚ್ಚಿಕೊಂಡು ಜನರನ್ನು ಭ್ರಮೆಗೊಳಪಡಿಸಿ ಮೈ ಮರೆಸುವ ತಂತ್ರ ಇದು.

ರೈತರ ಭೂಮಿ ಕಿತ್ತು ಕೊಳ್ಳುವ 'ಕಾರ್ಯ ಯೋಜನೆ'

ಬಂಡವಾಳಗಾರರಿಗೆ, ಭೂ ದಂಧೆಕೋರರಿಗೆ ರೈತರ ಭೂಮಿ ಕಿತ್ತು ಕೊಡಲು ತವಕಿಸುವ ರಾಜ್ಯ ಬಿಜೆಪಿ ಸರ್ಕಾರ ರೈತರ ಭೂ ಸ್ವಾಧೀನದ ಕೆಲಸ ಈಗ ತಡವಾಗುತ್ತಿದೆ ಎಂದು ಭೂ ಸ್ವಾಧೀನವನ್ನು ಸರಾಗವಾಗಿ ಮಾಡಿಕೊಳ್ಳಲು ಪೂರಕವಾಗಿ ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿ ತರುವುದಾಗಿ ಬಜೆಟ್‌ನಲ್ಲಿ ಘೋಷಿಸಿದೆ. ರಾಜ್ಯದ ಕಮ್ಯುನಿಸ್ಟ್ ಚಳುವಳಿಯ ಒತ್ತಡ, ಕರ್ನಾಟಕ ಪ್ರಾಂತ ರೈತ ಸಂಘದ ಹೋರಾಟ, ಶಾಂತವೇರಿ ಗೋಪಾಲ ಗೌಡರ ಆಂದೋಲನದ ಫಲವಾಗಿ ಕರ್ನಾಟಕ ರಾಜ್ಯದಲ್ಲಿ ದೇವರಾಜ ಅರಸರ ಆಡಳಿತದ ಕಾಲದಲ್ಲಿ ಪ್ರಗತಿಪರವಾದ ಭೂ ಸುಧಾರಣಾ ಕಾಯ್ದೆಯು ಮೂಡಿ ಬಂದಿತು.

ಈಗ ಇಂತಹ ಕಾಯ್ದೆಗೆ ತಿದ್ದುಪಡಿ ತರಲು ಕುತಂತ್ರಗಳು ನಡೆದಿವೆ. ಯಡಿಯೂರಪ್ಪ ಸರ್ಕಾರ ನೇಮಿಸಿರುವ ಡಾ। ಬಾಲಸುಬ್ರಮಣ್ಯಂ ಸಮಿತಿಯು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಈಗಾಗಲೇ ದೇವೇಗೌಡರ ಕಾಲದಲ್ಲಿ ಭೂಮಿ ಹೊಂದಿರುವುದಕ್ಕೆ ಇದ್ದ ಗರಿಷ್ಠ ಮಿತಿಯನ್ನು ಸಡಿಲಿಸಿ ಭೂ ಸುಧಾರಣ ಕಾಯ್ದೆಯನ್ನು ದುರ್ಬಲಗೊಳಿಸಲಾಗಿದೆ.

ಬಿಜೆಪಿ ಸರ್ಕಾರದ ಈ ಪ್ರಯತ್ನವು ಕೃಷಿಕರ ಪಾಲಿಗೆ ನಿಜಕ್ಕೂ ಮರಣ ಶಾಸನವೇ ಸರಿ.

ಕೃಷಿಗೆ ಜಾಗತಿಕ ಬಂಡವಾಳ ಆಹ್ವಾನದ ಅಪಾಯ

ಕೃಷಿ ರಂಗಕ್ಕೆ ವಿದೇಶಿ ಬಂಡವಾಳವನ್ನು, ಬಂಡವಾಳಗಾರರನ್ನು ಆಹ್ವಾನಿಸುತ್ತಿರುವ ಬಿಜೆಪಿ ಸರ್ಕಾರದ ಬಜೆಟ್ ಜೂನ್ 2011 ರ ಜೂನ್‌ನಲ್ಲಿ 'ಜಾಗತಿಕ ಕೃಷಿ ಬಂಡವಾಳ ಹೂಡಿಕೆ ಸಮಾವೇಶ'ವನ್ನು ಸಂಘಟಿಸುವುದಾಗಿ ಹೇಳಿದೆ. ಇದು ರೈತರ ಫಲವತ್ತಾದ ಭೂಮಿಯನ್ನು ಕಿತ್ತುಕೊಳ್ಳುವ ವ್ಯವಸ್ಥಿತವಾದ ಹುನ್ನಾರವಾಗಿದೆ. ಸುಮಾರು ಒಂದು ಲಕ್ಷ ಎಕರೆಯಷ್ಟು ಭೂಮಿಯನ್ನು ಈಗಾಗಲೇ ರೈತರಿಂದ ಕಿತ್ತುಕೊಳ್ಳಲಾಗಿದೆ. ಇನ್ನೂ ಸುಮಾರು 2.5 ಲಕ್ಷ ಎಕರೆ ಭೂಮಿಯನ್ನು ಸದ್ಯದಲ್ಲೇ ಸ್ವಾಧೀನ ಪಡಿಸಿಕೊಳ್ಳುವ ಯೋಜನೆ ಸರ್ಕಾರದ ಮುಂದಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಮಿತ್ತಲ್ ಕಂಪನಿಗೆ 2000 ಎಕರೆ ಭೂಮಿ ಸಾಕಾಗಿರುವ ಕಡೆ ಒಟ್ಟು 8,000 ಎಕರೆ ಜಮೀನು ನೀಡಲಾಗಿದೆ. ಕೃಷಿಗೆ ಜಾಗತಿಕ ಬಂಡವಾಳ ಆಹ್ವಾನಿಸುವ ಸರ್ಕಾರದ ಉದ್ದೇಶವೇನೆಂದು ಇಂತಹ ಪ್ರಕರಣಗಳಲ್ಲಿ ಬಟಾಬಯಲಾಗಿದೆ.

ಕೋಮುವಾದಿಗಳಿಗೆ ಭೂ ಸಂಪತ್ತಿನ ವರ್ಗಾವಣೆ

ಇಪ್ಪತ್ತು ಮೂವತ್ತು ವರ್ಷಗಳ ಕಾಲ ವ್ಯವಸಾಯ ಮಾಡಿರುವ ದಲಿತರು, ಬಡರೈತರಿಗೆ ಜಮೀನಿನ ಹಕ್ಕು ಕೊಡಲು ಸಿದ್ಧವಿಲ್ಲದ ಬಿಜೆಪಿ ಸರ್ಕಾರವು ಗೋಶಾಲೆ, ಸಾವಯವ ಕೃಷಿ, ಗಿಡಮೂಲಿಕೆಗಳ ಕೃಷಿ ಇತ್ಯಾದಿಗಳ ಹೆಸರಿನಲ್ಲಿ ದೊಡ್ಡ ಪ್ರಮಾಣದ ಭೂಮಿಯನ್ನು ಬಿಜೆಪಿ ಪರ ಒಲವಿನ ಜಾತಿವಾದಿ, ಕೋಮುವಾದಿ ಮಠಗಳಿಗೆ ಹಾಗೂ ಸಂಘ ಪರಿವಾರದ ಅಂಗ ಸಂಸ್ಥೆಗಳ ಮಡಿಲಿಗೆ ಹಾಕಲು ಸಂಚು ನಡೆಸಲಾಗಿರುವುದು ಬಜೆಟ್ ಅನ್ನು ಸರಿಯಾಗಿ ಅವಲೋಕಿಸಿದರೆ ತಿಳಿದು ಬರುತ್ತದೆ. ಗೋಶಾಲೆಯಂತಹ ಉದ್ದೇಶಕ್ಕೆ ಮಾರುಕಟ್ಟೆ ದರದ ಶೇ. 20 ರ ದರದಲ್ಲಿ ಅಂದರೆ ಶೇ. 80 ರಷ್ಟು ವಿನಾಯತಿ ದರದಲ್ಲಿ ಭೂಮಿ ನೀಡಲು ಯೋಜಿಸಿರುವುದು ಇದೇ ಅಜೆಂಡಾದ ಭಾಗವಾಗಿದೆ.

ಮಕ್ಕಳು, ಅಳಿಯ, ತಂಗಿ, ಬಂಧು ಬಾಂಧವರಿಗೆ ಡೀನೋಟಿಫಿಕೇಷನ್ ಮೂಲಕ ಲೆಕ್ಕವಿಲ್ಲದಂತೆ ಅಕ್ರಮವಾಗಿ ಭೂಮಿ ಹಂಚಿಕೆ ಮಾಡಿದ ಯಡಿಯೂರಪ್ಪ ತಮ್ಮ ಸರ್ಕಾರದ ಜುಟ್ಟು ಹಿಡಿದುಕೊಂಡು ನಿಯಂತ್ರಿಸುವ ಸಂಘ ಪರಿವಾರಕ್ಕೆ ಅದೇ ಬಗೆಯಲ್ಲಿ ಭೂಮಿ ಕಬಳಿಸಲು ಬಜೆಟ್ ಮೂಲಕ ಅವಕಾಶ ಮಾಡಿಕೊಟ್ಟಿರುವುದು ಸ್ಪಷ್ಟವಾಗಿದೆ.

ಕೃಷಿಯನ್ನು, ಕೃಷಿಕರನ್ನು ನಾಶ ಮಾಡುವ ಆಘಾತಕಾರಿ ಜಾಗತೀಕರಣದ 'ಡಿಸೈನ್'

ಬಿಜೆಪಿ ಸರ್ಕಾರದ ಕೃಷಿ ಬಜೆಟ್‌ನ್ನು ಕೃಷಿ ರಂಗದಲ್ಲಿ ಹಾಗೂ ಆರ್ಥಿಕ ರಂಗದಲ್ಲಿ ತರಲಾಗುತ್ತಿರುವ ಒಟ್ಟು ಬದಲಾವಣೆಗಳ ಹಿನ್ನೆಲೆಯಲ್ಲಿ ಹಾಗೂ ಜಾಗತೀಕರಣ ನೀತಿಗಳ ಹಿನ್ನೆಲೆಯಲ್ಲಿ ಸಮಗ್ರವಾಗಿ ನೋಡಿದಾಗ ಮಾತ್ರವೇ ಸರಿಯಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ.

ಭೂ ಸುಧಾರಣಾ ಕಾಯ್ದೆಗೆ ತರಲು ಉದ್ದೇಶಿಸಿರುವ ತಿದ್ದುಪಡಿ, ಈಗಾಗಲೇ ಎ.ಪಿ.ಎಂ.ಸಿ. ಕಾಯ್ದೆಗೆ ತರಲಾಗಿರುವ ತಿದ್ದುಪಡಿಗಳು, ಕಾಂಟ್ರಾಕ್ಟ್ ಕೃಷಿಗೆ ನೀಡಲಾಗುತ್ತಿರುವ ಆದ್ಯತೆ, ಜಾಗತಿಕ ಕೃಷಿ ಬಂಡವಾಳ ಹೂಡಿಕೆ ಸಮಾವೇಶದ ಯೋಜನೆ ಇವೆಲ್ಲವೂ ಜಾಗತೀಕರಣ ನೀತಿಗಳ ಭಾಗವಾಗಿದ್ದು ಒಟ್ಟಾರೆ ಶೇ. 75ಕ್ಕಿಂತ ಹೆಚ್ಚಿರುವ ಸಣ್ಣ ರೈತರ ಭೂಮಿಯನ್ನು ಕಿತ್ತುಕೊಂಡು ಅವರನ್ನು ಕೃಷಿ ಕ್ಷೇತ್ರದ ವ್ಯಾಪ್ತಿಯಿಂದ ಹೊರದಬ್ಬಿ ಭೂಮಿಯ ಕೇಂದ್ರೀಕರಣ ಸಾಧಿಸುವ ಹಾಗೂ ಕೃಷಿ ಜಮೀನನ್ನು, ಕೃಷಿ ಮಾರುಕಟ್ಟೆಯನ್ನು, ಖಾಸಗಿ, ಬಹುರಾಷ್ಟ್ರೀಯ ಕಂಪನಿಗಳ ಕಬ್ಜಾಕ್ಕೆ ಒಪ್ಪಿಸುವ ದುಷ್ಟ ಗುರಿಗೆ ಪೂರಕವಾಗಿವೆ.

ಕೃಷಿಕರಲ್ಲದವರೂ ಕೂಡ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಖರೀದಿಸಲು ಅವಕಾಶ ನೀಡುವುದು ಭೂ ಸುಧಾರಣಾ ಕಾಯ್ದೆ ತಿದ್ದುಪಡಿಯ ಉದ್ದೇಶವಾಗಿದೆ. ಕೃಷಿ ಮಾರುಕಟ್ಟೆಯಲ್ಲಿ ಖಾಸಗೀ ಕಂಪನಿಗಳಿಗೆ ಅವಕಾಶ ಮಾಡಿಕೊಟ್ಟರೆ ಸ್ಪರ್ಧೆಯ ಮೂಲಕ ರೈತರಿಗೆ ಪ್ರಯೋಜನವಾಗಲಿದೆ ಎಂದು ವಾದಿಸಿ ಎ.ಪಿ.ಎಂ.ಸಿ. ಕಾಯ್ದೆಗೆ ತಿದ್ದುಪಡಿ ತಂದು ಕೃಷಿ ಮಾರುಕಟ್ಟೆಯಲ್ಲಿ ಖಾಸಗಿ ಕಂಪನಿಗಳು ಈಗಾಗಲೇ ತಳವೂರಿ ರೈತರ ಜೀವದೊಂದಿಗೆ ಚೆಲ್ಲಾಟವಾಡುತ್ತಿವೆ. ಕೃಷಿ ಮಾರುಕಟ್ಟೆ ಮಾತ್ರವಲ್ಲ, ಕೃಷಿ ಉತ್ಪಾದನೆಯಲ್ಲಿ ಕೂಡ ಖಾಸಗಿ ಪಾತ್ರ ತರಬೇಕೆಂಬುದು ಜಾಗತೀಕರಣವಾದಿಗಳ ಗುರಿಯಾಗಿದೆ. ಸಣ್ಣ ಹಿಡುವಳಿದಾರರು ಹೆಚ್ಚು ಬಂಡವಾಳ ಹೂಡಿಕೆ ಮಾಡಿ ಕೃಷಿಯನ್ನು ಮಾಡುವುದು ಸಾಧ್ಯವಿಲ್ಲ.., ಸಣ್ಣ ಹಿಡುವಳಿದಾರರಿಂದ ನಿರೀಕ್ಷಿತ, ಉತ್ತಮ ಗುಣಮಟ್ಟದ ಉತ್ಪನ್ನಗಳ ಕೃಷಿ ಸಾಧ್ಯವಿಲ್ಲ ಎಂದು ವಾದಿಸಿ, ಒತ್ತಡ ತಂತ್ರಗಳ ಮೂಲಕ ಸಣ್ಣ ಹಿಡುವಳಿದಾರ ರೈತರನ್ನು ನಿರ್ಮೂಲನೆ ಮಾಡುವ ಆಳವಾದ ಸಂಚು ಇದರಲ್ಲಿದೆ.

ಲೇವಾದೇವಿದಾರರ ಬಾಯಿಗೆ ಆವರ್ತ ನಿಧಿ ಮತ್ತು ಕೃಷಿ ಸಾಲದ ಬಡ್ಡಿ ಕಡಿತದ ಲಾಭ

ಕೃಷಿ ಮಾರುಕಟ್ಟೆಯಲ್ಲಿ ಸರ್ಕಾರದ ಮಧ್ಯ ಪ್ರವೇಶಕ್ಕೆ ಅನುಕೂಲಕರವಾಗಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿರುವುದು ಹಾಗೂ ಕೃಷಿಗೆ ಶೇ. 1 ರ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸುವ ನೀತಿಗಳು ಸ್ವಾಗತಾರ್ಹವಾಗಿವೆ. ಆದರೆ ಇದುವರೆಗಿನ ಅನುಭವಗಳ ಆಧಾರದಲ್ಲಿ ಹೇಳುವುದಾದರೆ ಅಧಿಕಾರ ಸೂತ್ರ ಹಿಡಿದವರ ಭ್ರಷ್ಟತೆ, ಸರ್ಕಾರದ ಇಚ್ಛಾ ಶಕ್ತಿಯ ಕೊರತೆ, ಶಾಮೀಲುಕೋರತನದಿಂದಾಗಿ ಇಂತಹ ಕ್ರಮದಿಂದ ಕೃಷಿ ಮಾರುಕಟ್ಟೆ ದಳ್ಳಾಳಿಗಳು ಹಾಗೂ ಮೀಟರ್ ಬಡ್ಡಿ, ಚಕ್ರ ಬಡ್ಡಿ ದಂಧೆ ನಡೆಸುವ ಲೇವಾದೇವಿಗಾರರಿಗೇ ಅತಿ ಹೆಚ್ಚಿನ ಪ್ರಯೋಜನವಾಗಿದೆ.

ಕೃಷಿ ಉತ್ಪನ್ನಗಳ ಬೆಲೆ ಕುಸಿದು ರೈತರು ಕಂಗಾಲಾಗಿರುವ ಸನ್ನಿವೇಶಗಳಲ್ಲಿ ಸರ್ಕಾರ ತುರ್ತಾಗಿ ಮಧ್ಯ ಪ್ರವೇಶಿಸಿ ಆವರ್ತ ನಿಧಿಯ ಬಜೆಟನ್ನು ಬಳಸಿ ಮಾರುಕಟ್ಟೆಯಲ್ಲಿ ಸೂಕ್ತ ಬೆಂಬಲ ಬೆಲೆ ನೀಡಿದರೆ ಅಪಾರ ಕಷ್ಟ ನಷ್ಟಗಳನ್ನು ಅನುಭವಿಸಿ ಬೆಳೆ ಬೆಳೆದ ರೈತರಿಗೆ ಒಂದಷ್ಟು ನೆಮ್ಮದಿ ನೀಡಿದಂತೆ ಆಗುತ್ತದೆ. ಆದರೆ ಈ ವಿಷಯದಲ್ಲಿ ಈಗ ಆಗುತ್ತಿರುವುದೇ ಬೇರೆ. 500 ಕೋಟಿ ರೂಪಾಯಿಗಳನ್ನು ಆವರ್ತ ನಿಧಿಗೆಂದು ನೀಡಿರುವ ಪರಿಸ್ಥಿತಿಯಲ್ಲಿಯೂ ಮೊನ್ನೆ ಮೊನ್ನೆ ಗುಲ್ಬರ್ಗಾದ ಭಾಗದಲ್ಲಿ ತೊಗರಿಯ ಬೆಲೆ ಕುಸಿದು ರೈತರು ವಿಷ ಕುಡಿಯುವ ಪರಿಸ್ಥಿತಿ ಬಂದಿತು. ಸರ್ಕಾರ ತತ್‌ಕ್ಷಣ ಮಾರುಕಟ್ಟೆ ಪ್ರವೇಶಿಸಲಿಲ್ಲ. ಸೂಕ್ತ ಬೆಂಬಲ ಬೆಲೆ ಘೋಷಿಸಲಿಲ್ಲ. ತಾಳಿಕೊಳ್ಳಲು ಶಕ್ತಿ ಇಲ್ಲದ ಶೇ. 80 ರಷ್ಟು ರೈತರು ಸಿಕ್ಕಷ್ಟು ಬೆಲೆಗೆ ತೊಗರಿ ಮಾರಿಕೊಂಡು ನಷ್ಟ ಅನುಭವಿಸಿದರು. ಆ ನಂತರ ಸರ್ಕಾರ ಬೆಂಬಲ ಬೆಲೆ ಘೋಷಿಸಿ ಖರೀದಿ ಆರಂಭಿಸಿತು. ಇದರಿಂದ ಮಾರುಕಟ್ಟೆಯಲ್ಲಿ ಒಂದಷ್ಟು ಬೆಲೆ ಏರಿತು. ಆ ಹೊತ್ತಿಗಾಗಲೇ ರೈತರಿಂದ ಅಗ್ಗವಾಗಿ ಬೇಳೆ ಖರೀದಿಸಿದ್ದ ಮಧ್ಯವರ್ತಿ ದಳ್ಳಾಳಿಗಳು ಬೆಲೆ ಏರಿಕೆಯ ಲಾಭ ಪಡೆದರು. ಬಹುತೇಕ ಸಂದರ್ಭದಲ್ಲಿ ದಳ್ಳಾಳಿಗಳು, ಮಧ್ಯವರ್ತಿ

ವ್ಯಾಪಾರಿಗಳೇ ಕೃಷಿ ವ್ಯಾಪಾರದ ಲಾಭ ಕೊಳ್ಳೆ ಹೊಡೆಯಲು ಬಿಜೆಪಿ ಸರ್ಕಾರವೂ ಯಾವುದೇ ಎಗ್ಗಿಲ್ಲದೆ, ನಿರ್ಲಜ್ಜವಾಗಿ ಅವಕಾಶ ಮಾಡಿಕೊಟ್ಟಿದೆ. ಈ ನೀತಿ ಬದಲಾಗದೇ ಕೇವಲ ಆವರ್ತ ನಿಧಿ ಹೆಚ್ಚಳದಿಂದ ರೈತರಿಗೆ ಪ್ರಯೋಜನವಾಗಲಾರದು.

ಕಡಿಮೆ ಬಡ್ಡಿಯ ಸಾಲ. ಯಾರಿಗುಂಟು ಯಾರಿಗಿಲ್ಲ?

ಅದೇ ರೀತಿ ಕಡಿಮೆ ಬಡ್ಡಿಯ ಸಾಲದ ಪ್ರಶ್ನೆ. ಎಡಪಕ್ಷಗಳ ಒತ್ತಡದ ಫಲವಾಗಿಯೇ ಕೇಂದ್ರ ಸರ್ಕಾರ ಕೃಷಿ ಸಾಲದ ಮೇಲಿನ ಬಡ್ಡಿಯನ್ನು ಕಡಿತ ಮಾಡಿದ್ದು. ಅದರ ಪ್ರಯೋಜನವನ್ನು ಪಡೆದು ರಾಜ್ಯ ಸರ್ಕಾರವೂ ಒಂದಷ್ಟು ಬಜೆಟ್ ಒದಗಿಸಿ ಶೇ. 3 ರ ಬಡ್ಡಿ ದರದಲ್ಲಿ ಸಾಲನೀಡಲಾಗುತ್ತಿದೆ. ಕೇಂದ್ರ ಸರ್ಕಾರ ಮತ್ತೂ ಬಡ್ಡಿ ಕಡಿತ ಮಾಡುವ ನಿರೀಕ್ಷೆಯಲ್ಲಿ ಶೇ. 1 ರ ಬಡ್ಡಿಯ ಸಾಲವನ್ನು ನೀಡಲು ರಾಜ್ಯ ಸರ್ಕಾರ ಮುಂದಾಗಿದೆ. ಕೃಷಿ ಸಾಲದ ಬಡ್ಡಿ ಕಡಿತ ಮಾಡುವುದು ಮುಖ್ಯವಾದದ್ದೇ. ಆದರೆ ಈಗ ಅತ್ಯಂತ ತುರ್ತಾಗಿ ಆಗ ಬೇಕಾದ ಕೆಲಸವೆಂದರೆ ಕೃಷಿ ಸಾಲವು ಬಡ ರೈತರು, ಸಣ್ಣ ರೈತರು, ದಲಿತರು ಎಲ್ಲರಿಗೂ ಸುಲಭವಾಗಿ ದೊರೆಯುವಂತೆ ಸಾಲದ ಲಭ್ಯತೆಯನ್ನು ವ್ಯಾಪಕವಾಗಿ ವಿಸ್ತರಿಸುವುದಾಗಿದೆ. ಈ ಹಿನ್ನೆಲೆಯಲಿಇನ್ನೂ ಕೆಲವು ಪ್ರಮುಖ ವಿಚಾರಗಳನ್ನು ಇಲ್ಲಿ ಗಮನಿಸಬೇಕಾಗಿದೆ.

ಮೊದಲಿಗೆ ಶೇ. 1 ರ ಬಡ್ಡಿದರದ ಸಾಲ ಸೌಲಭ್ಯ ದೊರೆಯುವುದು ಸಹಕಾರಿ ಬ್ಯಾಂಕ್‌ಗಳಲ್ಲಿ ಸಾಲ ಪಡೆದವರಿಗೆ ಮಾತ್ರ. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಈ ದರದಲ್ಲಿ ಸಾಲ ಸಿಗುವುದಿಲ್ಲ. ಅದೂ ಕೂಡ ಹಿಂದಿನ ಸಾಲದ ಮರುಪಾವತಿ ಪಕ್ಕಾ ಇದ್ದರೆ ಮಾತ್ರ ಹೊಸ ಸಾಲ. ಸಹಕಾರಿ ವಲಯದ ಸಾಲ ಎಲ್ಲರಿಗೂ ದಕ್ಕುವುದಿಲ್ಲ. ಅಲ್ಲಿ ಯಾರೂ ಹೊಸದಾಗಿ ಶೇರುದಾರರಾಗುವುದು ಸಾಧ್ಯವಿಲ್ಲ. ರಾಜ್ಯದಲ್ಲಿ ಕಳೆದ ವರ್ಷದಲ್ಲಿ ಸು. 9 ಲಕ್ಷ ಜನರಿಗೆ ಒಟ್ಟು 3,920 ಕೋಟಿ ರೂಪಾಯಿಗಳ ಸಾಲ ಸಹಕಾರಿ ರಂಗದಲ್ಲಿ ಸಿಕ್ಕಿದೆ. ಈ ವರ್ಷದಲ್ಲಿ 12 ಲಕ್ಷ ಜನರಿಗೆ 4,200 ಕೋಟಿ ರೂಪಾಯಿಗಳ ಸಾಲ ಸಿಗಬಹುದೆಂದು ಅಂದಾಜಿಸಲಾಗಿದೆ.


ಕೇಂದ್ರ ಸರ್ಕಾರ ವಿಧಿಸುವ ಬಡ್ಡಿ ದರಕ್ಕಿಂತ ಕಡಿಮೆಗೆ ಅಂದರೆ ಶೇ. 3 ರ ಬಡ್ಡಿ ದರದಲ್ಲಿ ಸಾಲ ಕೊಡುವಾಗ ರಾಜ್ಯ ಸರ್ಕಾರವು ತುಂಬ ಬೇಕಾಗಿ ಬಂದ ಕೊರತೆ ಹಣದ ಪ್ರಮಾಣ 250 ಕೋಟಿ ಮಾತ್ರ. ಕೃಷಿರಂಗದ ಅಗತ್ಯಗಳು, ರಾಜ್ಯ ಸರ್ಕಾರದ ವ್ಯತ್ಯಾಸ ತುಂಬಿಕೊಡುವ ಸಾಮರ್ಥ್ಯ ಇದನ್ನು ಪರಿಗಣಿಸಿದಾಗ ಇದೇನು ಅಂತಹ ದೊಡ್ಡ ಮೊತ್ತವಲ್ಲ. ಸಾಂಸ್ಥಿಕ ಸಾಲ ಸೌಲಭ್ಯ ಅಂದರೆ ಬ್ಯಾಂಕ್ ಸಾಲ ಸಿಗದ ಶೇ. 60 ರಷ್ಟು ಪ್ರಮಾಣದ ಕೃಷಿಕರಿಗೆ ಸಾಲ ದೊರಕಿಸಿಕೊಡುವುದು ಅತ್ಯಂತ ಪ್ರಮುಖ ಆದ್ಯತೆ ಪ್ರಶ್ನೆಯಾಗಬೇಕಿದೆ.

ಈ ಬಾಬ್ತಿನಲ್ಲಿ ಬಹುತೇಕ ಯಾರಿಗೂ ಹೊಸ ಸಾಲ ಸಿಗುವುದಿಲ್ಲ. ಹಳೇ ಸಾಲವನ್ನೇ ನವೀಕರಿಸಿ ದಾಖಲೆಯಲ್ಲಿ ಹೊಸ ಸಾಲ ಕೊಟ್ಟಂತೆ ತೋರಿಸಲಾಗುತ್ತದೆ. ಸಾಮಾನ್ಯವಾಗಿ ಹಳ್ಳಿಗಳನ್ನು ನಿಯಂತ್ರಿಸುವ ದೊಡ್ಡಜನಗಳಿಗೆ ಮಾತ್ರವೇ ಈ ಸಾಲ ದಕ್ಕುವುದು. ಅಂಥವರು ಗ್ರಾಮೀಣ ಬಡವರಿಗೆ, ಕೂಲಿಕಾರರಿಗೆ ಅತ್ಯಂತ ದುಬಾರಿಯಾದ ಬಡ್ಡಿಗೆ ಅಂದರೆ 4, 5, 8, 10 ರೂಪಾಯಿಗಳ ತಿಂಗಳ ಬಡ್ಡಿಗೆ ಸಾಲ ನೀಡಿ ಅನ್ಯಾಯವೆಸಗುತ್ತಾರೆ.

2004 ರಲ್ಲಿ ದೇಶದಲ್ಲಿ ನೀಡಲಾಗಿದ್ದ ಕೃಷಿ ಸಾಲದ ಪ್ರಮಾಣ 85,000 ಕೋಟಿಗಳು. ಆ ನಂತರ ಕೇಂದ್ರ ಯುಪಿಎ ಸರ್ಕಾರವು ತನ್ನ ಉಳಿವಿಗಾಗಿ ಎಡಪಕ್ಷಗಳನ್ನು ಅವಲಂಬಿಸಿದ್ದ ಪರಿಸ್ಥಿತಿಯಲ್ಲಿ ಎಡಪಕ್ಷಗಳ ಒತ್ತಡ, ಹೋರಾಟಗಳಿಂದ ಕೃಷಿ ಸಾಲದ ಪ್ರಮಾಣವು 3.75 ಲಕ್ಷ ಕೋಟಿಗೆ, ಆ ನಂತರ 4.5 ಕೋಟಿಗೆ ಹೆಚ್ಚಾಯಿತು. ಸಾಲದ ಒಟ್ಟು ಮೊತ್ತ ಹೆಚ್ಚಾದರೂ ಸಾಲ ಪಡೆಯುವವರ ಸಂಖ್ಯೆ ಹೆಚ್ಚಾಗುತ್ತಿಲ್ಲ. ಸಾಲ ಪಡೆಯುವವರೇ ಇನ್ನಷ್ಟು ದೊಡ್ಡ ಮೊತ್ತದ ಸಾಲ ಪಡೆದುಕೊಳ್ಳುತ್ತಿದ್ದಾರೆ. ಸಾಲದ ಪ್ರಮಾಣ 85 ಸಾವಿರ ಕೋಟಿ ಇದ್ದಾಗ ಒಟ್ಟು ಕೃಷಿಕರ ಶೇ. 32 ರಷ್ಟು ಜನರಿಗೆ ಮಾತ್ರವೇ ಸಾಲ ಸಿಕ್ಕತ್ತು. ಮೊತ್ತವು 4.5 ಲಕ್ಷ ಕೋಟಿಗೆ ಏರಿದಾಗಲೂ ಕೂಡ ಅಷ್ಟೆ ಅಂದರೆ ಅದೇ ಶೇ.32 ರಷ್ಟು ಕೃಷಿಕರಿಗೆ ಮಾತ್ರ ಸಾಲ ಸಿಗುತ್ತಿದೆ.

ರಾಜ್ಯದ ಕೃಷಿ ಯೋಜನಾ ಸಮಿತಿಗೆ ಅಧ್ಯಕ್ಷರಾಗಿ ರಾಜ್ಯದ ಮುಖ್ಯಮಂತ್ರಿಯಾಗಿ ಸ್ವತಃ ಯಡಿಯೂರಪ್ಪನವರೇ ಇದ್ದಾರೆ. ರಾಜ್ಯದ 44 ಲಕ್ಷ ರೈತ ಕುಟುಂಬಗಳು ಬ್ಯಾಂಕಿನ ಸಾಲ ಸಿಗದೇ ಖಾಸಗಿ ಲೇವಾದೇವಿಗಾರರ ಬಳಿ ಕೈ ಚಾಚ ಬೇಕಾದ ಪರಿಸ್ಥಿತಿ ಸುಧಾರಿಸಲು ಬ್ಯಾಂಕ್ ಶಾಖೆಯೊಂದು ವರ್ಷದಲ್ಲಿ ಕನಿಷ್ಟ 1000 ರೈತರಿಗೆ ಹೊಸದಾಗಿ ಸಾಲ ನೀಡುವಂತೆ ಗುರಿ ನಿಗದಿಪಡಿಸಿ, ಆಗ ಸಾಲ ಸಿಗದವರಿಗೆ ಸಾಲ ಸಿಗಲು ಸಾಧ್ಯ ಎಂದು ಈಗಾಗಲೇ ಹಲವಾರು ಬಾರಿ ಒತ್ತಾಯಿಸಲಾಗಿದೆ. ಆದರೆ ಆ ಕೆಲಸ ಆಗಿಲ್ಲ. ಈಗ ಶಾಖೆಗೆ 100 ಜನರಿಗೆ ಹೊಸ ಸಾಲ ನೀಡಬೇಕೆಂದು ಕೋಟಾ ನಿಗದಿ ಮಾಡಲಾಗಿದೆ. ಅದನ್ನು ಕೂಡ ಸರಿಯಾಗಿ ಜಾರಿ ಮಾಡುತ್ತಿಲ್ಲ. ಹಾಗೂ ಜಾರಿ ಮಾಡುವ ಬಗ್ಗೆ ಬ್ಯಾಂಕುಗಳ ಮೇಲೆ ಒತ್ತಡ ಕೂಡ ಇಲ್ಲ.

(ಕೃಷಿ ಕೂಲಿಕಾರರಿಗೆ ಶೂನ್ಯ ಬಜೆಟ್- ಓದಿ ಪುಟ 4 ರಲ್ಲಿ)



ಯುಪಿಎ ದರ್ಬಾರ್

ಬಂಡವಾಳಿಗರಿಗೆ ಹರ್ಷ ತಂದ ಮತ್ತೊಂದು ಯುಪಿಎ ಬಜೆಟ್

ಯುಪಿಎ-2 ಹಣಕಾಸು ಮಂತ್ರಿಗಳ ಮೂರನೇ ಬಜೆಟ್ ಬಂದಿದೆ. ಮೊದಲ ದಿನ ಮಾಧ್ಯಮಗಳು ಎಂದಿನಂತೆ ಬೋಪರಾಕುಗಳಿಂದ ತುಂಬಿದ್ದವು. ಶೇರು ಮಾರುಕಟ್ಟೆಯಲ್ಲಿಯೂ ಉಲ್ಲಾಸ. ಭಾರತದ ಕಾರ್ಪೊರೇಟ್ ವಲಯ ಸಂತುಷ್ಟಗೊಂಡಿದೆ. ಫಿಕಿ ಅಧ್ಯಕ್ಷ ಪ್ರಣಬ್ ಮುಖರ್ಜಿ ಭಾರತೀಯ ಆರ್ಥಿಕದ ಸಚಿನ್ ತೆಂಡುಲ್ಕರ್ ಎಂದು ಬಿರುದು ದಯಪಾಲಿಸಿದ್ದಾರೆ. ಅಮೆರಿಕಾ-ಭಾರತ ವ್ಯಾಪಾರ ಮಂಡಳಿ(ಯುಎಸ್ಐಬಿಸಿ) ಅಧ್ಯಕ್ಷ ಕೂಡ ಭಾರತದ ಈ ಬಜೆಟ್ ತಮ್ಮ ಹೊಗಳಿಕೆಗೆ ಅರ್ಹವಾಗಿದೆ ಎಂದು ಸರ್ಟಿಫಿಕೆಟ್ ದಯಪಾಲಿಸಿದ್ದಾರೆ. ಇಂತಹ ಸರ್ಟಿಫಿಕೇಟ್ ಕೊಡಲು 'ಈ ಬಜೆಟ್ ಪ್ರದರ್ಶಿಸಿರುವ ಆತ್ಮವಿಶ್ವಾಸವೇ ಸಾಕು' ಎಂದಿದ್ದಾರೆ ಅವರು. ಜಗತ್ತಿನ ಅತ್ಯಂತ ವೇಗದ ಬೆಳವಣಿಗೆಯ ಆರ್ಥಿಕಗಳಲ್ಲಿ ಒಂದಾದ ಭಾರತದ ಆರ್ಥಿಕದಲ್ಲಿ ಭಾಗವಹಿಸುವ 'ಅವಕಾಶ'ವನ್ನು ಈ ಬಜೆಟ್ ಕಲ್ಪಿಸಿ ಕೊಟ್ಟಿದ್ದಕ್ಕಾಗಿ ಅವರಿಗೆ ಸಂತೋಷವಾಗಿದೆಯಂತೆ!

ಆದಾಯ ತೆರಿಗೆ ಮಿತಿಯನ್ನು ಏರಿಸಿದ್ದಕ್ಕೆ ಮಧ್ಯಮ ವರ್ಗಗಳವರಿಗೂ ಸಂತೊಷವಾಗಿದೆ. ಆದರೆ ಪೆಟ್ರೋಲ್ ದರಗಳ ಏರಿಕೆ ಯಾವಾಗ ಬೇಕಾದರೂ ಪ್ರಕಟಗೊಳ್ಳಬಹುದು ಎಂಬ ಸುದ್ದಿ ಕಳವಳ ಉಂಟು ಮಾಡಿದೆ. ತೈಲ ಕಂಪನಿಗಳು ಬೆಲೆಯೇರಿಕೆಯ ಸನ್ನಿವೇಶದಲ್ಲಿ, ಮತ್ತು ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕಚ್ಚಾ ತೈಲದ ದರ ತೀವ್ರ ಏರಿಕೆಯ ಹಿನ್ನೆಲೆಯಲ್ಲಿ ಈ ಬಜೆಟ್ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸುಂಕಗಳನ್ನು ಇಳಿಸಿ ತಮ್ಮ ಹೊರೆಯನ್ನು ಇಳಿಸಬಹುದು, ಆಮೂಲಕ ಗ್ರಾಹಕರಿಗೆ ಸ್ವಲ್ಪ ಪರಿಹಾರ ಕೊಡಬಹುದು ಎಂದು ನಿರೀಕ್ಷಿಸಿದ್ದವಂತೆ. ಆ ನಿರೀಕ್ಷೆ ಈಡೇರಿಲ್ಲ. ಅದ್ದರಿಂದ ಪೆಟ್ರೋಲ್ ದರಗಳನ್ನು ಏರಿಸುವುದು ಅವುಗಳಿಗೆ 'ಅನಿವಾರ್ಯ'ವಾಗಿದೆಯಂತೆ.

ಈ ಬಜೆಟ್ ನೇರ ತೆರಿಗೆಗಳನ್ನು ಇಳಿಸಿ ಕಳಕೊಂಡ ರೂ.11,500 ಕೋಟಿಯನ್ನು ಪರೋಕ್ಷ ತೆರಿಗೆಗಳ ಹೆಚ್ಚಳದಿಂದ (ರೂ. 11,300ಕೋಟಿ) ಸರಿದೂಗಿಸಿಕೊಂಡಿದೆ. ಅಂದರೆ ಸಮಾಜದಲ್ಲಿ ಹೆಚ್ಚು



ಕೃಪೆ : ದಿ ಹಿಂದೂ

ಆದಾಯವುಳ್ಳವರಿಗೆ ರಿಯಾಯ್ತಿ ಕೊಟ್ಟು ಹೆಚ್ಚು ಬಡವರಿಂದ ಅದನ್ನು ವಸೂಲಿ ಮಾಡುವ ಯೋಚನೆ ಮಾಡಿದೆ. ಪರೋಕ್ಷ ತೆರಿಗೆಗಳನ್ನು ತೆರಬೇಕಾದವರು ಗ್ರಾಹಕರೇ ತಾನೇ? ಸಾಲದ್ದಕ್ಕೆ ಆಹಾರ, ಇಂಧನ, ರಸಗೊಬ್ಬರಗಳ ಮೇಲಿನ ಸಬ್ಸಿಡಿಗಳಲ್ಲಿ 20,000 ಕೋಟಿ ರೂ. ಕಡಿತ ಮಾಡಿದೆ.

ಎಡಪಕ್ಷಗಳಂತೂ ಇದು ಯುಪಿಎ-2 ಸರಕಾರ 'ಆಮ್ ಆದ್ಮಿ' ಅಜೆಂಡಾವನ್ನು ಕೈಬಿಟ್ಟು ನವ-ಉದಾರವಾದಿ ಅಜೆಂಡಾವನ್ನು ಅತ್ಯಂತ ತುರುಸಿನಿಂದ ಜಾರಿಗೆ ತರುವ ಧೋರಣೆಯನ್ನು ಪ್ರದರ್ಶಿಸಿರುವ ಬಜೆಟ್ ಎಂದಿವೆ. ಯುಪಿಎ ಅಧ್ಯಕ್ಷರೇ ಅಧ್ಯಕ್ಷರಾಗಿರುವ ರಾಷ್ಟ್ರೀಯ ಸಲಹಾ ಮಂಡಳಿ(ಎನ್ಎಸಿ) ಸದಸ್ಯರಿಗೆ ಕೂಡ ಈ ಬಜೆಟ್ ತೃಪ್ತಿ ತಂದಿಲ್ಲ. ಬಜೆಟ್ ಅಭಿವೃದ್ಧಿಯ ಹಣಕಾಸೇತರ ಆಯಾಮಗಳಿಂದಾಚೆಗೆ ಹೋಗಿಲ್ಲ, ಒಂದು ಸ್ವಸ್ಥ ಧೋರಣೆ, ಆಡಳಿತ ಮತ್ತು ಸಂಸ್ಥೆಗಳ ಮಹತ್ವವನ್ನು ಅದು ಗುರುತಿಸಿಲ್ಲ ಎಂದು ಮಂಡಳಿಯ ಒಬ್ಬ ಸದಸ್ಯ ಎನ್. ಸಿ. ಸಕ್ಸೇನ ಅಭಿಪ್ರಾಯ ಪಟ್ಟರೆ, ಆರೋಗ್ಯ ವಲಯದ ಬಗ್ಗೆ ಅದರ ಅಜ್ಞಾನ ಒಂದು ದೊಡ್ಡ ಕೊರತೆ ಎಂದಿದ್ದಾರೆ ಇನ್ನೊಬ್ಬ ಸದಸ್ಯ ಎ.ಕೆ. ಶಿವಕುಮಾರ್. ಆರೋಗ್ಯ ವಲಯಕ್ಕೆ ನೀಡಿದ ಹಣದಲ್ಲಿ ಅತ್ಯಲ್ಪ ಹೆಚ್ಚಳದಿಂದ ಭಾರತವನ್ನು ಯಾವಾಗಲೋ ಸಾಧಿಸಬೇಕಾಗಿದ್ದ ಸಮಗ್ರ ಗುಣಮಟ್ಟದ ಪ್ರಾಥಮಿಕ ಆರೋಗ್ಯ ಸೇವೆಯತ್ತ ಈಗಲಾದರೂ ಒಯ್ಯಲೂ ಸಾಧ್ಯವಾಗದು ಎಂದು ಅವರು ಹೇಳಿದ್ದಾರೆ.

★

ಹುಸಿ ಭರವಸೆಗಳ ಮತ್ತೊಂದು ಯುಪಿಎ ರೈಲು

ಸಾಮಾನ್ಯ ಬಜೆಟಿನ ಮೂರು ದಿನಗಳ ಮೊದಲು ಯುಪಿಎ ರೈಲು ಬಜೆಟು ಬಂತು. ಆಗಲೂ ಮಾಧ್ಯಮಗಳ, ಕಾರ್ಪೊರೇಟ್‌ಗಳ ಬೋಪರಾಕು. ಟಿಕೆಟ್ ದರ ಏರಿಕೆ ಇಲ್ಲ, ಸಾಗಾಣಿಕೆ ದರ ಏರಿಕೆ ಇಲ್ಲ. ಹಲವಾರು ಹೊಸ ರೈಲುಗಳು, ಹೊಸ ಪ್ರಾಜೆಕ್ಟುಗಳು. ಕಳೆದ ವರ್ಷ ಪ್ರಕಟಿಸಿದ ಇಂತಹ ಯೋಜನೆಗಳೇನಾದವು ಎಂಬ ಪ್ರಸ್ತಾಪವಿಲ್ಲ, ಜಿಡಿಪಿ ಬೆಳವಣಿಗೆ ಶೇ. 8 ಇದ್ದರೂ ಸಾಗಾಣಿಕೆ ಆದಾಯದಲ್ಲಿ ಹೆಚ್ಚಳವಿಲ್ಲ. ಏಕೆ ಎಂಬ ವಿವರಣೆಯಿಲ್ಲ. ಕಳೆದ ಒಂದು ವರ್ಷದಲ್ಲಿಯೆ ಅಪಘಾತಗಳಲ್ಲಿ 216 ಮಂದಿ ಪ್ರಾಣ ಕಳಕೊಂಡರೂ ರೈಲ್ವೆ ಸುರಕ್ಷಿತತೆ ಉತ್ತಮಗೊಂಡಿದೆಯಂತೆ!

ರೈಲು ಇಲಾಖೆಯ ಹಣಕಾಸು ಆರೋಗ್ಯ ಕೆಟ್ಟಿದೆಯೆಂಬುದು ರೈಲು ಮಂತ್ರಿಗಳ ಭಾಷಣದಲ್ಲೇ ಕಾಣುತ್ತಿತ್ತು. ಅದಕ್ಕೆ ಆರನೇ ವೇತನ ಆಯೋಗ ಕಾರಣ ಎಂಬುದು ಯುಪಿಎ ರೈಲು ಮಂತ್ರಿಗಳ ರೈಲು. ಈ ಅಂಕಿ-ಅಂಶಗಳನ್ನು ಗಮನಿಸಿ;

- ಯುಪಿಎ-1 ರೈಲು ಮಂತ್ರಿಗಳ (ಲಾಲು) ಕೊನೆಯ ಬಜೆಟ್ ತೋರಿಸಿದ್ದು 25,000ಕೋಟಿ ರೂ.ಗಳ ಮಿಗುತೆ. ಯುಪಿಎ-2 ರೈಲು ಮಂತ್ರಿಗಳ ಮೊದಲ ಬಜೆಟ್ 17,400 ಕೋಟಿ ರೂ. ಮಿಗುತೆ ತೋರಿಸಿತು. ಮುಂದಿನ ಬಜೆಟಿನಲ್ಲಿ ಇದು 1,328 ಕೋಟಿಗಿಳಿಯಿತು, ನಂತರ 400 ಕೋಟಿ ರೂ.ಗಳ ಖೋತಾ ತೋರಿಸಿತು. ರೈಲು ಇಲಾಖೆಗೆ ಪ್ರತ್ಯೇಕ ಬಜೆಟ್ ಇರುವುದು ಅದು ಮಿಗುತೆ ಆದಾಯದ ಮೂಲಕ ರಾಷ್ಟ್ರೀಯ ಆರ್ಥಿಕಕ್ಕೆ ಕೊಡುಗೆ ನೀಡಲಿ ಎಂದು. ಯುಪಿಎ-2 ನ ಕಳೆದೆರಡು ರೈಲು ಬಜೆಟುಗಳು ಕೇಂದ್ರದ ಸಾಮಾನ್ಯ ಬಜೆಟಿನಿಂದಲೇ ಸಬ್ಸಿಡಿ ಪಡೆಯಬೇಕಾಗಿ ಬಂದಿದೆ- ಕಳೆದ ವರ್ಷ 15,800ಕೋಟಿ ರೂ., ಈ ವರ್ಷ 20,000 ಕೋಟಿ ರೂ.
- ರೈಲು ಇಲಾಖೆಯ ದಕ್ಷತೆಯನ್ನು ಆಪರೇಟಿಂಗ್ ರೇಶ್ಯೊ(ಅಂದರೆ ನಿರ್ವಹಣೆಯ ಅನುಪಾತ)ದಿಂದ ಅಳೆಯಲಾಗುತ್ತದೆ. ಇದು 100ರೂ. ಆದಾಯ ತರಲು ಎಷ್ಟು ಖರ್ಚು ತಗಲಿದೆ ಎಂಬ ಅನುಪಾತ. ಲಾಲು ಕಾಲದಲ್ಲಿ ಇದು 75 ರೂ. ಇತ್ತು. ಈಗ ಇದು 92ರೂ. ಎಂದು ಬಜೆಟ್ ಹೇಳುತ್ತದೆ. ವಾಸ್ತವವಾಗಿ 100 ದಾಟಿರಬೇಕು, ಈ ವರ್ಷ ಕಾಂಟ್ರಾಕ್ಟುದಾರರಿಗೆ ಪಾವತಿ ಮಾಡಬೇಕಾದ ಬಿಲ್ಲುಗಳನ್ನು ಮುಂದಿನ ವರ್ಷಕ್ಕೆ ವರ್ಗಾಯಿಸಿ ಇದನ್ನು ಕೃತಕವಾಗಿ ಇಳಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಮಾಡಿದ ಲೆಕ್ಕಾಚಾರದ ಪ್ರಕಾರ ಇದು ಸುಮಾರು 115. ಅಂದರೆ 115ರೂ. ಖರ್ಚು ಮಾಡಿ 100ರೂ. ಆದಾಯ ತರುತ್ತಿದೆ ಮಮತಾ ರೈಲು ಇಲಾಖೆ! ರೈಲು ಇಲಾಖೆಯ 16 ವಲಯಗಳಲ್ಲಿ 10 ವಲಯಗಳಲ್ಲಿ ಇದು 100ನ್ನು ದಾಟಿದೆಯಂತೆ.
- ಕಳೆದ ವರ್ಷ ಮಮತಾ ತನ್ನ ರಾಜ್ಯಕ್ಕೆಂದು ಪ್ರಕಟಿಸಿದ ಎಂಟು ಯೋಜನೆಗಳು ಕೂಡ ಶಂಕುಸ್ಥಾಪನೆಯ ಹಂತವನ್ನು ದಾಟಿಲ್ಲ. ಏಕೆಂದರೆ ಇವು ಯಾವುದಕ್ಕೂ ಯೋಜನಾ ಆಯೋಗದ

ಪುಟ 15 ಕ್ಕೆ

ಲಿಬ್ಯಾ : ಯುಪಿಎ ಸರ್ಕಾರದ ಬಾಯಲ್ಲಿ ಒಬಾಮ ಪದಾವಳಿ !

ಅರಬ್ ಜಗತ್ತಿನ ಜನತಾ ಆಂದೋಲನಗಳ ಪ್ರಭಾವ ಟ್ಯುನೀಸಿಯ, ಇಜಿಪ್ಟಿನ ನಂತರ ಈಗ ಲಿಬ್ಯಾದ ಬೀದಿಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಇಜಿಪ್ಟಿನಲ್ಲಿ ತನ್ನ ಮಿತ್ರನಾಗಿದ್ದ ಸರ್ವಾಧಿಕಾರಿ ಕುರಿತು ಎಡಬಿಡಂಗಿ ನಿಲುವು ತಳೆದು, ಕೊನೆಗೆ ಗೆದ್ದೆತ್ತಿನ ಬಾಲ ಹಿಡಿದು ಅದರ ಮೇಲೆ ಸವಾರಿ ಮಾಡುವ ಪ್ರಯತ್ನ ಮಾಡಿದ್ದ ಅಮೆರಿಕನ್ ಆಳರಸರು ಲಿಬ್ಯಾದಲ್ಲಿ ಗಡಾಫಿ ಆಡಳಿತವನ್ನು ವಿರೋಧಿಸುವಲ್ಲಿ ಅಲ್ಲಿಯ ಜನರಿಗಿಂತಲೂ ಮುಂಚೂಣಿ ಯಲ್ಲಿರುವುದಾಗಿ ತೋರಿಸಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಅಲ್ಲಿ ಆಂದೋಲನ ನಡೆಸುತ್ತಿರುವವರಿಗೆ 'ಬೇಕಾದರೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತೇವೆ, ತಗೊಳ್ಳಿ' ಎಂದೂ ಹೇಳಿದ್ದಾರೆ. ಆದರೆ ಅವರು 'ನೋ, ಥ್ಯಾಂಕ್ಸ್, ನಿಮ್ಮ ಸಹಾಯ ಬೇಕಿಲ್ಲ' ಎಂದ ಮೇಲೂ ನಾಟೋದ ಮೂಲಕ ಮಿಲಿಟರಿ ಹಸ್ತಕ್ಷೇಪದ ಹುನ್ನಾರ ನಡೆಸಿರುವುದಾಗಿ ವರದಿಯಾಗಿದೆ.

ಆತಂಕದ ಸಂಗತಿಯೆಂದರೆ ಭಾರತ ಸರಕಾರ ಇಂತಹ ಗೋಸುಂಬೆ ನಿಲುವುಗಳಿಂದ ದೂರ ನಿಂತು ಸ್ವತಂತ್ರ ನಿಲುವು ತಳೆಯುವ ಬದಲು ಒಬಾಮ ಪದಾವಳಿಗಳನ್ನೇ ಪ್ರತಿಧ್ವನಿಸಲಾರಂಭಿಸಿದೆ ಎಂದು ರಕ್ಷಣಾ ತಜ್ಞ ಹಾಗೂ ನಿವೃತ್ತ ರಾಜತಾಂತ್ರಿಕ ಎಂ.ಕೆ. ಭದ್ರಕುಮಾರ್ ಆತಂಕ ವ್ಯಕ್ತ ಪಡಿಸಿದ್ದಾರೆ.

ಯುಪಿಎ ಸರಕಾರ ನಮ್ಮ ಸುಮಾರು 18,000 ನಾಗರಿಕರನ್ನು ದೇಶಕ್ಕೆ ವಾಪಾಸು ಕರೆಸಿಕೊಳ್ಳಲು ಎರಡು ಯುದ್ಧ ಹಡಗುಗಳನ್ನು ಮೆಡಿಟರೇನಿಯನ್ ಸಾಗರಕ್ಕೆ ಕಳಿಸಲು ನಿರ್ಧರಿಸಿದೆಯಂತೆ. ಆದರೆ ವಾಸ್ತವವಾಗಿ ಈ ಯುದ್ಧ ಹಡಗುಗಳನ್ನು ಕಳಿಸುವ ನಿರ್ಧಾರಕ್ಕೆ ಕಾರಣ ಬೇರೆಯೇ ಇದೆಯಂತೆ. ಏಕೆಂದರೆ ಮಾರ್ಚ್ ಮಧ್ಯದ ವೇಳೆಗೆ ಲಿಬ್ಯಾ ತಟ ತಲುಪಬಹುದಾದ ಯುದ್ಧ ಹಡಗುಗಳಿಂದೇನೂ ಉಪಯೋಗವಿಲ್ಲ. ಅದುವರೆಗೆ ಗಡಾಫಿ ಅಧಿಕಾರದಲ್ಲಿ ಇರಲಿಕ್ಕಿಲ್ಲ. ಚೀನಾ ವಿಶೇಷ ವಿಮಾನಗಳು, ಹಡಗುಗಳ ಮೂಲಕ ಈಗಾಗಲೇ ತನ್ನ 29,000 ನಾಗರಿಕರನ್ನು ಲಿಬ್ಯಾದಿಂದ ಕರೆಸಿಕೊಂಡಿದೆ. ಭಾರತವೂ ಹಾಗೆಯೇ ಮಾಡಬಹುದು.

ಆದ್ದರಿಂದ ಭಾರತದ ಯುದ್ಧ ಹಡಗುಗಳು ಹೋಗುತ್ತಿರುವುದು ಲಿಬ್ಯಾದ ವಿರುದ್ಧ ನಾಟೋ ಕಾರ್ಯಾಚರಣೆಗೆ ನೆರವಾಗಲಿಕ್ಕಿರಬಹುದು ಎಂಬ ಸಂದೇಹ ಉಂಟಾಗಿದೆ. ಭಾರತ-ಅಮೆರಿಕಾ ರಕ್ಷಣಾ ಚೌಕಟ್ಟು ಒಪ್ಪಂದದಲ್ಲಿ 'ಇಂಟರ್-ಒಪರೇಬಿಲಿಟಿ' ಅಂದರೆ 'ಪರಸ್ಪರ ಕಾರ್ಯಾಚರಿಸುವ ಸಾಧ್ಯತೆಗಳು' ಎಂಬ ಒಂದು ಪದವಿತ್ತು. ಇದರ ಅರ್ಥ ಭಾರತದ ಸಶಸ್ತ್ರ ಪಡೆಗಳು ಅಮೆರಿಕಾದ ಸಾಧನ-ಶಸ್ತ್ರಾಸ್ತ್ರಗಳನ್ನು ಬಳಸುವಂತಿರಬೇಕು ಹಾಗೂ ಅದೇ ರೀತಿ ಅಮೆರಿಕಾದ ಸಶಸ್ತ್ರ ಪಡೆಗಳು ಭಾರತದ ಸಾಧನ-ಶಸ್ತ್ರಾಸ್ತ್ರಗಳನ್ನು ಬಳಸುವಂತಿರಬೇಕು. ಲಿಬ್ಯಾದಲ್ಲಿನ ಸನ್ನಿವೇಶವು ಈ ಅಂಶವನ್ನು ಪರೀಕ್ಷೆಗೊಳಪಡಿಸಲು ಅಮೆರಿಕಾಕ್ಕೆ ಸಿಕ್ಕಿರುವ 'ಸುವರ್ಣಾವಕಾಶ'ವಾಗಿದೆ. ಅದಕ್ಕೆ ಯುಪಿಎ-2 ಸರಕಾರ ಸಹಕರಿಸ ಹೊರಟಿದೆಯೇ ಎಂಬ ಬಲವಾದ ಸಂದೇಹ ಉಂಟಾಗಿದೆ.

ಜಗದಗಲ

ಶರತ್‌ಚಂದ್ರ


ಲಿಬ್ಯಾದಲ್ಲಿ ಮೂಗು ತೂರಿಸುತ್ತಿರುವ ತೈಲ ರಾಜಕೀಯ

ಅರಬ್ ದೇಶಗಳಲ್ಲಿ ಕಳೆದ ಕೆಲವು ವಾರಗಳಿಂದ ಪ್ರಜಾಪ್ರಭುತ್ವಕ್ಕಾಗಿ ಜನರ ದಂಗೆ ಹಲವು ದೇಶಗಳಲ್ಲಿ ಹಲವು ರೂಪಗಳಲ್ಲಿ ಕಂಡು ಬಂದಿದೆ. ಆದರೆ ಹಲವು ಸಾಮಾನ್ಯ ಅಂಶಗಳು ಕಂಡು ಬಂದಿವೆ. ಹೆಚ್ಚಿನ ದೇಶಗಳಲ್ಲಿ ಅಮೆರಿಕದ ಮತ್ತು ಯುರೋಪಿಯನ್ ತೈಲ ರಾಜಕೀಯಕ್ಕಾಗಿ ಅವರ ಮಿಲಿಟರಿ ರಾಜಕೀಯ ಬೆಂಬಲದಿಂದ ಸ್ಥಾಪಿಸಲಾದ ರಾಜರುಗಳು, ಸರ್ವಾಧಿಕಾರಗಳ ದಶಕಗಳ ದುರಾಡಳಿತದ ವಿರುದ್ದ ಜನ ದಂಗೆ ಎದ್ದಿದ್ದಾರೆ. ಬೆರಳೆಣಿಕೆಯ ಸೂಪರ್ ಶ್ರೀಮಂತ ಆಳುವವರು ಮತ್ತು ಅವರ ಚಮಚಾಗಳ ದಬ್ಬಾಳಿಕೆಯ ವಿರುದ್ಧ ಬಡತನ ನಿರುದ್ಯೋಗ ತೀವ್ರ ಬೆಲೆ ಏರಿಕೆಗಳಿಂದ ನರಳುತ್ತಿರುವ ಜನಸಾಮಾನ್ಯರ ದಂಗೆ. ಇವು ಅಮೆರಿಕನ್ ಸಾಮ್ರಾಜ್ಯಶಾಹಿ ಹೇರಿಸಿದ ನವ-ಉದಾರವಾದಿ ನೀತಿಗಳ ಫಲ ಸಹ. ಆದ್ದರಿಂದ ಈ ದಂಗೆಗಳು ಸಾಮ್ರಾಜ್ಯಶಾಹಿಯ ಮೂಗು ತೂರಿಸುವಿಕೆಯ ವಿರುದ್ಧ ಸಹ. ಅಮೆರಿಕನ್ ಸಾಮ್ರಾಜ್ಯಶಾಹಿ-ವಿರೋಧಿ ತೀವ್ರ ಅಲೆ ಅರಬ್ ದೇಶಗಳಲ್ಲಿ ಹರಡಿದೆ. ಆದ್ದರಿಂದಲೇ ಅಮೆರಿಕ ತನ್ನೆಲ್ಲಾ ಮಿಲಿಟರಿ ಬಲ ಇದ್ದೂ ಎಲ್ಲೂ ಮಧ್ಯಪ್ರವೇಶ ಮಾಡಲು ಈ ವರೆಗೆ ಸಾಧ್ಯವಾಗಿಲ್ಲ. ಅಲ್ಲದೆ ಹೆಚ್ಚಿನ ದೇಶಗಳಲ್ಲಿ (ಅಮೆರಿಕನ್ ತರಬೇತಿ ಪಡೆದ) ಮಿಲಿಟರಿ ಸಹ ಜನರ ದಂಗೆಗಳ ವಿರುದ್ಧ ಕಾರ್ಯಾಚರಣೆ ಮಾಡಲು ಹಿಂಜರಿದಿರುವುದು ಇದಕ್ಕೆ ಕಾರಣ.

ಗದ್ದಾಫಿ ಸರ್ವಾಧಿಕಾರಿಯೆ ?

ಕಳೆದ ಕೆಲವು ವಾರಗಳಲ್ಲಿ ಲಿಬ್ಯಾದಿಂದಲೂ ಇಂತಹ ವರದಿಗಳು ಬರಲಾರಂಭಿಸಿದ್ದು, ಇಂತಹುದೇ ಘಟನಾವಳಿ ಪುನರಾವರ್ತನೆ ಆಗುತ್ತಿರುವಂತೆ ಕಾಣುತ್ತಿತ್ತು. ಆದರೆ ಕಳೆದ ಕೆಲವು ದಿನಗಳ ವರದಿಗಳು ಲಿಬ್ಯಾದ ಘಟನಾವಳಿ ಬೇರೆ ಥರದ್ದು ಎಂಬ ಚಿತ್ರ ನೀಡುತ್ತಿವೆ. ಹಲವು ಮೊದಲ ವರದಿಗಳು ತಪ್ಪು ಎಂದೂ ಸಾಬೀತಾಗಿವೆ. ಲಿಬ್ಯಾವನ್ನು 40 ವರ್ಷಗಳಿಂದ ಆಳುತ್ತಿರುವ ಗದ್ದಾಫಿ ಸರ್ಕಾರ ಬಿದ್ದು ಹೋಗಿ ಆತ ದೇಶ ಬಿಟ್ಟು ವೆನೆಜುವೇಲಾಗೆ ಹೋಗಿದ್ದಾರೆ ಎಂಬ ವರದಿ ಸುಳ್ಳಾಗಿತ್ತು. ಗದ್ದಾಫಿ ಟಿವಿಯಲ್ಲಿ ಕಾಣಿಸಿಕೊಂಡು 'ತಾನು ಕೊನೆವರೆಗೆ ಹೋರಾಡುತ್ತೇನೆ. ಅಗತ್ಯ ಬಿದ್ದರೆ ಈ ನೆಲದಲ್ಲೇ ಪ್ರಾಣ ತ್ಯಾಗ ಮಾಡುತ್ತೇನೆ' ಎಂದು ಹೇಳಿದರು. ಆ ನಂತರವೂ ಹಲವು ವದಂತಿಗಳು ಸುದ್ದಿಗಳು ಹರಡಿವೆ. ಯಾವುದು ಸುದ್ದಿ ಯಾವುದು ವದಂತಿ ಎಂದು ತಿಳಿಯಲಾಗದಷ್ಟು ಗೊಂದಲ ಹರಡಿದೆ.

ಆದರೂ ಈ ವರೆಗಿನ ವರದಿಗಳ ಪ್ರಕಾರ ಗದ್ದಾಫಿ ಸರ್ಕಾರದ ವಿರುದ್ಧ ತೀವ್ರ ದಂಗೆ ಎದ್ದಿದೆ. ಸರ್ಕಾರ ಆದರಲ್ಲೂ ಮಿಲಿಟರಿ ಪಡೆಗಳ ಒಂದು ವಿಭಾಗ ದಂಗೆಕೋರರ ಜತೆ ಹೋಗಿದೆ. ಸರ್ಕಾರ ಮತ್ತು ದಂಗೆಕೋರ ಪಡೆಗಳ ನಡುವೆ ತೀವ್ರ ಕಾಳಗ ನಡೆದಿದೆ. ಈ ಕಾಳಗದಲ್ಲಿ ನೂರಾರು ಜನ ಸತ್ತಿದ್ದಾರೆ. ಜನರ ಮೇಲೆ ಸರ್ಕಾರ ದಬ್ಬಾಳಿಕೆ ಮಾಡುತ್ತಿದೆ ಎಂಬ ಆಪಾದನೆ ಮಾಡಿ ಅಮೆರಿಕ ಮತ್ತು ಭಾರತದಲ್ಲಿ ಲಿಬ್ಯಾದ ರಾಯಭಾರಿಗಳು ರಾಜೀನಾಮೆ ಕೊಟ್ಟಿದ್ದಾರೆ. ದೇಶದ ಪೂರ್ವಭಾಗ ಮತ್ತು ಎರಡನೇ ದೊಡ್ಡ ಪಟ್ಟಣ ದಂಗೆಕೋರರ ವಶವಾಗಿದೆ. ದೇಶದ ರಾಜಧಾನಿ ಟ್ರಿಪೋಲಿ ಮತ್ತು ಪಶ್ಚಿಮ ಭಾಗ ಇನ್ನೂ ಸರ್ಕಾರಿ ಪಡೆಗಳ ವಶದಲ್ಲಿದ್ದು ಅದರ ವಶಕ್ಕಾಗಿ ತೀವ್ರ ಕಾಳಗ ನಡೆದಿದೆ. ನೆರೆ ದೇಶಗಳ ಜನರ ಬಾಡಿಗೆ



ಪಡೆಗಳನ್ನು ಬಳಸಲಾಗುತ್ತಿದೆ ಎಂಬ ಆಪಾದನೆ ಎರಡೂ ಕಡೆಗಳಿಂದ ಕೇಳಿ ಬಂದಿದೆ. ಇತ್ತೀಚಿನ ವರದಿಗಳ ಪ್ರಕಾರ ಸರ್ಕಾರಿ ಪಡೆಗಳ ಕೈ ಮೇಲಾಗುತ್ತಿದೆ ಎಂಬ ವರದಿಗಳೂ ಬಂದಿವೆ. ಆದರೆ ಕಾಳಗದ ಪರಿಸ್ಥಿತಿ ವೇಗವಾಗಿ ಬದಲಾಗುತ್ತಿದೆ.

ಲಿಬ್ಯಾವೇ ಯಾಕೆ ?

ಲಿಬ್ಯಾವನ್ನೇ ಪಾಶ್ಚಿಮಾತ್ಯ ದುಷ್ಟಕೂಟ ಮಿಲಿಟರಿ ಮಧ್ಯ ಪ್ರವೇಶಕ್ಕೆ ಆರಿಸಿಕೊಂಡಿರುವುದು ಯಾಕೆ ಎಂಬ ಪ್ರಶ್ನೆ ಏಳುತ್ತದೆ. ಲಿಬ್ಯಾ ಮತ್ತು ಇತರ ಅರಬ್ ದೇಶಗಳ ಪರಿಸ್ಥಿತಿ ಭಿನ್ನವಾಗಿದೆ. ಲಿಬ್ಯಾಕ್ಕೆ ಇತರ ಅರಬ್ ದೇಶಗಳಂತೆ ಅಮೆರಿಕದ ಅಥವಾ ತೈಲ ಕಂಪನಿಗಳ ಬೆಂಬಲದಿಂದ ಆಳುವ ರಾಜ ಅಥವಾ ಸರ್ವಾಧಿಕಾರಿ ಅಥವಾ ಅಧ್ಯಕ್ಷ ಇಲ್ಲ. ಗದ್ದಾಫಿ 1960 ರ ದಶಕದಲ್ಲಿ ಅರಬ್ ದೇಶಗಳ ರಾಜಸತ್ತೆ ಮತ್ತು ವಸಾಹತುಶಾಹಿ ವಿರುದ್ಧ ಎದ್ದ ಪ್ರಜಾಸತ್ತಾತ್ಮಕ ಕ್ರಾಂತಿಯ ಅಲೆಯ ನಾಯಕತ್ವದಲ್ಲಿ ಉಳಿದಿರುವ ಏಕಮಾತ್ರ ಕೊಂಡಿ. ಪ್ಯಾಲೆಸ್ತೀನ್ ಮತ್ತಿತರ ಕ್ರಾಂತಿಗೆ ಮಿಲಿಟರಿ-ಆರ್ಥಿಕ ಬೆಂಬಲ ನೀಡಿದ್ದರಿಂದ ಅಮೆರಿಕ-ನಾಟೋಗಳಿಗೆ ಆತ ಯಾವಾಗಲೂ ದುಷ್ಟ ಶಕ್ತಿಯಾಗಿದ್ದು ಆಶ್ಚರ್ಯವಿಲ್ಲ. ಎರಡನೇ ಮಹಾಯುದ್ಧದವರೆಗೆ ಸುಮಾರು ಮೂರು ದಶಕಗಳ ಕಾಲ ಲಿಬ್ಯಾ ಇಟಲಿಯ ವಸಾಹತುವಾಗಿತ್ತು. 1942 ರಲ್ಲಿ ಅಕ್ಷ ಸೇನೆಗಳು ಲಿಬ್ಯಾವನ್ನು ವಶಪಡಿಸಿಕೊಂಡವು. ಫ್ರಾನ್ಸ್ ಮತ್ತು ಬ್ರಿಟನ್ ಲಿಬ್ಯಾವನ್ನು ಪ್ರಾಂತ್ಯವಾರಾಗಿ ಹಂಚಿಕೊಂಡವು.

1951 ರಲ್ಲಿ ಲಿಬ್ಯಾ ಸ್ವತಂತ್ರವಾಗಿ ಇದ್ರಿಸ್ ದೊರೆಯ ಆಳ್ವಿಕೆಗೆ ಒಳಗಾಯಿತು. 1956 ರಲ್ಲಿ ರಾಜ ಅಮೆರಿಕನ್ ತೈಲ ಕಂಪನಿಗಳಿಗೆ ಸ್ಥಾವರ ಸ್ಥಾಪಿಸಲು ಒಂದುವರೆ ಕೋಟಿ ಎಕ್ರೆ ಜಮೀನು ಒಪ್ಪಿಸಿದ ಮೆಡಿಟರೇನಿಯನ್ ಸಾಗರ ತಳದಲ್ಲಿ ನಿರ್ಮಿಸಿದ 104 ಮೈಲಿಗಳ ಪೈಪ್ ಲೈನಿನ ಮೂಲಕ ಲಿಬ್ಯಾದ ತೈಲ ರಫ್ತಾಗಲಾರಂಭಿಸಿತು. 1969 ರಲ್ಲಿ ನಾಸೆರ್ ಅವರ ಈಜಿಪ್ಟ್ ಕ್ರಾಂತಿಯಿಂದ ಮತ್ತು ಸಿರಿಯಾದ ಬಾತ್ ಪಕ್ಷದಿಂದ ಪ್ರಭಾವಿತರಾದ ಗದ್ದಾಫಿ ನಾಯಕತ್ವದಲ್ಲಿ ಮಿಲಿಟರಿ ಅಧಿಕಾರಿಗಳ ಗುಂಪೊಂದು ಕ್ಷಿಪ್ರಕ್ರಾಂತಿ ಮಾಡಿತು. ಗದ್ದಾಫಿ ತೈಲ ಮತ್ತಿತರ ಪ್ರಾಕೃತಿಕ ಸಂಪತ್ತುಗಳ ರಾಷ್ಟ್ರೀಕರಣ, ಸಾರ್ವಜನಿಕ ಕ್ಷೇತ್ರದಲ್ಲಿ ಎಲ್ಲಾ ಆರ್ಥಿಕ ಚಟುವಟಿಕೆ ನಡೆಸುವ 'ಸಮಾಜವಾದಿ ಮಾದರಿ' ಯ ಸಮಾಜ ನಿರ್ಮಿಸಲು ಗದ್ದಾಫಿ ಆಡಳಿತ ಮುಂದಾಯಿತು. ಎಲ್ಲಾ ವಿದೇಶಿ ಮಿಲಿಟರಿ ನೆಲೆಗಳನ್ನು ಮುಚ್ಚಲಾಯಿತು.

ಅರಬ್ ರಾಷ್ಟ್ರೀಯತೆಯಿಂದ ಪ್ರಭಾವಿತರಾದ ಗದ್ದಾಫಿ 1970-80 ರ ದಶಕದಲ್ಲಿ - ಮೊದಲು ಎಲ್ಲಾ ಅರಬ್ ದೇಶಗಳ, ಆ ಮೇಲೆ ಕೆಲವು ಆಯ್ದ ದೇಶಗಳ (ಈಜಿಪ್ಟ್, ಟುನಿಶಿಯಾ, ಸಿರಿಯಾ) ಜತೆ ಒಕ್ಕೂಟ ರಚಿಸುವ ಗಂಭೀರ ಪ್ರಯತ್ನ ನಡೆಸಿದರು. 197 ರಲ್ಲಿ 'ಜನತಾ ಕ್ರಾಂತಿ' ಘೋಷಿಸಿ, ಎಲ್ಲಾ ಸಾಮ್ರಾಜ

ಪುಟ 15

ಲಿಬ್ಯಾ ಆಕ್ರಮಣಕ್ಕೆ ನಾಟೋ ಸಿದ್ಧತೆ

ಅಮೆರಿಕ ಮತ್ತು ಯುರೋಪಿಯನ್ ಕೂಟಗಳು, ಇತರ ಅರಬ್ ದೇಶಗಳಲ್ಲಿ ಮಧ್ಯ ಪ್ರವೇಶ ಮಾಡಲು ತೋರದ ಆತುರ ಆತಂಕ ಲಿಬ್ಯಾದಲ್ಲಿ ತೋರಿಸಿವೆ. ಎರಡೂ ಲಿಬ್ಯಾದ ಮೇಲೆ ಆರ್ಥಿಕ-ಮಿಲಿಟರಿ ದಿಗ್ಬಂಧನ, ತಮ್ಮ ದೇಶಗಳಲ್ಲಿ ಅದರ ಆಸ್ತಿಗಳ ಮುಟ್ಟುಗೋಲು ಹಾಕುವ ಘೋಷಣೆ ಹಾಕಿವೆ. ಅಮೆರಿಕದ ವಿದೇಶ ಸಚಿವೆ ಹಿಲೆರಿ ಕ್ಲಿಂಟನ್ ದಂಗೆಕೋರ ಪಡೆಗಳಿಗೆ ಮಿಲಿಟರಿ ನೆರವು ಘೋಷಿಸುವ ಮೂಲಕ ಲಿಬ್ಯಾದ ಆಂತರಿಕ ಕಲಹದಲ್ಲಿ ಮೂಗು ತೂರಿಸುವ ಪ್ರಯತ್ನ ನಡೆಸಿವೆ. ಅಮೆರಿಕದ ಮಿಲಿಟರಿ ನೆರವು ನಮಗೆ ಬೇಡ ಎಂಬ ದಂಗೆಕೋರ ನಾಯಕರ ಮಾರುತ್ತರದಿಂದ ಅದಕ್ಕೆ ಮುಖಭಂಗ ಸಹ ಆಗಿದೆ. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಲಿಬ್ಯಾದ ಸರ್ಕಾರವನ್ನು ಖಂಡಿಸುವ ನಿರ್ಣಯ ಮಂಡಿಸಿ ಪಾಸು ಮಾಡಿಸಿದೆ. ಲಿಬ್ಯಾಕ್ಕೆ ಪ್ರವಾಸದ ಮೇಲೆ ನಿಷೇಧ, ಸರ್ಕಾರಿ ಆಸ್ತಿಪಾಸ್ತಿಗಳ ಮುಟ್ಟುಗೋಲು ಕ್ರಮ ಕೈಗೊಂಡಿವೆ. ಲಿಬ್ಯಾವನ್ನು ಮಾನವ ಹಕ್ಕುಗಳ ಕಮಿಶನಿನಿಂದ ಸಸ್ಪೆಂಡ್ ಮಾಡಲಾಗಿದೆ.

ಅಮೆರಿಕದ ಎರಡು ಯುದ್ಧ ಹಡಗುಗಳು ಲಿಬ್ಯಾದ ಉತ್ತರ ಕರಾವಳಿಯತ್ತ ದಾಪುಗಾಲು ಹಾಕುತ್ತಿವೆ. ಜರ್ಮನ್ ಯುದ್ಧ ಹಡಗುಗಳೂ ಲಿಬ್ಯಾದ ಕರಾವಳಿಯತ್ತ ತೆರಳಿವೆ. ಅಧ್ಯಕ್ಷ ಒಬಾಮಾ ಯುದ್ಧ ಸಾರುವುದೂ ಸೇರಿದಂತೆ ಎಲ್ಲಾ "ಪರಿಸ್ಥಿತಿಗಳಿಗೆ ಸಜ್ಜಾಗಿರಲು" ಅಮೆರಿಕದ ಮಧ್ಯ ಪ್ರಾಚ್ಯ ಪಡೆಗಳಿಗೆ ಆಜ್ಞೆ ಮಾಡಲಾಗಿದೆ ಎಂದಿದ್ದಾರೆ. ನಾಟೋ ಮುಖ್ಯಸ್ಥರೂ ಬುಡಾಪೆಸ್ಟಿನಲ್ಲಿ ಸಭೆ ಸೇರಿ ಮಿಲಿಟರಿ ಕಾರ್ಯಾಚರಣೆಗೆ ಸಿದ್ಧತೆ ನಡೆಸಿದ್ದಾರೆ. ಅಮೆರಿಕ ಮತ್ತು ಯುರೋಪಿಯನ್ ಕೂಟದ ರಾಜಕೀಯ ಮತ್ತು ಮಿಲಿಟರಿ ನಾಯಕರ ನಡುವೆ ಲಿಬ್ಯಾದ ಮೇಲೆ ಸಂಯೋಜಿತ ಮಿಲಿಟರಿ ಕಾರ್ಯಾಚರಣೆ ನಡೆಸಲು ಮಾತುಕತೆ ತಯಾರಿ ನಡೆದಿದೆ. ಗದ್ದಾಫಿಯನ್ನು ಯುದ್ಧ ಅಪರಾಧಿಯಾಗಿ ಅಂತರ್ರಾಷ್ಟ್ರೀಯ ಯುದ್ಧ ಅಪರಾಧಗಳ ಟ್ರಿಬ್ಯುನಲಿಗೆ ಒಪ್ಪಿಸಲು ಪ್ರಯತ್ನ ನಡೆದಿದೆ. ಲಿಬ್ಯಾದ ಆಂತರಿಕ ಕಲಹದ ಸಂದರ್ಭ ಬಳಸಿ ಅಮೆರಿಕ-ಯುರೋಪಿಯನ್ ಕೂಟ ಮಿಲಿಟರಿ ದಾಳಿ ಮಾಡಿ, ಅಪಾರ ತೈಲ ಸಂಪತ್ತು ವಶಪಡಿಸಿಕೊಳ್ಳುವ ಹುನ್ನಾರ ಸ್ಪಷ್ಟವಾಗಿ ಕಂಡು ಬರುತ್ತಿದೆ. ಸರ್ಬಿಯಾ-ಕೊಸೊವೋ ಮೊದಲು ಆಕ್ರಮಣ ಮಾಡಿದಾಗ ನಾಟೋ ನಡೆಸಿದ ಕಾರ್ಯಾಚರಣೆಗಳೆಲ್ಲಾ ಆರಂಭವಾಗಿವೆ. ಇಂತಹ ಸಾಧ್ಯತೆ ಬಗ್ಗೆ ಫಿಡೆಲ್ ಕ್ಯಾಸ್ಟ್ರೋ ಕೆಲವು ದಿನಗಳ ಹಿಂದೆನೇ ಎಚ್ಚರಿಸಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ರಶ್ಯ-ಫ್ರಾನ್ಸುಗಳು ಇಂತಹ ಪ್ರಯತ್ನಗಳ ಬಗ್ಗೆ ಎಚ್ಚರಿಸಿವೆ. ಲಿಬ್ಯದ ಮೇಲೆ ವಿಮಾನ ಹಾರಾಟ ನಿಷೇಧಿಸಿ ಆ ದೇಶದ ಸಾರ್ವಭೌಮತೆ ಪ್ರಶ್ನಿಸುವ ನಾಟೋ ಪ್ರಸ್ತಾವವನ್ನೂ ಅವು ಬಲವಾಗಿ ವಿರೋಧಿಸಿವೆ. ಮಾಧ್ಯಮ ಬಲ ಹೊಂದಿರುವ ಅವರು ಲಿಬ್ಯಾದ ದಂಗೆ, ಸಕಾರದ ದಬ್ಬಾಳಿಕೆಯ ಅತಿಶಯೋಕ್ತಿಯ ವರದಿಗಳನ್ನು ಹರಡಿರುವ ಸಾಧ್ಯತೆ ಇಲ್ಲದಿಲ್ಲ. ಗದ್ದಾಫಿ ಈ ಆಪಾದನೆಗಳನ್ನು ಮಾಡಿದ್ದು ವಿಶ್ವಸಂಸ್ಥೆಯಿಂದ ನಿಷ್ಪಕ್ಷಪಾತ ತನಿಖೆ ಮಾಡಲು ಒತ್ತಾಯಿಸಿದ್ದಾರೆ.

‘ಆಮ್ ಆದ್ಮಿ’ ಕೈಬಿಟ್ಟ ಕೇಂದ್ರ ಬಜೆಟ್

ಪುಟ 9 ರಿಂದ

ಅನುದಾನವನ್ನು 100 ಕೋಟಿ ರೂಪಾಯಿ ಖೋತಾ ಮಾಡಲಾಗಿದೆ. ಐಸಿಡಿಎಸ್‌ಗೆ ನೀಡಲಾಗುವ ಅನುದಾನವು ಐಸಿಡಿಎಸ್‌ನ ಸಂಪೂರ್ಣ ಸಾರ್ವತ್ರೀಕರಣಕ್ಕಾಗಿ ಸುಪ್ರಿಂಕೋರ್ಟ್ ನಿರ್ದೇಶಿಸಿದ್ದಕ್ಕಿಂತ ತುಂಬಾ ಕಡಿಮೆಯಾಗಿದೆ.

ಕೃಷಿ ಬೆಳವಣಿಗೆ ಕುಂಠಿತ

11ನೇ ಪಂಚವಾರ್ಷಿಕ ಯೋಜನೆಯ ಮೊದಲ ನಾಲ್ಕು ವರ್ಷಗಳಲ್ಲಿ ಕೃಷಿ ಬೆಳವಣಿಗೆಯು ಸರಾಸರಿ ಶೇಕಡ 3 ಕ್ಕಿಂತ ಕಡಿಮೆಯಾಗಿದೆ. ಗುರಿ ಇದ್ದದ್ದು ಶೇಕಡ 4 ರ ಬೆಳವಣಿಗೆ. ಇಂಥ ಸ್ಥಿತಿಯಲ್ಲಿ ಕೃಷಿ ಇಲಾಖೆಯ ಬಜೆಟ್ ಅನುದಾನವನ್ನು ಖೋತಾ ಮಾಡಿರುವುದು ನಿಜಕ್ಕೂ ಆಘಾತಕಾರಿಯಾಗಿದೆ. ಮಹಿಳೆಯರು, ಅಲ್ಪಸಂಖ್ಯಾತರು, ದಲಿತರು ಮತ್ತು ಬುಡಕಟ್ಟು ಜನರ ಕಲ್ಯಾಣಕ್ಕೆ ಮೀಸಲಿಟ್ಟಿರುವ ಮೊತ್ತ ಕೂಡ ತೀರಾ ಕಡಿಮೆಯಾಗಿದೆ. ಪ್ರಧಾನವೆಚ್ಚ (ಕ್ಯಾಪಿಟಲ್ ಎಕ್ಸ್‌ಪೆಂಡೀಚರ್)ವು ಜಿಡಿಪಿಯ 1.7 ಶೇಕಡದಿಂದ ಕೇವಲ 1.2 ಕ್ಕೆ ಇಳಿಯುವುದೆಂದು ಅಂದಾಜಿಸಲಾಗಿದೆ. ಇದು ಖಂಡಿತವಾಗಿಯೂ ಜನತೆಯ ಮೂಲ ಸೌಕರ್ಯಗಳ ಮೇಲೆ ದುಷ್ಪರಿಣಾಮ ಬೀರಲಿದೆ.

ವಿಮೆ, ಬ್ಯಾಂಕಿಂಗ್ ಮತ್ತು ಪಿಂಚಣಿ ನಿಧಿ ಮೊದಲಾದ ಸೂಕ್ಷ್ಮ ಹಣಕಾಸು ವಲಯಗಳ ಉದಾರೀಕರಣಕ್ಕೆ ಅನುವಾಗುವ ಕಾನೂನುಗಳ ರಚನೆಯ ಬಗ್ಗೆ ಬಜೆಟ್‌ನಲ್ಲಿ ಪ್ರಕಟಿಸಿರುವುದು ವಿದೇಶಿ ಹಣಕಾಸು ಬಂಡವಾಳಗಾರರನ್ನು ಮೆಚ್ಚಿಸುವ ತಂತ್ರವಾಗಿದೆ. ಭಾರತೀಯ ಮ್ಯುಚುವಲ್ ಫಂಡ್‌ಗಳಲ್ಲಿ ವಿದೇಶಿ ಹೂಡಿಕೆಗಾಗಿ ನಿಯಮಗಳನ್ನು ಇನ್ನಷ್ಟು ಉದಾರಗೊಳಿಸಲು ಹೊರಟಿರುವುದರಿಂದ ದೇಶದಲ್ಲಿ ಇನ್ನಷ್ಟು ಸಟ್ಟಾಬಾಜಿ (ಸ್ಪೆಕ್ಯುಲೇಟಿವ್) ಹಣಕಾಸು ಪ್ರವೇಶಕ್ಕೆ ಅನುಕೂಲವಾಗುತ್ತದೆ. ದೇಶದ ಪ್ರಸಕ್ತ ವಿತ್ತೀಯ ಕೊರತೆ ಹೆಚ್ಚುತ್ತಿರುವ ಈಗಿನ ಕಾಲಘಟ್ಟದಲ್ಲಿ ಸಟ್ಟಾಬಾಜಿ ಹಣಕಾಸು ಹೆಚ್ಚಿನ ಪ್ರಮಾಣದಲ್ಲಿ ಹರಿದುಬರುವುದು ಭಾರತದ ಆರ್ಥಿಕ ಆರೋಗ್ಯಕ್ಕೆ ಉತ್ತಮವಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ, 2011 ಮತ್ತು 12ನೇ ಸಾಲಿನ ಬಜೆಟ್ ಯುಪಿಎ 2 ಸರಕಾರ ತನ್ನ ಆಮ್ ಆದ್ಮಿ (ಜನಸಾಮಾನ್ಯರ ಪರ) ಅಜೆಂಡಾವನ್ನು ಕೈಬಿಟ್ಟಿರುವುದರ ದ್ಯೋತಕವಾಗಿದೆ. ತೀವ್ರಗತಿಯಲ್ಲಿ ನವ ಉದಾರೀಕರಣವನ್ನು ಸಾಧಿಸುವ ಅದರ ಹಂಬಲದ ಸಂಕೇತವಾಗಿದೆ. ಇಂಥ ನವ ಉದಾರೀಕರಣ ನೀತಿಗಳ ವಿರುದ್ಧದ ಪ್ರತಿರೋಧವನ್ನು ಬಲಪಡಿಸುವಂತೆ ಸಿಪಿಐ(ಎಂ) ಪಾಲಿಟ್ ಬ್ಯೂರೋ ದೇಶದ ಜನತೆಗೆ ಕರೆಕೊಡುತ್ತದೆ. ○

ಯುಪಿಎ ದರ್ಬಾರ್

ಪುಟ 13 ರಿಂದ

ಮಂಜೂರಾತಿ ಇರಲಿಲ್ಲ. ಇಂತಹ ಯೋಜನೆಗಳಿಗೆ ಹಣಕಾಸನ್ನು ರೈಲ್ವೆ ಇಲಾಖೆಯೇ ಪರ್ಯಾಯ ಮಾರ್ಗಗಳಿಂದ ಹೊಂದಿಸಿಕೊಳ್ಳಬೇಕು ಎಂದು ಆಯೋಗದ ಮುಖ್ಯಸ್ಥ ಮೊಂಟೆಕ್‌ಸಿಂಗ್ ಅಹ್ಲುವಾಲಿಯ ದೃಢವಾಗಿ ಹೇಳಿದ್ದಾರಂತೆ.

ಆದರೂ ಒಳ್ಳೆಯ ರೈಲ್ವೆ ಬಜೆಟ್ ಕೊಟ್ಟಿದ್ದಾರೆ ಎಂದು ಆರ್ಥಿಕ ತಜ್ಞರೂ ಆದ ಪ್ರಧಾನ ಮಂತ್ರಿಗಳು ಹೊಗಳಿದ್ದಾರೆ. ರೈಲು ಬಜೆಟಿಗೆ ಪ್ರಧಾನಿಗಳ ಸರ್ಟಿಫಿಕೇಟ್, ಸಾಮಾನ್ಯ ಬಜೆಟಿಗೆ ಅಮೆರಿಕಾ-ಭಾರತ ವ್ಯಾಪಾರಸ್ಥರ ಮಂಡಳಿಯ ಸರ್ಟಿಫಿಕಟ್. ‘ಆಮ್ ಆದ್ಮಿ’ಯ ಸರ್ಟಿಫಿಕೇಟ್ ಯಾರಿಗೂ ಬೇಕಿಲ್ಲ!

★

ಖಾಸಗಿ ಲೂಟಿಗೆ ತೆರೆಯಲು
ಕಾರ್ಪೊರೇಟ್ ವಲಯದ ನೆರವು!

‘ನಮಗೆ ಬಹುಮತ ಇದ್ದಿದ್ದರೆ ಈ ಅಧಿವೇಶನದಲ್ಲೇ ವಿಮಾ ಮಸೂದೆ ಸೇರಿದಂತೆ ಪ್ರಮುಖ ಮಸೂದೆಗಳನ್ನು ಪಾಸು ಮಾಡಿಸಿಕೊಂಡು ಆರ್ಥಿಕ ಸುಧಾರಣೆ ಕ್ರಮಗಳಿಗೆ ಮುಂದಾಗುತ್ತಿದ್ದೆ’ -ಇದು ದೇಶದ ದೊಡ್ಡ ಬಂಡವಾಳಿಗರ ಎದುರು ಯುಪಿಎ-2 ಹಣಕಾಸು ಮಂತ್ರಿಗಳ ಉದ್ಗಾರ.

ಈ ವರ್ಷದ ಬಜೆಟ್ ಮಂಡಿಸಿದ ನಂತರ ದೇಶದ ಬಂಡವಾಳಿಗರ ಮೂರು ಪ್ರಮುಖ ಸಂಸ್ಥೆಗಳು, ಸಿಐಐ, ಫಿಕಿ ಮತ್ತು ಅಸೋಸಿಯೇಟೆಡ್ ಚೇಂಬರ್‌ನವರು ಜಂಟಿಯಾಗಿ ಏರ್ಪಡಿಸಿದ್ದ ‘ಸಂವಾದ’ ದಲ್ಲಿ ಮಾತಾಡುತ್ತ ಕೇಂದ್ರ ಹಣಕಾಸು ಮಂತ್ರಿಗಳು ‘ನನಗೆ ಇದರಲ್ಲಿ ನಿಮ್ಮ ನೆರವು ಬೇಕು. ಏಕೆಂದರೆ ನಿಮಗೆ ರಾಜ್ಯ ಸರಕಾರಗಳ ಮೇಲೆ ಪ್ರಭಾವವಿದೆ, ವಿವಿಧ ರಾಜಕೀಯ ಪಕ್ಷಗಳೊಡನೆ ಸಂಪರ್ಕವಿದೆ..’ ಎಂದು ಅವರು ಹೇಳಿದುದಾಗಿ ವರದಿಯಾಗಿದೆ.

ಆಳುವ ವರ್ಗಗಳ ಪಕ್ಷಗಳು ಮತ್ತು ಬಂಡವಾಳಿಗರ ನಡುವಿನ ಸಂಬಂಧಗಳು ಹೆಚ್ಚೆಚ್ಚು ‘ಪಾರದರ್ಶಕ’ವಾಗುತ್ತಿವೆ. ಕಳೆದ ವಾರವಷ್ಟೇ ಪ್ರಧಾನ ಮಂತ್ರಿಗಳು 2ಜಿ ತರಂಗಾಂತರ ಹಂಚಿಕೆಯಲ್ಲಿ ಸರಕಾರದ ಬೊಕ್ಕಸಕ್ಕಾದ 1.76 ಲಕ್ಷ ಕೋಟಿ ರೂ. ದೂರಸಂಪರ್ಕ ತಿಮಿಂಗಿಲಗಳಿಗೆ ನೀಡಿದ ಸಬ್ಸಿಡಿ ಎಂದಿಟ್ಟುಕೊಳ್ಳಬಾರದೇಕೆ ಎಂಬರ್ಥದಲ್ಲಿ ಮಾತಾಡಿದ್ದರಲ್ಲವೇ? ○

ಚುನಾವಣಾ ಬಿಸಿಯಲ್ಲಿ ಪ.ಬಂ

ಪುಟ 10 ರಿಂದ

ಕರ್ಮೂರ್ ಮಹತೊ ಸ್ವಪ್ನನೆ ನೀಡಿದ್ದ. ಆದರೆ, ದಾಖಲಾದ ಈ ರೋಗಿಗಳಲ್ಲಿ ಒಬ್ಬನ ಹೆಸರು ದೆಬೇನ್ ಮಾರಂಡಿ. ಆತ ಕಟ್ಟಾ ಮಾವೋವಾದಿ. ಈತ ಬಾಂಬ್ ತಯಾರಿಕೆಯಲ್ಲಿ ನಿಸ್ಸೀಮ. ಮಹತೋ ತಾನು ತೃಣಮೂಲ್ ನಾಯಕ ಎಂದು ಒಪ್ಪಿಕೊಂಡಿದ್ದಾನೆ ಎಂಬುದನ್ನು ಕಟಕ್ ಪೊಲೀಸ್ ಕಮಿಷನರ್ ಬಿ.ಕೆ. ಶರ್ಮಾ ಟೈಂಸ್‌ಗೆ ತಿಳಿಸಿದ್ದಾರೆ. (ಜನವರಿ 11ರ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಈ ವರದಿ ಪ್ರಕಟವಾಗಿದೆ.)

ಜನವರಿ 11ರ ನಂತರ ಬಂಧಿತರ ವಿಚಾರಣೆ ನಡೆಸಿದ ಪೊಲೀಸರು ಮಹತ್ವದ ಅಂಶಗಳನ್ನು ಬಯಲಿಗೆಳೆದಿದ್ದಾರೆ. ಇದು ತೃಣಮೂಲದ ನಕ್ಸಲ್ ನಂಟಿಗೆ ಮತ್ತಷ್ಟು ಸ್ಪಷ್ಟ ಸಾಕ್ಷ್ಯ ನೀಡಿದೆ.

ಈ ಬಗ್ಗೆ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಗೃಹ ಸಚಿವ ಪಿ. ಚಿದಂಬರಂಗೆ ವಿಸ್ತೃತ ಪತ್ರವನ್ನು ಬರೆದಿದ್ದಾರೆ. ಕೇಂದ್ರ ಮಾತ್ರ ಎಡರಂಗ ಮತ್ತು ಪಶ್ಚಿಮ ಬಂಗಾಳದ ಪರ ತಾರತಮ್ಯ ಧೋರಣೆಯನ್ನು ಮುಂದುವರಿಸಿದೆ.

ಆದರೆ, ಜನರು ಮಾತ್ರ ಮೌನವಾಗಿ ಕುಳಿತಿಲ್ಲ. ಎರಡು ವರ್ಷಗಳ ಹಿಂಸಾಚಾರಕ್ಕೆ, ಅದು ನೀಡಿದ ನೋವಿಗೆ, ವೇದನೆಗೆ ತಕ್ಕ ಉತ್ತರ ನೀಡಲಿದ್ದಾರೆ. ಪಶ್ಚಿಮ ಬಂಗಾಳದ ಶಾಂತಿ ಸುವ್ಯವಸ್ಥೆಯಲ್ಲಿ, ಅಭಿವೃದ್ಧಿಯಲ್ಲಿ, ಜನರ ಬದುಕಿನಲ್ಲಿ ಚೆಲ್ಲಾಟವಾಡಿದ, ಹಲವು ಹಿಂಸಾಕೃತ್ಯಗಳ ರೂವಾರಿ ಮಮತಾ ಬ್ಯಾನರ್ಜಿಗೆ, ಅವರ ಪಕ್ಷ ತೃಣಮೂಲ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂಬ ವಿಶ್ವಾಸ ಪಶ್ಚಿಮ ಬಂಗಾಳ ರಾಜ್ಯ ಎಡ ಚಳುವಳಿಯದ್ದು. ○

ಲಿಬ್ಯಾದಲ್ಲಿ ಮೂಗು ತೂರಿಸುತ್ತಿರುವ ತೈಲ ರಾಜಕೀಯ

ಪುಟ 14 ರಿಂದ

ಕ್ಷೇತ್ರಗಳಲ್ಲಿ-ಕಾರ್ಖಾನೆ, ಉದ್ಯಮ, ಸ್ಕೂಲು, ಕಾಲೇಜು, ವಿಶ್ವವಿದ್ಯಾಲಯ, ಜಿಲ್ಲಾ ಆಡಳಿತ ಇತ್ಯಾದಿ - ‘ಕ್ರಾಂತಿಕಾರಿ ಸಮಿತಿ’ಗಳ ರಚನೆ ಮಾಡಿ ಅವೇ ಆಳ್ವಿಕೆ ಮಾಡಲಾರಂಭಿಸಿದವು. 1970-80 ರ ದಶಕಗಳಲ್ಲಿ ಆರ್ಥಿಕ ಬೆಳವಣಿಗೆ ಆಗುತ್ತಿದ್ದು, ಜನತೆಯ ಜೀವನ ಮಟ್ಟ ಉತ್ತಮಗೊಳ್ಳುತ್ತಿತ್ತು. ವ್ಯಾಪಕ ಶಿಕ್ಷಣ, ಆರೋಗ್ಯ ಸೇವೆ ಮತ್ತು ಇತರ ಸಾಮಾಜಿಕ ಸವಲತ್ತುಗಳನ್ನು ಜನತೆಗೆ ಕೊಡಲಾಯಿತು. ಲಿಬ್ಯಾ ಅರಬ್ ದೇಶಗಳಲ್ಲೇ ಅತ್ಯುತ್ತಮ ಜನಜೀವನ ಮಟ್ಟ ಹೊಂದಿದ ದೇಶ ಎಂದು ಅಮೆರಿಕದ ಸಿಐಎ ತಯಾರಿಸುವ ‘ದೇಶಗಳ ಅಧ್ಯಯನ ವರದಿ’ಯೇ ಹೇಳುತ್ತದೆ.

ಲಿಬ್ಯಾದ ಮೇಲೆ ಹಗೆ ಸಾಧನೆ

ಸ್ವತಂತ್ರ ನೀತಿ ಅನುಸರಿಸುತ್ತಿದ್ದ ಗದ್ದಾಫಿ ಆಡಳಿತ ಸ್ವಾಭಾವಿಕವಾಗಿಯೇ ಅಮೆರಿಕನ್-ಬ್ರಿಟಿಷ್ ಕೆಂಗಣ್ಣಿಗೆ ಗುರಿಯಾಯಿತು. 1980 ರಲ್ಲಿ ಲಿಬ್ಯಾ ಸಾಗರ ಪ್ರದೇಶಕ್ಕೆ ನುಗ್ಗಿವೆ ಎಂದು ಅಮೆರಿಕನ್ ವಿಮಾನಗಳಿಗೆ ಸವಾಲು ಹಾಕಿದ ಲಿಬ್ಯನ್ ವಿಮಾನಗಳನ್ನು ಹೊಡೆದುರುಳಿಸಲಾಯಿತು. ಹಲವು ಕ್ಷುಲ್ಲಕ ಆಪಾದನೆಗಳನ್ನು ಹಾಕಿ ಬ್ರಿಟನ್ ರಾಜತಾಂತ್ರಿಕ ಸಂಬಂಧ ಕಡಿದುಕೊಂಡಿತು, 1986 ರಲ್ಲಿ ಅಮೆರಿಕ ಮಿಲಿಟರಿ ದಾಳಿ ಮಾಡಿತು. ಆ ದಾಳಿಯಲ್ಲಿ ಗದ್ದಾಫಿಯ ಮಗಳು ಸೇರಿದಂತೆ 100ಕ್ಕೂ ಹೆಚ್ಚು ಜನ ಸತ್ತರು. ಅಲ್ಜೀರಿಯಾ, ಮೊರೊಕ್ಕೊ, ಮಾರಿಟೋನಿಯಾ ಮತ್ತು ಟುನಿಶಿಯಾ ಜತೆ ‘ಅರಬ್ ಮಗ್ರೆಬ್ ಯೂನಿಯನ್’ ಎಂಬ ಪ್ರಾದೇಶಿಕ ಕೂಟ ರಚಿಸಿತು. 1988 ರಲ್ಲಿ ಸ್ಕಾಟ್ಲೆಂಡಿನ ಲಾಕರ್ಬಿ ಮೇಲೆ ಅಮೆರಿಕನ್ ವಿಮಾನವನ್ನು ಹೊಡೆದುರುಳಿಸಿದ್ದು ಎರಡು ಲಿಬ್ಯನ್ ನಾಗರಿಕರು ಎಂದು ಅಮೆರಿಕ ಆಪಾದಿಸಿತು. 1992 ರಲ್ಲಿ ಅವರನ್ನು ಅಮೆರಿಕಕ್ಕೆ ಒಪ್ಪಿಸಬೇಕು ಎಂದು ಒತ್ತಾಯಿಸಿ ಅಮೆರಿಕ ಲಿಬ್ಯದ ಮೇಲೆ ಆರ್ಥಿಕ ದಿಗ್ಬಂಧನ ವಿಧಿಸಿತು. 1999 ರಲ್ಲಿ ಲಿಬ್ಯ ಲಾಕರ್ಬಿ ಆಪಾದಿತರನ್ನು ನೆದರ್ಲಾಂಡ್ಸ್‌ಗೆ ಒಪ್ಪಿಸಿದ ಮೇಲೆ ಅಮೆರಿಕ ಆರ್ಥಿಕ ದಿಗ್ಬಂಧನ ಸಸ್ಪೆಂಡ್ ಮಾಡಲಾಯಿತು.

2003 ರಲ್ಲಿ ಲಿಬ್ಯಾ ಅಮೆರಿಕನ್ ಮತ್ತು ಯುರೋಪಿಯನ್ ವಿರೋಧ ಇದ್ದಾಗ್ಯೂ ಮಾನವ ಹಕ್ಕು ಕಮಿಶನಿನ ಅಧ್ಯಕ್ಷನಾಗಿ ಚುನಾಯಿತವಾಯಿತು. ಲಾಕರ್ಬಿ ಬಾಂಬಿಂಗಿಗೆ ಲಿಬ್ಯಾ ತನ್ನ ಜವಾಬ್ದಾರಿಯನ್ನು ಭದ್ರತಾ ಸಮಿತಿಯಲ್ಲಿ ಒಪ್ಪಿಕೊಂಡು, ಲಾಕರ್ಬಿ ಸಂತ್ರಸ್ತರಿಗೆ 2700 ಕೋಟಿ ಡಾಲರು ಪರಿಹಾರ ಕೊಡಲು ಒಪ್ಪಿದ ಮೇಲೆನೇ ಆರ್ಥಿಕ ದಿಗ್ಬಂಧನ ತೆಗೆಯಲಾಯಿತು. 2005 ರಲ್ಲಿ ಲಿಬ್ಯಾ ಅಮೆರಿಕನ್ ಕಂಪನಿಗಳಿಗೆ ತೈಲ-ಗ್ಯಾಸ್ ಶೋಧನೆಯ ಕಾಂಟ್ರಾಕ್ಟನ್ನು ಕೊಟ್ಟ ಮೇಲೆ ಅಮೆರಿಕ ಬ್ರಿಟನುಗಳು ಲಿಬ್ಯಾದ ಜತೆ ರಾಜತಾಂತ್ರಿಕ ಸಂಬಂಧ ಸಾಮಾನ್ಯಗೊಳಿಸಿದವು. ಆಫ್ರಿಕನ್ ಕೂಟದ ಅಧ್ಯಕ್ಷರಾಗಿ ಗದ್ದಾಫಿ ಆಯ್ಕೆ, ಆಫ್ರಿಕಾದ ಸಂಯುಕ್ತ ಸಂಸ್ಥಾನ ರಚಿಸಲು ಪ್ರಯತ್ನ - ಗದ್ದಾಫಿ ಅವರ ಇತ್ತೀಚಿನ ಜಾಗತಿಕ ಮಹತ್ವದ ಪಾತ್ರಗಳು.

ಹೀಗೆ ಲಿಬ್ಯಾದ ಮೇಲೆ ಅಮೆರಿಕ- ಯುರೋಪು ಗಳ ಮೇಲೆ ಹಗೆ ಸಾಧಿಸುತ್ತಾ ಬಂದಿದ್ದು, ಈಗಿನ ಅರಬ್ ಜನತಾ ದಂಗೆಯ ಪರಿಸ್ಥಿತಿಯನ್ನು ಅವು ದುರ್ಬಳಕೆ ಮಾಡುತ್ತಿದ್ದಾರೆ. ಅದೇ ರೀತಿ ಕಳೆದ ಕೆಲವು ವರ್ಷಗಳಲ್ಲಿ ಉದಾರೀಕರಣದ ಪ್ರಕ್ರಿಯೆ ಲಿಬ್ಯಾದಲ್ಲೂ ಆರಂಭವಾಗಿದ್ದು, ಅದರ ಪರಿಣಾಮವಾಗಿ ಜನತೆಯಲ್ಲಿ ಅತೃಪ್ತಿ ಹಬ್ಬಿರುವ ಸಾಧ್ಯತೆ ಇದೆ. ಮಾತ್ರವಲ್ಲದೆ ಲಿಬ್ಯಾದ ಕ್ರಾಂತಿ ಮೇಲಿಂದ ಕೆಳಗೆ ಬರುವ ಪ್ರಕ್ರಿಯೆಯಲ್ಲಿ ನಡೆದಿದೆ. ಆ ನಂತರದ ಸಾಮಾಜಿಕ-ಆರ್ಥಿಕ ಬದಲಾವಣೆಗಳು ಸಹ ಅದೇ ರೀತಿ ಮೇಲಿಂದ ಬಂದವುಗಳು. ಲಿಬ್ಯಾದ ಸಾಮಾಜಿಕ ಸಂರಚನೆಯ ಮಿತಿ, ಲಿಬ್ಯನ್ ಕ್ರಾಂತಿಯ ಮಿತಿಗಳಿಂದಾಗಿ ಸಮಾಜದ ಪ್ರಜಾಪ್ರಭುತ್ವೀಕರಣ ಆಳವಾಗಿ ಮತ್ತು ಸಾಕಷ್ಟು ಪ್ರಮಾಣದಲ್ಲಿ ನಡೆಯದಿರಬಹುದು. ಈಗಿನ ದಂಗೆಗಳಿಗೆ ಇದು ಕಾರಣವಾಗಿರ ಬಹುದು. ಅದು ಏನೇ ಇದ್ದರೂ ಲಿಬ್ಯಾದ ಜನತೆ ಆಂತರಿಕವಾಗಿ ಇತ್ಯರ್ಥ ಮಾಡಬೇಕಾಗಿರುವ ವಿಷಯ. ಲಿಬ್ಯದ ಜನತೆ ಅವರಿಗೆ ಯಾವ ವ್ಯವಸ್ಥೆ ಬೇಕಾಗಿದೆ ಅಂತ ತೀರ್ಮಾನಿಸಲು ಬಿಡಬೇಕು. ಅದರಲ್ಲಿ ಅಮೆರಿಕವಾಗಲಿ ನಾಟೋ ಆಗಲಿ (ಅದರಲ್ಲೂ ಮಿಲಿಟರಿ) ಮಧ್ಯ ಪ್ರವೇಶ ಮಾಡುವುದು ಸಲ್ಲ. ಅದೇ ಸಮಯದಲ್ಲಿ ಲಿಬ್ಯಾದ ಈಗಿನ ವ್ಯವಸ್ಥೆ ಮತ್ತು ಗದ್ದಾಫಿ, ಇತರ ಅರಬ್ ದೇಶಗಳ ವ್ಯವಸ್ಥೆ ಮತ್ತು ಸರ್ವಾಧಿಕಾರಿ/ರಾಜರುಗಳಿಗಿಂತ ಭಿನ್ನ ಎಂಬುದನ್ನೂ ನೆನಪಿಡಬೇಕು. ಲಿಬ್ಯಾದ ಮೇಲಿನ ದಿಗ್ಬಂಧನಕ್ಕೆ ಅಮೆರಿಕದ ಪ್ರಸ್ತಾವದ ಪರವಾಗಿ ಭಾರತ ಮತ ಹಾಕಿರುವುದು ಮತ್ತು ಲಿಬ್ಯಾ ಕರಾವಳಿಗೆ ತನ್ನ ಯುದ್ಧ ಹಡಗು ಕಳಿಸಿರುವುದು ಈ ಹಿನ್ನೆಲೆಯಲ್ಲಿ ಅತ್ಯಂತ ನಾಚಿಕೆಗೇಡಿನ ವಿಷಯ. ಭಾರತ ಅಮೆರಿಕದ ಬಾಲಂಗೋಚಿಯಾಗುತ್ತಿದೆ ಎಂಬುದರ ಬಗ್ಗೆ ಸೂಚನೆ ಆಗಿದೆ. ○

JANASHAKTHI KANNADA VARA PATRIKE MARCH 13, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS/2078/2009-12
Posted at MBC Bangalore GPO

ಪಾವಗಡದ 'ಕುಂಚ-ಕೊರಚ' ಸಮುದಾಯದಲ್ಲಿ ಮಹಿಳೆಯೊಬ್ಬರನ್ನು ಹರಾಜಿಗಿಟ್ಟದ್ದು ಇತ್ತೀಚಿಗೆ ಸಾಕಷ್ಟು ಸುದ್ದಿಯಾಗಿತ್ತಲ್ಲವೇ? ಜನವಾದಿ ಮಹಿಳಾ ಸಂಘಟನೆಯ ನಿಯೋಗ ಅಲ್ಲಿಗೆ ತೆರಳಿ ಕಂಡಿದ್ದೇನು?

"ಇನ್ನಾರಿಗೆ ದೂರುವೆನಯ್ಯ"

ಡಾ. ಮೀನಾಕ್ಷಿ ಬಾಳಿ

ತುಮಕೂರು ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಪಾವಗಡದಲ್ಲಿ ಮುವ್ವತ್ತು, ನಲವತ್ತು ವರ್ಷಗಳಿಂದಲೂ "ಕುಂಚ ಕೊರಚವೆಂಬ" ಗುಡ್ಡಗಾಡು ಜನಸಮುದಾಯವೊಂದು ವಾಸವಾಗಿದೆ. ಮೂಲತ: ಆಂಧ್ರ ಅರಣ್ಯವಾಸಿಗಳಾಗಿರುವ ಈ ಜನಾಂಗ ಬದುಕನ್ನು ಅರಸಿ ಕರ್ನಾಟಕದ ಗಡಿಭಾಗದ ಹತ್ತು ಹಲವು ಹಳ್ಳಿಗಳಲ್ಲಿ ಹರಡಿಕೊಂಡಿದ್ದಾರೆ. ಊರಿನಾಚೆಯಿರುವ ಸಿಂಧಿ ಬನಗಳಿಂದ ಗಳವುಗಳನ್ನು (ಸಿಂಧಿ ಪೊರಕೆ) ಹಿರಿದು ತಂದು ಚಾಪೆ, ಕಸಬರಿಗೆ (ಪೊರಕೆ), ಬುಟ್ಟಿ, ಚಿಕ್ಕಮಕ್ಕಳಾಡುವ ಗಿಲಿಗಿಲಿ ಮುಂತಾದವುಗಳನ್ನು ತಯಾರಿಸಿ ಮಾರುವುದು. ಆದರಿಂದ ಬಂದ ಅಲ್ಪಸ್ವಲ್ಪ ಆದಾಯದಲ್ಲಿ ಜೀವನ ನಿರ್ವಹಿಸುವುದನ್ನು ರೂಢಿಸಿಕೊಂಡು ಬಂದವರು ಅವರು. 2005 ರಲ್ಲಿ ಈ ಸಮುದಾಯದ ವಿಧವೆಯೊಬ್ಬಳನ್ನು ಹಣಕ್ಕೆ ಹರಾಜು ಹಾಕಲಾಗಿತ್ತು ಎಂಬ ಸುದ್ದಿಯೊಂದು ಪತ್ರಿಕೆಗಳಲ್ಲಿ ವರದಿಯಾದುದನ್ನು ಗಮನಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನಿಯೋಗವೊಂದು ದಿನಾಂಕವೊಂದು ದಿನಾಂಕ 15.02.2011 ರಂದು ಸ್ಥಳಕ್ಕೆ ಬೇಟಿ ನೀಡಿತ್ತು. ಆ ಸಂದರ್ಭದಲ್ಲಿ ಬೆಳಕಿಗೆ ಬಂದ ಅಂಶಗಳು ಆಘಾತಕಾರಿಯಾಗಿದ್ದವಷ್ಟೇ ಅಲ್ಲ. ಸಾಮಾಜಿಕವಾಗಿ ತುಂಬಾ ಕುತೂಹಲಕಾರಿಯಾಗಿದ್ದವು.



ಅತಂತ್ರಗೊಂಡಿರುವ ಬದುಕು

ಆಧುನಿಕೋತ್ತರ ಜೀವನ ವಿಧಾನದಲ್ಲಿ ಬದಲಾವಣೆಗಳು ಕಾಣಿಸಿಕೊಂಡಂತೆ ಹಲವಾರು ಅಂಚಿನ ಸಮುದಾಯಗಳು ತಮ್ಮ ವೃತ್ತಿ ಮತ್ತು ಅದರಿಂದ ದಕ್ಕುವ ಆದಾಯದ ಮೂಲಗಳನ್ನು ಕಳೆದುಕೊಂಡದ್ದೂ ಇದೆ. ಅವುಗಳ ಪೈಕಿ ಅತಿ ಹೆಚ್ಚು ತೊಂದರೆಗೆ ಒಳಗಾದವರಲ್ಲಿ ಕೊಂಚ ಕೊರಚರು ಪ್ರಧಾನವಾಗಿ ಗಮನ ಸೆಳೆಯುತ್ತಾರೆ. ಪ್ಲಾಸ್ಟಿಕ್‌ನ ಬಳಕೆ ಸಾರ್ವತ್ರಿಕವಾದಂತೆ, ಸಿಂಧಿ ಪೊರಕೆ, ಚಾಪೆ ಮುಂತಾದವುಗಳಿಗೆ ಬೇಡಿಕೆ ಇಲ್ಲದಂತಾಗಿ ಕೊರಚರ ಬದುಕು ಮೂರಾಬಟ್ಟೆಯಾಗಿ ಹೋಗಿದೆ. ಇದರ ಪರಿಣಾಮ ಅವರ ಬದುಕಿನಲ್ಲಿ ಹಿಂದೆಂದೂ ಕಂಡು ಕೇಳರಿಯದಂಥ ಆಘಾತಕಾರಿ ವಿದ್ಯಮಾನಗಳು ಸಂಭವಿಸುತ್ತಿವೆ. ಕೊರಚರ ಮಹಿಳೆಯರ ಮೇಲೆ ಜಾಗತೀಕರಣದ ದುಷ್ಪರಿಣಾಮಗಳು ಎಷ್ಟರಮಟ್ಟಿಗೆ ಎರಗಿವೆ ಎಂದರೆ ಆ ಸಮುದಾಯದ ವಿಧವಾ ಮಹಿಳೆಯರನ್ನು ಹರಾಜಿಗೆ ಹಾಕುವ ಪರಿಪಾಠವೊಂದು ಸುರುವಿಟ್ಟುಕೊಂಡಿದೆ. ಅಲ್ಲಿ ನಡೆದದ್ದು ಇಷ್ಟು. ಕೊರಚರ ಜನಾಂಗದ ನಾಗಮ್ಮ ಎಂಬ ಮಹಿಳೆಯೊಬ್ಬಳನ್ನು ಕೆಲವು ವರ್ಷಗಳ ಹಿಂದೆ ಪಕ್ಕದ ಆಂಧ್ರದ ಗಡಿ ಹಳ್ಳಿಯೊಂದರ ವ್ಯಕ್ತಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಗಂಡನ ಮನೆಯಲ್ಲಿ 5 ರಿಂದ 6 ವರ್ಷಗಳಷ್ಟು ದಿನಮಾನ ಕಳೆಯುವುದರಲ್ಲಿ ನಾಲ್ಕು ಹೆಣ್ಣು ಮಕ್ಕಳನ್ನು ಕೊಟ್ಟು ಅವಳ ಗಂಡ ತೀರಿಕೊಂಡನು. ದಿಕ್ಕುಕಾಣದ ನಾಗಮ್ಮ ನಾಲ್ಕು ಪುಟ್ಟ ಹಸುಳೆಗಳನ್ನು ಕಟ್ಟಿಕೊಂಡು ತವರುಮನೆಗೆ ಬಂದುಬಿಟ್ಟಿದ್ದಾಳೆ. ಕೊರಚರ ಸಮುದಾಯಗಳಲ್ಲಿ ವಿಧವಾ ಪುನರ್‌ವಿವಾಹಕ್ಕೆ ಅವಕಾಶವಿದೆ. ಗಂಡನ ಮನೆಯವರು ಅಂದರೆ ವಿಧವೆಯ ಅತ್ತೆ, ಮಾವ, ಭಾವ, ಮೈದುನ ಮುಂತಾದವರು ಸೇರಿಕೊಂಡು ಅವಳ ಒಪ್ಪಿಗೆಯೂ ಪಡೆದುಕೊಂಡು ಕೈಹಿಡಿಯಲು ಮುಂದೆ ಬಂದ ಅವರದೇ ಜಾತಿಯ ಪುರುಷನೊಂದಿಗೆ ಮದುವೆ ಮಾಡುವ ಸಂಪ್ರದಾಯ ಅವರಲ್ಲಿದೆ. ಕೊರಚರಲ್ಲಿ ವರದಕ್ಷಿಣೆ ಪಿಡುಗು ಇಲ್ಲ. ಆದರೆ ಮದುವೆ ಸಂದರ್ಭದಲ್ಲಿ ಆಗಿರುವ ಖರ್ಚಿನಲ್ಲಿ ಮೂರು ಭಾಗ ಮಾಡಿ ಎರಡು ಭಾಗವನ್ನು ಗಂಡಿನವರು ಮತ್ತು ಒಂದು ಭಾಗವನ್ನು ಹೆಣ್ಣಿನವರು ಭರಿಸಬೇಕೆಂಬ ನಿಯಮವಿದೆ. ಆದ್ದರಿಂದ ವಿಧವೆಯನ್ನು ಮರುವಿವಾಹವಾಗಲಿರುವ ಗಂಡನು ಮೊದಲ ಮದುವೆಯಲ್ಲಾದ ಗಂಡನ ಮನೆಯವರ ಖರ್ಚಿನ ಭಾಗವನ್ನು ಅವರಿಗೆ ಕೊಟ್ಟು ಆಕೆಯ ಕೈಹಿಡಿಯಬೇಕೆಂದು ಅವರಲ್ಲಿ ನಿಯಮವಿದೆಯಂತೆ. ಇದಕ್ಕೆ ಹೊರತಾಗಿ ಜಾತಿ ಪಂಚಾಯತಿಯಲ್ಲಿ ನಿರ್ಣಯವಾಗುವ ನಿಯಮಗಳನ್ನು ಎರಡೂ ಕಡೆಯವರು ಪಾಲಿಸಬೇಕೆಂಬ ವಿಧಿ ಇದೆಯಂತೆ.

ವಿಪರ್ಯಾಸ !

ಆದರೆ ಇದೇ ನಿಯಮವೇ ಇವತ್ತು ಕೊರಚ ಮಹಿಳೆಯರ ಬದುಕಿನಲ್ಲಿ ವರವಾಗುವ ಬದಲು ಶಾಪವಾಗಿ ಪರಿಣಮಿಸಿದೆ. ನಾಗಮ್ಮನ ಮಾವನು ಅವಳಿಗೆ ತಿಳಿಯದಂತೆ ತಮ್ಮದೇ ಊರಿನ ದುಡ್ಡಿದ್ದವನೊಬ್ಬನಿಗೆ ಸೊಸೆಯನ್ನು 20 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿದ್ದಾನೆ. ಹಣ ಕೊಟ್ಟು ಖರೀದಿಸಿದಾತ ನಾಗಮ್ಮನನ್ನು ಕರೆದೊಯ್ಯಲೆಂದು ಪಾವಗಡಕ್ಕೆ ಬಂದಿದ್ದಾನೆ. ನಾಗಮ್ಮನನ್ನು ತನ್ನೊಂದಿಗೆ ಬರುವಂತೆ ದಾಳಿ ಮಾಡಿದ್ದಾನೆ. ನಾಲ್ಕು ಪುಟ್ಟ ಮಕ್ಕಳನ್ನು ಬಿಟ್ಟು ಇನ್ನೊಬ್ಬನೊಂದಿಗೆ ಕೂಡಿಕೆ ಮಾಡಿಕೊಳ್ಳಲು ಇಷ್ಟವಿಲ್ಲದ ನಾಗಮ್ಮ ಪ್ರತಿಭಟಿಸಿದ್ದಾಳೆ. ಮರುಮದುವೆಗೆ ಧಿಕ್ಕಾರ ಹೇಳಿದ್ದಾಳೆ. ಆದರೆ ಹಣಬಲ ಮತ್ತು ತೋಳ್ಬಲ ಹೊಂದಿರುವ ಆತ ಮರುದಿನ ಗೂಂಡಾಪಡೆಯನ್ನು ಕಟ್ಟಿಕೊಂಡು ನಾಗಮ್ಮನನ್ನು ಜಬರ್‌ದಸ್ತಿನಿಂದ ಹೊತ್ತೊಯ್ಯಲು ಮುಂದಾದಾಗ ಅದ್ಹೇಗೋ ಅವಳು ತಪ್ಪಿಸಿಕೊಂಡು ಪೊಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಟ್ಟಿದ್ದಾಳೆ.

ದೊಡ್ಡ ಪರಿಹಾರ ಘೋಷಣೆ ಚಿಕ್ಕಾಸೂ ದಕ್ಕಲಿಲ್ಲ

2005 ರಲ್ಲಿ ಈ ಘಟನೆ ನಡೆದು ತಕ್ಷಣವೇ ಸುದ್ದಿಮಾಧ್ಯಮಗಳಲ್ಲಿ ವಿಷಯ ಬಿತ್ತರಗೊಂಡು ಆಡಳಿತ ಯಂತ್ರ ಎಚ್ಚರಗೊಂಡು ತಪ್ಪಿತಸ್ಥನನ್ನು ಬಂಧಿಸಿದ್ದಾರೆ. ನಾಗಮ್ಮನ ಬಡತನದ ಬವಣೆಯನ್ನು ಪರಿಗಣಿಸಿ ಅವಳ ಕುಟುಂಬಕ್ಕೆ 20x40 ರ ಸೈಟು ಮನೆ ಕಟ್ಟಿಕೊಳ್ಳಲು ಸಾಲ, ಹೈನುಗಾರಿಕೆಗೆ ಸಾಲ, ಉದ್ಯೋಗಿನಿ ಸಾಲ, ಆಧಾರ ಸಾಲ ಹೀಗೆ ಹತ್ತುಹಲವು ಸೌಲಭ್ಯಗಳನ್ನು ಸಂಬಂಧಪಟ್ಟ ಇಲಾಖೆಯವರು ಘೋಷಿಸಿದ್ದಾರೆ. ಆದರೆ ವ್ಯಂಗ್ಯವೆಂದರೆ ಈ ಘೋಷಿತ ಸೌಲಭ್ಯಗಳ ಪೈಕಿ ಒಂದು ಚಿಕ್ಕಾಸು ಇವತ್ತಿನವರೆಗೂ ಅವಳ ಕೈ ತಲುಪಿಲ್ಲ. ಹೀಗೆ ಮಾಧ್ಯಮಗಳಲ್ಲಿ ಪ್ರಚಾರವಾದದ್ದು ನಾಗಮ್ಮ ಮತ್ತು ಒಟ್ಟು ಕೊರಚರ ಬದುಕಿಗೆ ದಾರಿಯಾಗುವ ಬದಲು ಅವರನ್ನು ಅಸಹಾಯಕರನ್ನಾಗಿ ಮಾಡಿದೆ. ಅಸಲಿಗೆ ಅಲ್ಲಿ ನಂತರ ಸಂಭವಿಸಿದ ವಿದ್ಯಮಾನಗಳು ನಾಗರಿಕ ಪ್ರಪಂಚದ ಅರಿವಿಗೆ ಬರದಂತೆ ಅವರದೇ ಜಾತಿ, ನಂಬಿಕೆಗಳು ನೋಡಿಕೊಂಡಿವೆ. ಈ ಘಟನೆ ಜರುಗಿನ ನಂತರ ಎರಡು ತಿಂಗಳ ತರುವಾಯ ಜೈಲು ಸೇರಿದ ಅಪರಾಧಿ ಖುಲಾಸೆಯಾಗಿ ಹೊರಬಂದಿದ್ದಾನೆ. ಹೀಗೆ ಬಂದವನು ನಾಗಮ್ಮನ ಮಾವನ ಬಳಿ ಹೋಗಿ ತಾನು ಕೊಟ್ಟಿದ್ದ ಹಣವನ್ನು ತನಗೆ ವಾಪಸ್ಸು ಕೊಡಬೇಕೆಂದು ಧಮಕಿ ಹಾಕಿದ್ದಾನೆ. ಯಾವನಾದರೂ ತಾನು ಹಣ ಪಡೆದು



ನ್ಯಾಯದ ಪ್ರಕಾರ ತನ್ನ ಸೊಸೆಯನ್ನು ಒಪ್ಪಿಸಿರುವುದಾಗಿಯೂ, ಅವಳನ್ನು ಮದುವೆ ಮಾಡಿಕೊಂಡು ಹೋಗುವ ಜವಾಬ್ದಾರಿ ನಿನ್ನದು. ತನ್ನ ಬಳಿ ಹಣ ಇಲ್ಲ ಎಂದು ದಬಾಯಿಸಿದ್ದಾನೆ. ಆಗ ಈ ವ್ಯಕ್ತಿ ನಾಗಮ್ಮನ ಊರವರು ಮತ್ತು ತನ್ನೂರಿನವರನ್ನು ಸೇರಿಸಿ ಜಾತಿ ಪಂಚಾಯತಿ ನೆರೆಸಿದ್ದಾನೆ. ಕೊರಚರ ಜಾತಿ ಪಂಚಾಯಿತಿ ಎಂದರೆ ಲಂಬಾಣಿ ಮತ್ತು ಇತರ ಗುಡ್ಡಗಾಡು ಜನರ ಪಂಚಾಯತಿಗಳಂತೆ ತುಂಬಾ ಕಠೋರ ಮತ್ತು ಅನುಲಂಘನೀಯ.

'ಪುರುಷ ನ್ಯಾಯ'

ಈವರೆಗೂ ಆಧುನೀಕರಣಕ್ಕಾಗಲೀ, ಬದಲಾದ ಜೀವನ ವಿಧಾನಕ್ಕಾಗಲಿ ಕಿಂಚಿತ್ತೂ ತೆರೆದುಕೊಂಡಿರದ ಅವರ ಜಾತಿಯ ಪುರುಷರು ನಾಗಮ್ಮ ಮತ್ತು ಅವಳ ಅಣ್ಣನಾದ ಸಂಕಪ್ಪನನ್ನು ಕರೆಸಿ ಈಗ ನಾಗಮ್ಮನು ಹಣ ಕೊಟ್ಟವನೊಂದಿಗೆ ಬಾಳ್ವೆ ಮಾಡಲು ಹೋಗಬೇಕು. ಇಲ್ಲವಾದರೆ ಅವನ ಹಣವನ್ನು ಅವನಿಗೆ ಮರಳಿಸಬೇಕೆಂದು ಫರ್ಮಾನು ಹೊರಡಿಸಿದ್ದಾರೆ. ನಾಗಮ್ಮ ಈಗ ತವರುಮನೆಯಲ್ಲಿ ಇರುತ್ತಿದ್ದಾಳೆ. ಆದ್ದರಿಂದ ತವರಿನವರೇ ಆ ಹಣವನ್ನು ಪಾವತಿಸಬೇಕು. ಕೇಸು ವಾಪಸ್ಸು ಪಡೆಯಬೇಕು. ಪರಸ್ಪರ ಒಬ್ಬರ ತಂಟೆಗೆ ಇನ್ನೊಬ್ಬರು ಬರಬಾರದು ಎಂದು ನ್ಯಾಯದಾನ ಮಾಡಿದ್ದಾರೆ. ಆತ ನಾಗಮ್ಮನಿಗೆ ಮುಟ್ಟಬಾರದು. ನಾಗಮ್ಮನ ಜವಾಬ್ದಾರಿ ಹೊತ್ತುಕೊಂಡವರು ಆತನ ಹಣ ಮರಳಿಸಬೇಕು. ಇದರಲ್ಲಿ ಯಾರೇ ನಿಯಮ ಮೀರಿದರೂ ಅವರನ್ನು ಜಾತಿಯಿಂದ ಬಹಿಷ್ಕರಿಸುವುದಾಗಿ ಘೋಷಿಸಿದ್ದಾರೆ.

ಸಂಖ್ಯಾದೃಷ್ಟಿಯಿಂದ ತೀರ ಸಣ್ಣ ಮತ್ತು ಸಂಕೀರ್ಣ ಸಮುದಾಯವಾಗಿರುವ ಇಂಥ ಜನಾಂಗಗಳು ತಮ್ಮ ಸಮುದಾಯದಾಚೆ ಪರ್ಯಾಯ ಕಂಡುಕೊಳ್ಳಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಅವರ ಜಾತಿ ತೀರ್ಮಾನಗಳು ಯಾವುದೇ ನಾಗರೀಕ ನ್ಯಾಯ ವ್ಯವಸ್ಥೆಗೆ ಜಗ್ಗದಷ್ಟು ಬಲಿಷ್ಠವಾಗಿರುತ್ತವೆ. ಕೋರ್ಟು, ಕಛೇರಿ, ಪೊಲೀಸ್ ವ್ಯವಸ್ಥೆಯಿಂದ ದೂರವೇ ಉಳಿಯುವಂತೆ ಇವರ ಜಾತಿಗೋಡೆಗಳು ಇವರನ್ನು ಕಾಪಿಟ್ಟುಕೊಂಡುಬಂದಿವೆ.

'ನೀರಡಿಕೆ ಯಾರಿಗೆ?'!

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಸಮೀಕ್ಷೆಯ ಸಂದರ್ಭದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ದಿಗ್ಮೂಢರನ್ನಾಗಿ ಮಾಡಿದ್ದು ಏನೆಂದರೆ, ನಮ್ಮ ಆಡಳಿತ ಯಂತ್ರವು ಕುಂಚ ಕೊರಚರ ಬದುಕಿನ ಅಸಹಾಯಕತೆ, ಅಜ್ಞಾನ, ಮೌಢ್ಯಗಳನ್ನು ತಿಳಿದೂ ತಿಳೀಯದವರಂತೆ ವರ್ತಿಸಿದ್ದು. ನಾಗಮ್ಮನಿಗೆ 2005 ರಲ್ಲಿ ಘೋಷಣೆಯಾದ ಸೌಲಭ್ಯಗಳ ಪೈಕಿ ಒಂದು ಚಿಕ್ಕ ಬಿಡಿಗಾಸು ಸೌಲಭ್ಯ ಈವರೆಗೆ ಮುಟ್ಟಿಲ್ಲವಲ್ಲ ಯಾಕೆ? ಎಂದು ಕೇಳಿದರೆ: ಅವರು ಹೇಳಿದ್ದೇನೆಂದರೆ ಯಾರಿಗೆ ಈ ಸೌಲಭ್ಯ ಬೇಕೋ? ಅವರೇ ಬಂದು ಕೇಳಿಲ್ಲವಲ್ಲ? ನಾವೇನು ಮಾಡೋಣ. ನೀರಡಿಸಿದವರ ಬಳಿ ಭಾವಿ ಬರಬೇಕೆ? ಅಥವಾ ಭಾವಿಯೇ ನೀರಡಿಸಿದವರ ಬಳಿ ಬಂದೀತೆ? ಎಂದು ಉಪಮೇಯ ತರ್ಕವೊಂದನ್ನು ಅಲ್ಲಿ ಅಧಿಕಾರಿಗಳು ಹೆಣೆಯುತ್ತಾರೆ. ಆಶ್ಚರ್ಯವೆಂದರೆ ನಾಗಮ್ಮ ತನ್ನ ಅಬಲೆ ಹೆಣ್ಣುಗಳೊಂದಿಗೆ ಇವತ್ತಿಗೂ ಜೋಪಡಿಯಲ್ಲಿ ಬದುಕುತ್ತಿದ್ದಾಳೆ. ಕುಡಿಯುವ ನೀರಿಗೆ ಹಾಹಾಕಾರವಿರುವ ಪಾವಗಡದಲ್ಲಿ ಎಲ್ಲ ಕೊರಚರು ರೂಪಾಯಿಗೊಂದು ಕೊಡದಂತೆ ನೀರು ಖರೀದಿಸಿ ಕುಡಿಯುತ್ತಿದ್ದಾರೆ. ಅವರಲ್ಲಿ ಅನೇಕರಿಗೆ ಬಿಪಿಎಲ್ ಕಾರ್ಡುಗಳಿಲ್ಲ. ಅವರ ಮೊರೆ ಕೇಳುವವರಾದರೂ ಯಾರು?

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12,18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH